# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಬುಧವಾರ, ಮಾರ್ಚ್ 24, 2021

ಸಂಪುಟ : 47 ಸಂಚಿಕೆ : 324 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 6 ರೂ : 4.00 www.janathavani.com janathavani@mac.com


## ಏ.1ರಿಂದ 45 ವರ್ಷ ಮೀರಿದ ಎಲ್ಲರಿಗೂ ಕೊರೊನಾ ಲಸಿಕೆ



ನವದೆಹಲಿ ಮಾ. 23 – ಬರುವ ಏಪ್ರಿಲ್ 1ರಿಂದ 45 ವರ್ಷ ಮೀರಿದ ಎಲ್ಲರೂ ಕೊರೊನಾ ಲಸಿಕೆ ಪಡೆಯಬಹುದು ಎಂದು ಕೇಂದ್ರ ಸಚಿವ ಪ್ರಕಾಶ್ ಜಾವಡೇಕರ್ ತಿಳಿಸಿದ್ದಾರೆ.

ಸಂಪುಟದಲ್ಲಿ ತೆಗೆದುಕೊಂಡ ಈ ನಿರ್ಧಾರವನ್ನು ಪತ್ರಕರ್ತರಿಗೆ ತಿಳಿಸಿರುವ ಸಚಿವರು, ಯಾವುದೇ ಸಹ ಅಸ್ವಸ್ಥತೆ ಇಲ್ಲದ 45 ವರ್ಷ ಮೀರಿದವರು ಲಸಿಕೆ ಪಡೆಯಬಹುದು. ಲಸಿಕೆ ಪಡೆಯಲು ಬಯಸುವವರು ಅದಕ್ಕಾಗಿ ನೋಂದಣಿ ಮಾಡಿಸಬೇಕು ಎಂದವರು ತಿಳಿಸಿದ್ದಾರೆ.

ಜನವರಿ 16ರಿಂದ ದೇಶದಲ್ಲಿ ಲಸಿಕೆ ಅಭಿಯಾನ ಆರಂಭವಾಗಿದೆ. ಮೊದಲ ಹಂತದಲ್ಲಿ ಆರೋಗ್ಯ ಕಾರ್ಯಕರ್ತರು ಹಾಗೂ ಮುಂಚೂಣಿ ಕಾರ್ಯಕರ್ತರಿಗೆ ಲಸಿಕೆ ನೀಡಲಾಗಿತ್ತು. ನಂತರ ಮಾರ್ಚ್ 1ರಿಂದ 60 ವರ್ಷ ಮೀರಿದವರು ಹಾಗೂ 45 ವರ್ಷ ಮೀರಿದ ಸಹ ಅಸ್ವಸ್ಥತೆ ಉಳ್ಳವರು ಲಸಿಕೆ ಪಡೆಯಲು ಅವಕಾಶ ನೀಡಲಾಗಿತ್ತು.

## ಹರಿಹರ ತಾ.ಪಂ.ಅಧ್ಯಕ್ಷರಾಗಿ ಆದಾಪುರದ ವೀರಭದ್ರಪ್ಪ ಆಯ್ಕೆ

ಹರಿಹರ, ಮಾ.23- ತಾಲ್ಲೂಕು ಪಂಚಾಯ್ತಿ ಅಧ್ಯಕ್ಷರಾಗಿ ಕಾಂಗ್ರೆಸ್‌ನ ಆದಾಪುರದ ವೀರಭದ್ರಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ದಾವಣಗೆರೆ ಉಪವಿಭಾಗಾಧಿಕಾರಿ ಮಮತಾ ಹೊಸಗೌಡ್ರು ತಿಳಿಸಿದರು.

ತಾ.ಪಂ. ಅಧ್ಯಕ್ಷೆ ಶ್ರೀದೇವಿ ಮಂಜಪ್ಪ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಇಂದು ನಿಗದಿಯಾದ ಚುನಾವಣೆಗೆ ದಾವಣಗೆರೆ ಉಪವಿ ಭಾಗಾಧಿಕಾರಿ ಮಮತಾ ಹೊಸಗೌಡ್ರು ಚುನಾವಣೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ನಿಗದಿ ಪಡಿಸಿದಂತೆ ತಾ.ಪಂ. ಅಧ್ಯಕ್ಷರ ಚುನಾವಣೆಗೆ ಬೆಳಗ್ಗೆ 11 ಗಂಟೆಗೆ ಕಾಂಗ್ರೆಸ್ ಪಕ್ಷದ ಸದಸ್ಯ ಆದಾಪುರದ ವೀರಭದ್ರಪ್ಪನವರು ಮಾತ್ರ ನಾಮಪತ್ರ ಸಲ್ಲಿಸಿದರು. ಮಧ್ಯಾಹ್ನ ಒಂದು ಗಂಟೆಗೆ ಚುನಾವಣೆ ಪ್ರಕ್ರಿಯೆ ಮುಂದುವರೆಯಿತು.

ತಾ.ಪಂ. 14 ಸದಸ್ಯರಲ್ಲಿ 12 ಸದಸ್ಯರು ಹಾಜರಿದ್ದರು. ಸದಸ್ಯರಾದ ಕೊಂಡಜ್ಜಿ ಪ್ರೇಮ ಹಾಗೂ ಕುಣೆ ಬೆಳಕೆರೆ ಮಹಾಂತೇಶ್ ಗೈರು ಹಾಜರಾಗಿ ದ್ದರು. ಎಸ್ಸಿ ಮೀಸಲಾತಿಯ ತಾ.ಪಂ. ಅಧ್ಯಕ್ಷ ಸ್ಥಾನಕ್ಕೆ ಆದಾಪುರದ ವೀರಭದ್ರಪ್ಪನವರನ್ನು ಬಿಟ್ಟರೆ ಉಳಿದ ಯಾವುದೇ ಸದಸ್ಯರು (2ನೇ ಪುಟಕ್ಕೆ)

# ಜಿಲ್ಲೆಯಲ್ಲಿ ಪಾಸಿಟಿವಿಟಿ ಹೆಚ್ಚಳ

## ಹೋಂ ಐಸೋಲೇಷನ್ ಇದ್ದವರ ಮನೆಗೆ ಸ್ಟಿಕ್ಕರ್ ಅಂಟಿಸಲು ಡಿಸಿ ಸೂಚನೆ

ದಾವಣಗೆರೆ, ಮಾ.23 - ಕೋವಿಡ್ ವ್ಯಾಪಕ ಹರಡುವಿಕೆಯನ್ನು ತಡೆಗಟ್ಟುವ ಸಲುವಾಗಿ ಸೋಂಕು ದೃಢಪಟ್ಟು ಹೋಂ ಐಸೋಲೇಷನ್‌ನಲ್ಲಿ ಇರುವವರ ಮನೆಗೆ 'ಕೋವಿಡ್ ಹೋಂ ಐಸೋಲೇಷನ್' ಎಂಬ ಬರಹವುಳ್ಳ ಸ್ಟಿಕ್ಕರ್ ಅಂಟಿಸುವಂತೆ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಡಳಿತ ಭವನದ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಏರ್ಪಡಿಸಿದ್ದ ಜಿಲ್ಲೆಯ ವೈದ್ಯಕೀಯ ತಜ್ಞರ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರಸ್ತುತ ದಾವಣಗೆರೆ ನಗರದಲ್ಲಿ ಕೋವಿಡ್ ಸೋಂಕು ದೃಢಪಟ್ಟ 28 ಜನ ಹೋಂ ಐಸೋಲೇಷನ್‌ನಲ್ಲಿ ಇದ್ದು, ಇವರು ಹೊರಗಡೆ ಎಲ್ಲಿಯೂ ಓಡಾಡದೆ, ಸಮರ್ಪಕವಾಗಿ ಹೋಂ ಕ್ವಾರಂಟೈನ್‌ನಲ್ಲಿ ಇರಬೇಕು. ಇವರಿಂದ ಬೇರೆಯವರಿಗೆ ಸೋಂಕು ಹರಡದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳುವುದು ಅನಿವಾರ್ಯವಾಗಿದೆ. ಹೀಗಾಗಿ ಎಚ್ಚರಿಕೆ ವಹಿಸುವ ಸಲುವಾಗಿ, ಹಾಗೂ ಆರೋಗ್ಯ ಕಾರ್ಯಕರ್ತರು ಸಮರ್ಪಕ ವೈದ್ಯಕೀಯ ನೆರವು ನೀಡುವ ಸಲುವಾಗಿ, ಹೋಂ ಐಸೋಲೇಷನ್ ಇರುವವರ ಮನೆಗೆ ಸ್ಟಿಕ್ಕರ್ ಅಂಟಿಸುವಂತೆ ಸೂಚಿಸಿದರು.

**ಪಾಸಿಟಿವಿಟಿ ಹೆಚ್ಚಳ ಆತಂಕ :** ಕಳೆದ ತಿಂಗಳು ಕಡಿಮೆ ಸಂಖ್ಯೆಯಲ್ಲಿ ಕಂಡುಬರುತ್ತಿದ್ದ ಕೋವಿಡ್ ಸೋಂಕು ಪ್ರಕರಣಗಳು ಮಾರ್ಚ್ ಮೂರನೇ ವಾರದಲ್ಲಿ ಹೆಚ್ಚಳವಾಗಿರುವುದು ಕಂಡುಬಂದಿದೆ.

### ಮಾಸ್ಕ್ ರಹಿತರಿಗೆ ದಂಡ ವಿಧಿಸಲು ಗುರಿ ನಿಗದಿ



**ಕೋವಿಡ್ ಹರಡುವುದನ್ನು ತಡೆಗಟ್ಟಲು ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಿದ್ದು, ಸಾರ್ವಜನಿಕ ಪ್ರದೇಶದಲ್ಲಿ ಮಾಸ್ಕ್ ಧರಿಸದವರನ್ನು ಪತ್ತೆ ಹಚ್ಚಿ ದಂಡ ವಿಧಿಸಲು ಜಿಲ್ಲಾಧಿಕಾರಿಗಳು ಗುರಿ ನಿಗದಿಪಡಿಸಿ ಸೂಚನೆ ನೀಡಿದರು.**

**ಪ್ರತಿ ಪೊಲೀಸ್ ಠಾಣೆಗೆ ನಿತ್ಯ 100 ಜನ ಮಾಸ್ಕ್ ರಹಿತರನ್ನು ಪತ್ತೆಹಚ್ಚಿ ದಂಡ ವಿಧಿಸಲು ಗುರಿ ನಿಗದಿಪಡಿಸಲಾಯಿತು. ಅದೇ ರೀತಿ ಪ್ರತಿ ವಾರ್ಡ್‌ಗೆ 10, ಪಟ್ಟಣ ಪ್ರದೇಶದಲ್ಲಿ ನಿತ್ಯ 100, ಗ್ರಾಮ ಪಂಚಾಯತ್ ಮಟ್ಟದಲ್ಲೂ ಮಾಸ್ಕ್ ಧರಿಸದವರಿಗೆ ದಂಡ ವಿಧಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳು ಸೂಚಿಸಿದ್ದಾರೆ.**

ಮಾರ್ಚ್ ಎರಡನೇ ವಾರದಲ್ಲಿ ಕೋವಿಡ್ ಪಾಸಿಟಿವ್ ಪ್ರಕರಣಗಳು 23 ವರದಿಯಾಗಿದ್ದು, ಪಾಸಿಟಿವಿಟಿ ಪ್ರಮಾಣ ಶೇ. 0.19 ರಷ್ಟು ಇತ್ತು. ಇದೀಗ ಮಾರ್ಚ್ ಮೂರನೇ ವಾರದಲ್ಲಿ 40 ಪ್ರಕರಣಗಳು ವರದಿಯಾಗಿದ್ದು, ಪಾಸಿಟಿವಿಟಿ ಪ್ರಮಾಣ 0.29 ಕ್ಕೆ ಹೆಚ್ಚಳವಾಗಿರುವುದು ಆತಂಕಕಾರಿಯಾಗಿದೆ ಎಂದರು.

ಜಿಲ್ಲೆಯಲ್ಲಿ ನಿಗದಿಗಿಂತಲೂ ಹೆಚ್ಚು ಆರ್‌ಟಿಪಿಸಿಆರ್ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ರೋಗ ಲಕ್ಷಣ ಇರುವವರು ಪರೀಕ್ಷೆಗೆ ಒಳಪಡುತ್ತಿದ್ದಾರೆ ಹೀಗಾಗಿ ಪರೀಕ್ಷೆಯಲ್ಲಿ ಯಾವುದೇ ತೊಂದರೆ ಇಲ್ಲ. ಶಾಲಾ ಮಕ್ಕಳು ಮತ್ತು ಹಾಸ್ಟೆಲ್ ಮಕ್ಕಳಿಗೆ ನಿಯಮಿತವಾಗಿ ಕೋವಿಡ್ ಪರೀಕ್ಷೆ ನಡೆಸುವಂತೆ ಸರ್ಕಾರ ಸೂಚನೆ ನೀಡಿದ್ದು, ಅದರಂತೆ ಕ್ರಮ ವಹಿಸಲಾಗಿದೆ ಎಂದು ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ. ರಾಘವನ್ ಹೇಳಿದರು.

ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಗಳು, ಪರೀಕ್ಷೆಗೆ ಮಾದರಿಯನ್ನು ಸಮರ್ಪಕವಾಗಿ, ಕ್ರಮಬದ್ಧವಾಗಿ ಸಂಗ್ರಹಿಸುತ್ತಿಲ್ಲ ಎಂಬ ದೂರು ಇದೆ. ಹೀಗಾಗಿ ಮಾದರಿ ಸಂಗ್ರಹಿಸುವವರು, ಕ್ರಮಬದ್ಧವಾಗಿ ಪರೀಕ್ಷೆಗೆ ಮಾದರಿ ಸಂಗ್ರಹಿಸುವಂತೆ ಕ್ರಮ ಕೈಗೊಳ್ಳಬೇಕು. ಸೋಂಕಿತರ ಕನಿಷ್ಟ 15 ಜನ ಪ್ರಾಥಮಿಕ ಹಾಗೂ ಕನಿಷ್ಟ 40 ದ್ವಿತೀಯ ಸಂಪರ್ಕಿತರ ಪರೀಕ್ಷೆ ಮಾಡಬೇಕು. ಸೋಂಕಿತರ ಪ್ರಯಾಣ ವಿವರವನ್ನು ಸಂಗ್ರಹಿಸಬೇಕು. ಒಂದು ವೇಳೆ ವಿವರ ನೀಡಲು ನಿರಾಕರಿಸಿದರೆ ಅಥವಾ ಅಸಹಕಾರ ತೋರಿದರೆ ಪೊಲೀಸ್ ನೆರವು ಪಡೆಯುವಂತೆ ಸೂಚಿಸಿದರು.

**ಮಾರ್ಚ್ 3ನೇ ವಾರ 40 ಪ್ರಕರಣ ಪಾಸಿಟಿವಿಟಿ ಪ್ರಮಾಣ 0.29ಕ್ಕೆ ಹೆಚ್ಚಳ**

**ಕೂಡಲೆ ಪರೀಕ್ಷೆಗೆ ಒಳಪಡಿ :** ಜ್ವರ, ಕೆಮ್ಮು, ನೆಗಡಿ, ಎದೆ ಉರಿ, ಎದೆನೋವು ಮುಂತಾದ ರೋಗ ಲಕ್ಷಣ ಕಂಡುಬಂದಲ್ಲಿ, ಸಾರ್ವಜನಿಕರು ನಿರ್ಲಕ್ಷ್ಯ ಮಾಡದೆ ಅಥವಾ ಸಾಮಾನ್ಯ ಚಿಕಿತ್ಸೆಗೆ ಒಳಗಾಗದೆ, ಕೂಡೆ ಸಮೀಪದ ಆಸ್ಪತ್ರೆಗೆ ತೆರಳಿ ಆರ್‌ಟಿಪಿಸಿಆರ್ ಪರೀಕ್ಷೆ ಮಾಡಿಸಬೇಕು ಎಂದು ಮನವಿ ಮಾಡಿದರು.

**ಪರಿಸ್ಥಿತಿ ಎದುರಿಸಲು ಸಿದ್ಧರಾಗಿ :** ಜಿಲ್ಲೆಯಲ್ಲಿ ಎಂತಹದೇ ಪರಿಸ್ಥಿತಿ ಬಂದರೂ, ಸಮರ್ಥವಾಗಿ ಎದುರಿಸಲು ಜಿಲ್ಲಾಡಳಿತ ಸನ್ನದ್ಧವಾಗಬೇಕಿದೆ. ಕಳೆದ ವರ್ಷ ಹೆಚ್ಚು ಪ್ರಕರಣಗಳು ವರದಿಯಾಗುವ ಸಂದರ್ಭದಲ್ಲಿ ಜಿಲ್ಲಾಡಳಿತ ಕೈಗೊಂಡ ಕ್ರಮಗಳನ್ನೇ ಮತ್ತೆ ಕೈಗೊಳ್ಳಬೇಕಾಗಿ ಬರಬಹುದಾಗಿದ್ದು, ಎಲ್ಲ ಆಸ್ಪತ್ರೆಗಳು ತಮ್ಮ ಗರಿಷ್ಠ ಚಿಕಿತ್ಸಾ ಸಾಮರ್ಥ್ಯವನ್ನು ಸಿದ್ಧವಾಗಿರಿಸಿಕೊಳ್ಳಬೇಕು. ಜಿಲ್ಲಾ ಆಸ್ಪತ್ರೆಗೆ ಕಳೆದ ಬಾರಿ ಕೋಟಿ ಗಟ್ಟಲೆ ಹಣ ಖರ್ಚು ಮಾಡಿ ವಿವಿಧ ಉಪಕರಣಗಳನ್ನು ಪೂರೈಸಿದ್ದು, ಅವು ಎಲ್ಲವೂ ಸುಸ್ಥಿತಿಯಲ್ಲಿರುವಂತೆ ನೋಡಿಕೊಳ್ಳಬೇಕು. ಇಲ್ಲಿನ ಬಾಪೂಜಿ, ಎಸ್‌ಎಸ್., (2ನೇ ಪುಟಕ್ಕೆ)



**ಶಾಬನೂರು ತೇರು**

ದಾವಣಗೆರೆ ತಾಲ್ಲೂಕು ಶಾಬನೂರು ಶ್ರೀ ಆಂಜನೇಯ ಸ್ವಾಮಿ ರಥೋತ್ಸವ ಕೋವಿಡ್ ಹಿನ್ನೆಲೆಯಲ್ಲಿ ಮಂಗಳವಾರ ಮಧ್ಯರಾತ್ರಿ ಸರಳವಾಗಿ ನೆರವೇರಿತು.

## ರೂಪಾಂತರಿ ಸೋಂಕು ತೀವ್ರತೆ ಕಡಿಮೆ

ಚಂಡೀಘಡ, ಮಾ. 23 – ರಾಜ್ಯ ಸರ್ಕಾರ ಜಿನೋಮ್ ಸರಣಿಗಾಗಿ ಸಂಗ್ರಹಿಸಿದ್ದ 401 ಕೊರೊನಾ ಸೋಂಕುಗಳ ಮಾದರಿಯಲ್ಲಿ ಶೇ.81ರಷ್ಟು ಬ್ರಿಟನ್ ರೂಪಾಂತರಿ ಸೋಂಕು ಕಂಡು ಬಂದಿದೆ ಎಂದು ಪಂಜಾಬ್ ಮುಖ್ಯಮಂತ್ರಿ ಅಮರೀಂದರ್ ಸಿಂಗ್ ಹೇಳಿದ್ದಾರೆ.

ಕೊರೊನಾ ಪರಿಸ್ಥಿತಿಯ ಬಗ್ಗೆ ಕಳವಳ ವ್ಯಕ್ತಪಡಿಸಿರುವ ಅಮರೀಂದರ್ ಸಿಂಗ್, ಹೆಚ್ಚು ಜನರಿಗೆ ಲಸಿಕೆ ನೀಡಬೇಕಿದೆ. 60 (2ನೇ ಪುಟಕ್ಕೆ)

## ಚಕ್ರಬಡ್ಡಿಗೆ ಸುಪ್ರೀಂ ತಡೆ

**ಕಂತು ವಿನಾಯಿತಿ ಮುಂದುವರಿಕೆಗೆ ನಕಾರ**

ನವದೆಹಲಿ, ಮಾ. 23 – ಕೊರೊನಾ ಕಾರಣದಿಂದಾಗಿ ಕಳೆದ ವರ್ಷ ಸಾಲದ ಕಂತು ಮರು ಪಾವತಿಸಲು ನೀಡಲಾಗಿದ್ದ ಆರು ತಿಂಗಳ ವಿನಾಯಿತಿಗಾಗಿ ಚಕ್ರಬಡ್ಡಿ ಇಲ್ಲವೇ ದಂಡ ವಸೂಲಿ ಮಾಡದಂತೆ ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿದೆ. ಈಗಾಗಲೇ ಚಕ್ರಬಡ್ಡಿ ಹಾಗೂ ವಿನಾಯಿತಿ ವಸೂಲಿ ಮಾಡಿದ್ದರೆ ಮರಳಿಸುವಂತೆಯೂ ನ್ಯಾಯಾಲಯ ತಿಳಿಸಿದೆ.

ಆದರೆ, ಸಾಲ ಮರು ಪಾವತಿಯ ಗಡುವನ್ನು ಕಳೆದ ವರ್ಷದ ಆಗಸ್ಟ್ 31ರ ನಂತರದ ಅವಧಿಗೆ ವಿಸ್ತರಿಸಲಾಗದು ಎಂಬ ಕೇಂದ್ರ (2ನೇ ಪುಟಕ್ಕೆ)

## ಕುಡಿವ ನೀರಿನ ಸಮಸ್ಯೆ ಇಲ್ಲ



ದಾವಣಗೆರೆ,ಮಾ.23- ಬೇಸಿಗೆ ಸಂದರ್ಭದಲ್ಲಿ ನಗರದ ನಾಗರಿಕರಿಗೆ ಕುಡಿಯುವ ನೀರಿನ ಸಮಸ್ಯೆ ಇಲ್ಲ ಎಂದು ಮಹಾನಗರ ಪಾಲಿಕೆ ಮಹಾಪೌರರಾದ ಎಸ್.ಟಿ. ವೀರೇಶ್ ಮತ್ತು ಆಯುಕ್ತ ವಿಶ್ವನಾಥ್ ಮುದಜ್ಜಿ ಸ್ಪಷ್ಟಪಡಿಸಿದ್ದಾರೆ.

ಸಾರ್ವಜನಿಕರಿಗೆ ಕುಡಿಯುವ ನೀರಿನ ಸಮಸ್ಯೆಯಾಗದಿರುವಂತೆ ಎಚ್ಚರ ವಹಿಸುವ ನಿಟ್ಟಿನಲ್ಲಿ ರಾಜನಹಳ್ಳಿ ಪಂಪ್ ಹೌಸ್ ಮತ್ತು ಬಾತಿ ಪಂಪ್ ಸ್ಟೇಷನ್‌ಗಳಿಗೆ ಇಂದು ಸಂಜೆ ಭೇಟಿ ನೀಡಿ ಪರಿಶೀಲಿಸಿದ ನಂತರ ತಮ್ಮನ್ನು ಸಂಪರ್ಕಿಸಿದ 'ಜನತಾವಾಣಿ'ಗೆ ಅವರು ಈ ವಿಷಯ ತಿಳಿಸಿದರು.

ರಾಜನಹಳ್ಳಿ ಪಂಪ್ ಹೌಸ್ ನಲ್ಲಿ ಸುಟ್ಟಿದ್ದ ಒಂದು ಮೋಟಾರ್ ಅನ್ನು ದುರಸ್ತಿ ಪಡಿಸಲಾಗಿದೆ. ಅಲ್ಲದೇ, ಹೆಚ್ಚುವರಿಯಾಗಿರುವ ಮೋಟಾರ್ ಗಳನ್ನು ಸುಸ್ಥಿತಿಯಲ್ಲಿಡುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಅವರು ಹೇಳಿದರು.

**ರಾಜನಹಳ್ಳಿ ಮತ್ತು ಬಾತಿ ಪಂಪ್ ಹೌಸ್‌ಗಳನ್ನು ಪರಿಶೀಲಿಸಿದ ಮೇಯರ್ ಎಸ್.ಟಿ. ವೀರೇಶ್, ಆಯುಕ್ತ ವಿಶ್ವನಾಥ್ ಮುದಜ್ಜಿ**

ಇದೇ ಸಂದರ್ಭದಲ್ಲಿ, ಕರ್ನಾಟಕ ನಗರ ಹಣಕಾಸು ಅಭಿವೃದ್ಧಿ (2ನೇ ಪುಟಕ್ಕೆ)

## ಜಿಲ್ಲಾಡಳಿತ ಭವನ ಸೇರಿದಂತೆ ಹಲವೆಡೆ ಅಂಬೇಡ್ಕರ್ ಪುತ್ಥಳಿಗಳ ಸ್ಥಾಪನೆಗೆ ಆಗ್ರಹ



ದಾವಣಗೆರೆ, ಮಾ.23 - ಕೊರೊನಾ ನಿಯಮಾವಳಿಗಳ ಪಾಲನೆಯೊಂದಿಗೆ ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಏಪ್ರಿಲ್ 14 ರಂದು ಡಾ.ಬಿ.ಆರ್ ಅಂಬೇಡ್ಕರ್ ಜಯಂತಿಯ ವೇದಿಕೆ ಕಾರ್ಯಕ್ರಮವನ್ನು ಹಾಗೂ ಏಪ್ರಿಲ್ 5 ರಂದು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಡಾ.ಬಾಬು ಜಗಜೀವನರಾಂ ಜಯಂತಿಯನ್ನು ಸರಳವಾಗಿ ಆಚರಿಸಲು ತೀರ್ಮಾನಿಸಲಾಗಿದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

ಜಿಲ್ಲಾಡಳಿತ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಏರ್ಪಡಿಸಲಾಗಿದ್ದ ಜಗಜೀವನ್ ರಾಂ ಮತ್ತು ಅಂಬೇಡ್ಕರ್ ಜನ್ಮ ದಿನಾಚರಣೆಯನ್ನು ಜಿಲ್ಲಾ ಕೇಂದ್ರದಲ್ಲಿ ಆಚರಣೆ ಮಾಡುವ ಕುರಿತು ಏರ್ಪಡಿಸಲಾಗಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಅಂದು ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗುವುದು ಹಾಗೂ ಇಬ್ಬರು ಪ್ರೌಢಶಾಲಾ ಮಕ್ಕಳಿಂದ ಅಂಬೇಡ್ಕರ್ ಅವರ ಕುರಿತು ಭಾಷಣ ಏರ್ಪಡಿಸಲಾಗುವುದು ಎಂದು ಜಿಲ್ಲಾಧಿಕಾರಿ ಹೇಳಿದರು.

ಅತಿ ಹೆಚ್ಚು ಅಂಕ ಪಡೆದ ಎಸ್‌ಸಿ/ಎಸ್‌ಟಿ ಸಮುದಾಯಕ್ಕೆ ಸೇರಿದ ವಿದ್ಯಾರ್ಥಿಗಳನ್ನು ಗುರುತಿಸಿ, ಗೌರವಿಸಲಾಗುವುದು ಹಾಗೂ ಪ್ರೌಢಶಾಲೆ, ಪಿಯು ಮತ್ತು ಪದವಿ-ಸ್ನಾತಕೋತ್ತರ ಪದವಿ (2ನೇ ಪುಟಕ್ಕೆ)

## ಅನುದಾನ ರಹಿತ ಶಿಕ್ಷಕರಿಗೂ ನಿಧಿ ಸದಸ್ಯತ್ವ

ಬೆಂಗಳೂರು, ಮಾ. 23 - ಖಾಸಗಿ ಅನುದಾನ ರಹಿತ ಶಾಲಾ-ಕಾಲೇಜುಗಳ ಶಿಕ್ಷಕರನ್ನು ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯ ಆಜೀವ ಸದಸ್ಯರನ್ನಾಗಿ ನೇಮಕ ಮಾಡಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ವಿವಿಧ ಶಿಕ್ಷಕ ಸಂಘಟನೆಗಳ ಹೋರಾಟದ ಸಮನ್ವಯ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಕೊರೊನಾದಂತಹ ಸಂಕಷ್ಟ ಕಾಲದಲ್ಲಿ ಖಾಸಗಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳ ಶಿಕ್ಷಕರು ತೀವ್ರ ಸಂಕಷ್ಟ ಅನುಭವಿಸಿದ್ದು, ಎಲ್ಲ ಶಿಕ್ಷಕರಂತೆ ಕಷ್ಟಕಾಲದ ತಕ್ಷಣದ ನೆರವಿಗೆ ಶಿಕ್ಷಣ ನಿಧಿಯ ಸದಸ್ಯತ್ವ ನೀಡಿ ಸರ್ಕಾರಿ ಹಾಗೂ ಅನುದಾನಿತ ಶಿಕ್ಷಕರಿಗೆ ದೊರೆಯುವ ಸೌಲಭ್ಯ ನೀಡಲು ನಿರ್ಧರಿಸಲಾಗಿದೆ ಎಂದರು.

ಎಲ್ಲರೂ ಶಿಕ್ಷಕರೇ, ಎಲ್ಲರೂ ಮಕ್ಕಳ ಹಿತಕ್ಕೆ ದುಡಿಯುತ್ತಾರೆ, ಶಿಕ್ಷಕರ ಕಲ್ಯಾಣ ನಿಧಿಗೆ ಖಾಸಗಿ ಅನುದಾನ ರಹಿತ ಸಂಸ್ಥೆಗಳ ಶಿಕ್ಷಕರಿಗೆ ಸದಸ್ಯತ್ವ ನೀಡುವ ಕುರಿತು ರೂಪುರೇಷೆ (2ನೇ ಪುಟಕ್ಕೆ)

## ಅಂದದ ಮನೆಗೆ 'ಜಲಸಿರಿ' ದೃಷ್ಟಿಬೊಟ್ಟು



ದಾವಣಗೆರೆಯ ತರಳಬಾಳು ಬಡಾವಣೆಯ ಕೆಲ ಮನೆಗಳಲ್ಲಿ ಜಲಸಿರಿ ಯೋಜನೆಯಡಿ ಅವೈಜ್ಞಾನಿಕವಾಗಿ ಪೈಪ್ ಲೈನ್ ಸಂಪರ್ಕ ಕೊಟ್ಟಿರುವುದು.

ದಾವಣಗೆರೆ: ಊರ ತುಂಬೆಲ್ಲಾ ಗುಂಡಿ, ಅಗೆಯೋನೊಬ್ಬ, ಮುಚ್ಚೋನೊಬ್ಬ, ಪೈಪ್ ಹಾಕೋನೊಬ್ಬ, ಮುಂದೆ ಮೀಟರ್ ಹಾಕೋನು ಮತ್ತೊಬ್ಬ... ತುಂಡು ಗುತ್ತಿಗೆ, ಸಮನ್ವಯತೆ ಇಲ್ಲದ ಕೆಲಸ, ಅನುಭವ ಇಲ್ಲದ ಕಾರ್ಮಿಕರು..

ಸದ್ಯ ನಗರಕ್ಕೆ 24x7 ಕುಡಿಯುವ ನೀರು ಪೂರೈಸುವ ಉದ್ದೇಶದಿಂದ ಭರದಿಂದ ನಡೆಯುತ್ತಿ ರುವ ಮಹತ್ವದ ಜಲಸಿರಿ ಕಾಮಗಾರಿಯ ಹೈಲೆಟ್ಸ್ ಇವು.

ಜಲಸಿರಿ ಎಂಬ ಕಾಮಗಾರಿ ಸದ್ಯಕ್ಕೆ ದಾವಣಗೆರೆಯ ಮನೆ ಮಾಲೀಕರಿಗೆ ಬಿಸಿ ತುಪ್ಪವಾಗಿ ಪರಿಣಮಿಸಿರುವುದಂತೂ ಸತ್ಯ. ಕಳೆದ ಕೆಲ ದಿನಗಳ ಹಿಂದೆ ತೆಗೆದಿದ್ದ ಗುಂಡಿ ಮುಚ್ಚಿ ನಿಟ್ಟುಸಿರು ಬಿಡುತ್ತಿದ್ದಂತೆ ಇದೀಗ ಮತ್ತೆ ಗುಂಡಿ ಅಗೆದು ಪೈಪ್ ಸಂಪರ್ಕ ಕೊಡಲಾರಂಭಿಸಿದ್ದಾರೆ.

ಲಕ್ಷಾಂತರ, ಕೋಟ್ಯಾಂತರ ರೂಪಾಯಿ ವೆಚ್ಚ ಮಾಡಿ ಕನಸಿನ ಮನೆಯನ್ನು ಸುಂದರವಾಗಿ ಕಟ್ಟಿಕೊಂಡವರಿಗೆ ಈ 'ಜಲಸಿರಿ' ನುಂಗಲಾರದ ತುತ್ತಾಗಿದೆ.

ಈ ಮಹತ್ವದ ಯೋಜನೆಯನ್ನು ತುಂಡು ಗುತ್ತಿಗೆ ನೀಡಿದ ಪರಿಣಾಮ ಗುಂಡಿ ಅಗೆಯಲು, ಪೈಪ್ ಲೈನ್ ಅಳವಡಿಸಲು, ಮುಚ್ಚಲು ಹೀಗೆ ಪ್ರತಿ ಬಾರಿಯೂ ಕಾರ್ಮಿಕರು ಬದಲಾಗುತ್ತಲೇ ಇದ್ದಾರೆ. ಅದೂ ಹೊರ ರಾಜ್ಯದ ಕಾರ್ಮಿಕರು.

ಇನ್ನು ಇದೀಗ ಮನೆಯ ಕಾಂಪೌಡ್ ಕೊರೆದು ಒಳ ಭಾಗದಲ್ಲಿ ಸಂಪರ್ಕ ಕಲ್ಪಿಸಿ,



ಮೀಟರ್ ಅಳವಡಿಸುವ ಕಾರ್ಯ ಕೆಲ ಬಡಾವಣೆಗಳಲ್ಲಿ ನಡೆಯುತ್ತಿದೆ. ಆದರೆ ಬಂದಿರುವ ಪ್ಲಂಬರ್‌ಗಳಿಗೆ ಸಾಮಾನ್ಯ ಜ್ಞಾನದ ಕೊರತೆ ಕಾಡುತ್ತಿರುವುದರಿಂದ ಎಲ್ಲೆಂದರಲ್ಲಿ, ತಮಗೆ ತೋಚಿದಂತೆ ಸಂಪರ್ಕ ಕಲ್ಪಿಸಿ ತೆರಳುತ್ತಿದ್ದಾರೆ.

ಲಕ್ಷ, ಕೋಟಿ ರೂ. ವೆಚ್ಚದಲ್ಲಿ ಮನೆ ಕಟ್ಟಿಸಿಕೊಂಡು, ನಗರದ ಸೌಂದರ್ಯೀಕರಣಕ್ಕೆ ನಮ್ಮದೂ ಒಂದಿಷ್ಟು ಕೊಡುಗೆ ಇರಲಿ ಎಂಬ ಉದ್ದೇಶದಿಂದ ಪೈಪ್‌ಗಳು, ವೈರ್‌ಗಳು ಕಾಣದಂತೆ ಪ್ಲಾನ್ ಮಾಡಿಕೊಂಡು, ಗಾರ್ಡನ್, ಕಾಂಪೌಂಡ್, ಗೇಟ್ ಮೂಲಕ ಹೆಚ್ಚಿಸಿಕೊಂಡಿದ್ದ ಮನೆಯ ಅಂದ ಇದೀಗ ಕಾಮಗಾರಿ ನೆಪದಲ್ಲಿ (2ನೇ ಪುಟಕ್ಕೆ)

# ಅನುದಾನ ರಹಿತ ಶಿಕ್ಷಕರಿಗೂ ನಿಧಿ ಸದಸ್ಯತ್ವ

**(1ನೇ ಪುಟದಿಂದ)** ಸಿದ್ಧಪಡಿಸಲಾಗುತ್ತಿದೆ, ಕೆಲವೇ ದಿನಗಳಲ್ಲಿ ಇದು ಅಧಿಕೃತಗೊಳ್ಳಲಿದೆ ಎಂದು ಸಚಿವರು ತಿಳಿಸಿದರು.

ಶಿಕ್ಷಣ ಕ್ಷೇತ್ರದ ಪ್ರಮುಖ ಬೇಡಿಕೆಯಾದ ಖಾಸಗಿ ಅನುದಾನ ರಹಿತ ಕನ್ನಡ ಮಾಧ್ಯಮ ಶಾಲೆಗಳನ್ನು ಅನುದಾನಕ್ಕೊಳಪಡಿಸುವ ಕುರಿತು ಮುಖ್ಯಮಂತ್ರಿಗಳೊಂದಿಗೆ ಈಗಾಗಲೇ ಚರ್ಚಿಸಿದ್ದೇನೆ. ಬಜೆಟ್ ಪೂರ್ವಭಾವಿ ಸಭೆಯಲ್ಲಿಯೂ ಈ ಕುರಿತು ಪ್ರಸ್ತಾವನೆ ಸಲ್ಲಿಸಿ, ಮುಖ್ಯಮಂತ್ರಿ ಅವರಿಗೆ ಪರಿಗಣಿಸಬೇಕೆಂದು ಕೋರಿದ್ದೆ. ಕೊರೊನಾ ಸಂಕಷ್ಟ ಸಮಯವಾದ್ದರಿಂದ ಬಜೆಟ್‌ನಲ್ಲಿ ಅನುದಾನ ಹಂಚಿಕೆಯಾಗಿಲ್ಲ, ಆದರೂ ಮುಖ್ಯಮಂತ್ರಿ ಜೊತೆ ಚರ್ಚಿಸಿದ್ದು, 1995-2000 ವರೆಗಿನ ಶಾಲೆಗಳಿಗೆ ಅನುದಾನ ನೀಡುವ ಘೋಷಣೆ ಮಾಡಬೇಕೆಂದು ಕೋರಲಾಗಿದೆ.

ಈ ಕುರಿತು ಮತ್ತೊಮ್ಮೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಸ್ಪಷ್ಟ ಭರವಸೆ ಪಡೆಯಲಾಗುವುದು. ಅನುದಾನಿತ ಹಾಗೂ ಅನುದಾನ ರಹಿತ ಖಾಸಗಿ ಶಾಲಾ ಸಿಬ್ಬಂದಿಗೂ ಆರೋಗ್ಯ ರಕ್ಷಣೆ ಒದಗಿಸುವ ಉದ್ದೇಶದಿಂದ ಜ್ಯೋತಿ ಸಂಜೀವಿನಿ ವ್ಯಾಪ್ತಿಗೆ ಒಳಪಡಿಸುವ ಕುರಿತು ಆರ್ಥಿಕ ಇಲಾಖೆಯೊಂದಿಗೆ ಚರ್ಚಿಸಿ ನಿರ್ಣಯ ಕೈಗೊಳ್ಳಲಾಗುವುದು.

ಹಿಂದುಳಿದ ಕಲ್ಯಾಣ ಕರ್ನಾಟಕ ಪ್ರದೇಶದ ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಸಹಾಯ ಹಸ್ತ ನೀಡುವ ಕುರಿತು ಮಂಡಳಿಯ ನಿಯಮಗಳಲ್ಲಿ ಅವಕಾಶ ಕಲ್ಪಿಸುವ ಸಂಬಂಧ ಯೋಜನಾ ಇಲಾಖೆ ಅಧಿಕಾರಿಗಳೊಂದಿಗೆ ಶೀಘ್ರ ಸಭೆ ನಡೆಸಲಾಗುವುದು.

ಕೊರೊನಾ ಸಂಕಷ್ಟದಲ್ಲಿ ಶಾಲೆಗಳು ತಡವಾಗಿ ಆರಂಭವಾಗಿರುವುದರಿಂದ ಮಕ್ಕಳು ಪರೀಕ್ಷೆಗೆ ಸಿದ್ಧವಾಗುತ್ತಿದ್ದು, ಮಕ್ಕಳ ಹಿತದೃಷ್ಟಿಯಿಂದ ಪರೀಕ್ಷೆ ಮತ್ತು ಮೌಲ್ಯಮಾಪನದಂತಹ ಸಮಯದಲ್ಲಿ ಶಿಕ್ಷಕರು ಯಾವುದೇ ಮುಷ್ಕರಗಳಿಗೆ ಅವಕಾಶ ನೀಡಬಾರದು ಎಂದು ಸಚಿವರು ಮನವಿ ಮಾಡಿದರು.

# ಅಂದದ ಮನೆಗೆ 'ಜಲಸಿರಿ' ದೃಷ್ಟಿಬೊಟ್ಟು

**(1ನೇ ಪುಟದಿಂದ)** ಮೂರಾಬಟ್ಟೆಯಾಗುತ್ತಿದೆ. ಇವರ ಕಾಮಗಾರಿಗೆ ಮಾರ್ಗಸೂಚಿ ಎಂಬುದಿಲ್ಲವೇ? ಎಂಬುದು ಮಾಲೀಕರ ಪ್ರಶ್ನೆ. ಮನೆ ಒಳಭಾಗಕ್ಕೆ ಪೈಪ್ ಸಂಪರ್ಕ ತರುವಾಗ ನಿಮ್ಮ ಮನೆಯ ನಳ ಸಂಪರ್ಕ ಎಲ್ಲಿದೆ? ಎಲ್ಲಿ ಮೀಟರ್ ಅಳವಡಿಸಬೇಕು? ಎಂಬ ಬಗ್ಗೆ ಕನಿಷ್ಠ ಪಕ್ಷ ಮಾಲೀಕರೊಂದಿಗೆ ಚರ್ಚಿಸಬೇಕಿತ್ತು ಎಂಬುದು ಮಾಲೀಕರ ಸಲಹೆ.

ಪ್ರಸುತ್ತ ಅಳವಡಿಸುತ್ತಿರುವ ಪೈಪ್‌ಗಳು ಮುಂದೆ ನೀರು ಬರುವ ವೇಳೆಗಾಗಲೇ ಜಂಗ್ ಹಿಡಿದು ದುರಸ್ತಿಗೆ ಬಂದಿರುತ್ತವೆ. ಅಲ್ಲದೇ ಅವೈಜ್ಞಾನಿಕ ಪೈಪ್ ಲೈನ್ ಮೂಲಕ ನೀರು ಹರಿಯುವುದೂ ಕಷ್ಟ ಎಂದು ಸ್ಥಳೀಯ ಪ್ಲಂಬರ್‌ಗಳು ಜಲಸಿರಿ ಕಾರ್ಯವನ್ನು ಟೀಕಿಸುತ್ತಿದ್ದಾರೆ.

ಒಟ್ಟಾರೆ ನಮ್ಮ ಅಂದದ ಮನೆಗೆ ಜಲಸಿರಿ ಯೋಜನೆ ದೃಷ್ಟಿ ಬೊಟ್ಟು ಇಟ್ಟಂತೆ ಎಂದು ಮಾಲೀಕರು ತಮಗೆ ತಾವೇ ಸಮಾಧಾನ ಮಾಡಿಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

# ತಾ.ಪಂ.ಅಧ್ಯಕ್ಷರಾಗಿ ಆದಾಪುರದ ವೀರಭದ್ರಪ್ಪ ಆಯ್ಕೆ





**(1ನೇ ಪುಟದಿಂದ)** ನಾಮಪತ್ರವನ್ನು ಸಲ್ಲಿಸದೇ ಇರುವುದರಿಂದ ವೀರಭದ್ರಪ್ಪನವರನ್ನು ತಾ.ಪಂ. ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾ ಅಧಿಕಾರಿಯಾದ ದಾವಣಗೆರೆ ಉಪವಿಭಾಗಧಿಕಾರಿ ಮಮತಾ ಹೊಸಗೌಡ್ರು ತಿಳಿಸಿದರು.

ತಾ.ಪಂ.ನ ಒಟ್ಟು ಸದಸ್ಯರು 15. ಅದರಲ್ಲಿ ಬಿಜೆಪಿ ಪಕ್ಷದ ಸದಸ್ಯರು 5, ಜೆಡಿಎಸ್ ಪಕ್ಷದ ಸದಸ್ಯರು 6, ಕಾಂಗ್ರೆಸ್ ಪಕ್ಷದ ಸದಸ್ಯರು 4. ಆದರೆ ಸರ್ಕಾರದ ಮೀಸಲಾತಿ ಎಸ್ಸಿ ಜನಾಂಗಕ್ಕೆ ನಿಗದಿಪಡಿಸಿ ಆದೇಶ ನೀಡಿದ್ದರಿಂದ ಬಿಜೆಪಿ ಪಕ್ಷದ ಶ್ರೀದೇವಿ ಮಂಜಪ್ಪನವರು ಹಿಂದಿನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ನಂತರದ ಬೆಳವಣಿಗೆಯಲ್ಲಿ ಇವರ ವಿರುದ್ಧ ಕಾಂಗ್ರೆಸ್ ಪಕ್ಷದ ಆದಾಪುರದ ವೀರಭದ್ರಪ್ಪ ಅವಿಶ್ವಾಸ ತಂದರು. ಆದರೆ ಅದರಲ್ಲಿ ಕೆಲವು ಸದಸ್ಯರು ಇವರಿಗೆ ಬೆಂಬಲವನ್ನು ನೀಡುವುದಾಗಿ ತಿಳಿಸಿ ಕೊನೆಯ ಘಳಿಗೆಯಲ್ಲಿ ಕೈ ಕೊಟ್ಟಿದ್ದರಿಂದ ಇವರಿಗೆ ಅಧ್ಯಕ್ಷ ಸ್ಥಾನ ಕೈ ತಪ್ಪಿತು.

ಆದರೆ ಹಠಕ್ಕೆ ಬಿದ್ದ ಆದಾಪುರದ ವೀರಭದ್ರಪ್ಪ ಉಳಿದ ಮೂರು, ನಾಲ್ಕು ತಿಂಗಳ ಅವಧಿಗಾದರೂ ನನಗೆ ಅವಕಾಶ ಕಲ್ಪಿಸಿ ಎಂದು ಮೂರೂ ಪಕ್ಷಗಳ ಮುಖಂಡರ ಬಳಿ ತಮ್ಮ ಅಹವಾಲು ಸಲ್ಲಿಸಿದರು. ಇದಕ್ಕೆ ಮೂರೂ ಪಕ್ಷಗಳ ಮುಖಂಡರಾದ ಶಾಸಕ ಎಸ್. ರಾಮಪ್ಪ, ಮಾಜಿ ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್ ಸಮ್ಮತಿ ನೀಡಿದರು. ಇದರಿಂದಾಗಿ ಉಳಿದ ಅವಧಿಯಲ್ಲಿ ಸೇವೆ ಮಾಡುವುದಕ್ಕೆ ಆದಾಪುರದ ವೀರಭದ್ರಪ್ಪನವರಿಗೆ ಅವಕಾಶ ಕಲ್ಪಿಸಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಬಿ.ಪಿ. ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಜಿ.ಪಂ. ಸದಸ್ಯರಾದ ವಿ.ಡಿ. ಹೇಮಾವತಿ ಭೀಮಪ್ಪ, ಬಿ.ಎಂ. ವಾಗೀಶ್ ಸ್ವಾಮಿ, ಎಪಿಎಂಸಿ ಸದಸ್ಯ ಮಂಜುನಾಥ್ ಪಾಟೀಲ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಲ್.ಬಿ. ಹನುಮಂತಪ್ಪ, ಅಬಿದಾಲಿ, ತಾ.ಪಂ. ಮಾಜಿ ಅಧ್ಯಕ್ಷ ಐರಣಿ ಅಣ್ಣೇಶ್, ಜಿ.ಪಂ. ಮಾಜಿ ಸದಸ್ಯ ವೀರಭದ್ರಪ್ಪ, ಜಿಗಳಿ ಆನಂದಪ್ಪ, ವಿಜಯ್ ಮಹಾಂತೇಶ್, ವಿಜಯಕುಮಾರ್ ಮಲೇಬೆನ್ನೂರು, ಬಸವಲಿಂಗಪ್ಪ ಗುತ್ತೂರು, ತಾ.ಪಂ. ಇಓ ಜಿ.ಡಿ. ಗಂಗಾಧರನ್, ತಾ.ಪಂ. ಉಪಾಧ್ಯಕ್ಷೆ ಶಾಂತಮ್ಮ ಗದಿಗೆಪ್ಪ ಎಳೆಹೊಳೆ, ಸದಸ್ಯರಾದ ಜಯಮ್ಮ ಬಸವಲಿಂಗಪ್ಪ, ಜಾಹೀರಾಬಿ ರೆಹಮಾನ್, ಎನ್.ಪಿ. ಬಸವಲಿಂಗಪ್ಪ, ವಿಶಾಲಾಕ್ಷಿ ಕೊಟ್ರೇಶಪ್ಪ, ಕೊಟ್ರಪ್ಪ ಗೌಡ್ರು ಸಿರಿಗೆರೆ, ವೈ.ಹೆಚ್. ಭಾಗ್ಯಲಕ್ಷ್ಮಿ, ಲಕ್ಷ್ಮಿ ಮಹಾಂತೇಶ್, ಬಸವಗೌಡ್ರು, ರತ್ನಮ್ಮ ಕೆ. ಆರ್. ರಂಗಪ್ಪ, ತಾ.ಪಂ. ಸಿಬ್ಬಂದಿಗಳಾದ ಕಮಲಮ್ಮ, ಲಿಂಗರಾಜ್ ಇನ್ನಿತರರಿದ್ದರು.

## ದೊಡ್ಡಬಾತಿ : ರೇವಣಸಿದ್ದೇಶ್ವರ ಮಹಾರಥೋತ್ಸವದಲ್ಲಿ ಇಂದು

ದಾವಣಗೆರೆ ತಾಲ್ಲೂಕು ದೊಡ್ಡಬಾತಿ ಗ್ರಾಮದಲ್ಲಿ ದಿನಾಂಕ 27 ರ ಶನಿವಾರ ನಡೆಯಲಿರುವ ಶ್ರೀ ರೇವಣಸಿದ್ದೇಶ್ವರ ಸ್ವಾಮಿಯ ರಥೋತ್ಸವದ ಅಂಗವಾಗಿ ಇಂದು ಪಾಲ್ದಾರ ಗೌಡ್ರ ಕನ್ನಪ್ಪಳ ಮನೆತನದವರಿಂದ ಶ್ರೀ ಸ್ವಾಮಿಗೆ ಅರಿಶಿಣ ಎಣ್ಣೆ ಮತ್ತು ಉಚ್ಚಾಯ ಕಾರ್ಯವು ನಡೆಯುವುದು.

## ಕಟ್ಟಿಗೆಹಳ್ಳಿಯಲ್ಲಿ ಇಂದು ಬೆಲ್ಲದ ಬಂಡಿ, ನಾಟಕ ಪ್ರದರ್ಶನ

ಜಗಳೂರು ತಾಲ್ಲೂಕು ಕಟ್ಟಿಗೆಹಳ್ಳಿ ಗ್ರಾಮದಲ್ಲಿ ನಡೆಯುತ್ತಿರುವ ಶ್ರೀ ಬಸವೇಶ್ವರ ಸ್ವಾಮಿಯ ಮಹಾರಥೋತ್ಸವದ ಅಂಗವಾಗಿ ಇಂದು ಮಧ್ಯಾಹ್ನ ಬೆಲ್ಲದ ಗಾಡಿ ಉತ್ಸವ ನಡೆಯಲಿದೆ. ರಾತ್ರಿ 9.30 ಕ್ಕೆ 'ಪ್ರೀತಿ ಕೊಂದ ಕೊಲೆಗಾತಿ' (ಮಿಡಿದ ಹೃದಯಗಳು) ನಾಟಕ ಪ್ರದರ್ಶನ ಏರ್ಪಡಿಸಿದೆ. ನಾಳೆ ದಿನಾಂಕ 25 ರ ಗುರುವಾರ ಬೆಳಿಗ್ಗೆ 8.30 ಕ್ಕೆ ಓಕಳಿ ಮತ್ತು ಗಂಗಾ ಪೂಜೆ ನಡೆಯಲಿದೆ.

## ಹಂಪನೂರು : ಶ್ರೀ ಲಕ್ಷ್ಮಿ ರಂಗನಾಥಸ್ವಾಮಿಗೆ ನೈವೇದ್ಯ

ಚಿತ್ರದುರ್ಗ ತಾಲ್ಲೂಕು ಹಂಪನೂರು ಗ್ರಾಮದಲ್ಲಿ ನಡೆದ ಶ್ರೀ ರಂಗನಾಥ ಸ್ವಾಮಿಯ ದೊಡ್ಡ ರಥೋತ್ಸವದಲ್ಲಿ ಇಂದು ಮಧ್ಯಾಹ್ನ 12 ಗಂಟೆಗೆ ಶ್ರೀ ರಂಗನಾಥಸ್ವಾಮಿಯ ನೈವೇದ್ಯ ಮತ್ತು ಮಹಾಮಂಗಳಾರತಿ ನಡೆಯುವುದು.

## ಬೋಳಚಟ್ಟಿ ಚೌಡೇಶ್ವರಿ ದೇವಿ ಜಾತ್ರೆಯಲ್ಲಿಂದು ಹರಕೆ

ನಗರದ ಚೌಡೇಶ್ವರಿ ನಗರ ರುದ್ರಭೂಮಿ ರೋಡ್‌ನಲ್ಲಿರುವ ಬೋಳಚಟ್ಟಿ ಚೌಡೇಶ್ವರಿ ದೇವಿಯ ಎಡೆ ಜಾತ್ರೆ ಕಾರ್ಯಕ್ರಮದಲ್ಲಿ ಇಂದು ಹರಕೆ, ಮುಡುಪುಗಳನ್ನು ಒಪ್ಪಿಸುವ ಕಾರ್ಯಕ್ರಮ ನಡೆಯುವುದು.

# ಅಂಬೇಡ್ಕರ್ ಪುತ್ಥಳಿಗಳ ಸ್ಥಾಪನೆಗೆ ಆಗ್ರಹ

**(1ನೇ ಪುಟದಿಂದ)** ಮೂರೂ ವಿಭಾಗಗಳಲ್ಲಿ ಅಂಬೇಡ್ಕರ್ ಜೀವನ ಸಾಧನೆ ಕುರಿತು ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗುವುದು ಎಂದು ತಿಳಿಸಿದರು..

**ಅಂಬೇಡ್ಕರ್ ಭವನದ ಶಂಕುಸ್ಥಾಪನೆಗೆ ಕ್ರಮ:** ಅಂಬೇಡ್ಕರ್ ಭವನದ ನಿರ್ಮಾಣಕ್ಕೆ ಮುಖಂಡರು ಆಗ್ರಹಿಸಿದ ಬಗ್ಗೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ, ಭವನ ನಿರ್ಮಾಣಕ್ಕೆ 2.10 ಕೋಟಿ ರೂ. ಬಿಡುಗಡೆ ಆಗಿದ್ದು ಆಡಳಿತಾತ್ಮಕ ಅನುಮೋದನೆಗೆ ಕಡತ ಕಾರ್ಯದರ್ಶಿಗಳ ಕಚೇರಿಯಲ್ಲಿದೆ. ಅಂಬೇಡ್ಕರ್ ಜಯಂತಿಯೊಳಗೆ ಮಂಜೂರಾತಿ ಪಡೆಯುವ ಭರವಸೆ ವ್ಯಕ್ತಪಡಿಸಿದರು.

ಡಿಎಸ್‌ಎಸ್ ದಾವಣಗೆರೆ ಜಿಲ್ಲಾಧ್ಯಕ್ಷರಾದ ದುಗ್ಗಪ್ಪ ಮಾತನಾಡಿ, ಆವರಗೆರೆಯಲ್ಲಿ ಅಂಬೇಡ್ಕರ್ ಪ್ರತಿಮೆ ಸ್ಥಾಪಿಸಬೇಕು ಎಂದು ಮನವಿ ಮಾಡಿದರು.

ಡಿಎಸ್‌ಎಸ್ ತಾಲ್ಲೂಕು ಕಾರ್ಯದರ್ಶಿ ವಿಶ್ವನಾಥ್ ಮಾತನಾಡಿ, ಹರಿಹರದಲ್ಲಿ ಅಂಬೇಡ್ಕರ್ ಭವನ ನಿರ್ಮಿಸಬೇಕು ಹಾಗೂ ಅಂಬೇಡ್ಕರ್ ಮತ್ತು ಪ್ರೊ. ಬಿ. ಕೃಷ್ಣಪ್ಪನವರ ಪುತ್ಥಳಿಗಳನ್ನು ಸ್ಥಾಪಿಸಬೇಕೆಂದು ಮನವಿ ಮಾಡಿದರು.

ಮುಖಂಡರಾದ ಎಸ್.ಶೇಖರಪ್ಪ ಮಾತನಾಡಿ ನಗರದ ಕೆಇಬಿ ವೃತ್ತದ ಅಂಬೇಡ್ಕರ್ ಪುತ್ಥಳಿ ಸಣ್ಣದಿದ್ದು, ಆಳೆತ್ತರದ ಪುತ್ಥಳಿ ಸ್ಥಾಪಿಸಬೇಕೆಂದು ಆಗ್ರಹಿಸಿದರೆ, ಸುಭಾಷ್‌ಚಂದ್ರ ಮಾತನಾಡಿ, ಜಿಲ್ಲಾಡಳಿತ ಕಚೇರಿ ಆವರಣದಲ್ಲಿ ಅಂಬೇಡ್ಕರ್ ಮತ್ತು ಬಾಬು ಜಗಜೀವನರಾಂ ಪುತ್ಥಳಿಯನ್ನು ಸ್ಥಾಪಿಸಬೇಕೆಂದು ಮನವಿ ಮಾಡಿದರು.

ಇದಕ್ಕೂ ಮುಂಚೆ ದಲಿತ ಕಾರ್ಮಿಕರ ಜಿಲ್ಲಾ ಸಂಘದ ಅಧ್ಯಕ್ಷ ಎಸ್.ಎನ್. ಬಾಲಾಜಿ ಮಾತನಾಡಿ, ಈ ವರ್ಷ ಅಂಬೇಡ್ಕರ್ ಜಯಂತಿಯನ್ನು 'ದಲಿತರ ಬೇಡಿಕೆ'ಯ ದಿನವನ್ನಾಗಿ ಆಚರಿಸಬೇಕು ಎಂದು ಮನವಿ ಮಾಡಿದರು.

ಡಿಎಸ್‌ಎಸ್ ರಾಜ್ಯ ಸಂಚಾಲಕ ಮಲ್ಲೇಶಪ್ಪ ಮಾತನಾಡಿ, ಹರಿಹರದಲ್ಲಿನ ಮೈತ್ರಿವನದಲ್ಲಿ ಪ್ರೊ. ಬಿ.ಕೃಷ್ಣಪ್ಪ ಅವರ ಸಮುದಾಯ ಭವನವನ್ನು ಸರ್ಕಾರ ಟ್ರಸ್ಟ್‌ನಿಂದ ವಹಿಸಿಕೊಂಡು ಸಾರ್ವಜನಿಕರಿಗೆ ಮುಕ್ತವಾಗಿ ಅವಕಾಶ ಕಲ್ಪಿಸಬೇಕು ಎಂದು ಮನವಿ ಮಾಡಿದರು.

ಆದಿಜಾಂಬವ ಸಂಘದ ಅಧ್ಯಕ್ಷರಾದ ಟಿ.ರಮೇಶ್ ಮಾತನಾಡಿ, ಎಸ್‌ಸಿ/ಎಸ್‌ಟಿ ಸಮುದಾಯಕ್ಕೆ ಸೇರಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಹಾಯಧನ ನೀಡಬೇಕು ಎಂದು ಹೇಳಿದರು.

ಮುಖಂಡರಾದ ಹೆಗ್ಗೆರೆ ರಂಗಪ್ಪ ಮಾತನಾಡಿ, ನಗರದ ಬಾಬು ಜಗಜೀವನರಾಂ ಭವನ ನಿರ್ವಹಣೆ ಇಲ್ಲದೇ ಪಾಳು ಬಿದ್ದಿದೆ. ಭವನ ನಿರ್ವಹಿಸಲು ಉಸ್ತುವಾರಿ ಸಮಿತಿ ನೇಮಿಸಬೇಕೆಂದು ಒತ್ತಾಯಿಸಿದರು.

ಅನೀಸ್ ಪಾಷಾ ಮಾತನಾಡಿ, ಅಂಬೇಡ್ಕರ್ ಜಯಂತಿ ನಮಗೆ ಹಬ್ಬದ ರೀತಿಯಾಗಿದ್ದು, ನಾವು ಮಾಂಸಾಹಾರ ಮಾಡಿ ಸಂಭ್ರಮಿಸುವುದು ಇಷ್ಟ. ಆದರೆ ಅಂದು ಮಾಂಸ ನಿಷೇಧಿಸಲಾಗಿದೆ. ಈ ನಿಷೇಧ ಯಾವ ಕಾರಣಕ್ಕೆ ಎಂಬ ಸ್ಪಷ್ಟನೆ ನೀಡಬೇಕೆಂದು ಮನವಿ ಮಾಡಿದರು.

ಸಿಪಿಐನ ಉಮೇಶ್, ಮುಖಂಡರಾದ ಮಂಜುನಾಥ್, ಹೆಚ್.ಹುಲಿಗೇಶ್, ಸೋಮ್ಲಾಪುರ ಹನುಮಂತಪ್ಪ, ಡಾ.ಬಾಬು ಜಗಜೀವನರಾಂ ರೀಸರ್ಚ್ ಸ್ಟಡಿ ಸೆಂಟರ್‌ನ ಛೇರ್ಮನ್ ಹೆಚ್.ವಿಶ್ವನಾಥ್ ಹಾಗೂ ಮುಖಂಡರಾದ ಮಲ್ಲಿಕಾರ್ಜುನ್, ಐರಣಿ ಚಂದ್ರು, ತಿಪ್ಪೇಸ್ವಾಮಿ ಮತ್ತಿತರೆ ಮುಖಂಡರು ಮಾತನಾಡಿದರು


## ರೂಪಾಂತರಿ ಸೋಂಕು ತೀವ್ರತೆ ಕಡಿಮೆ

**(1ನೇ ಪುಟದಿಂದ)** ವರ್ಷದ ಒಳಗಿನವರೂ ಲಸಿಕೆ ಪಡೆಯಲು ಅವಕಾಶ ನೀಡಬೇಕು ಎಂದು ಕೋರಿದ್ದಾರೆ.

ಕೋವಿಶೀಲ್ಡ್ ಲಸಿಕೆ ಬ್ರಿಟನ್ ರೂಪಾಂತರಿ ವಿರುದ್ಧ ಪರಿಣಾಮಕಾರಿ. ಹೆಚ್ಚು ಲಸಿಕೆ ನೀಡುವುದರಿಂದ ರೋಗ ಹರಡುವ ಸರಣಿ ತುಂಡರಿಸಲ್ಪಡುತ್ತದೆ ಎಂದು ಸಿಂಗ್ ತಿಳಿಸಿದ್ದಾರೆ.

ಬ್ರಿಟನ್ ರೂಪಾಂತರಿ ಕಳೆದ ಕೆಲ ವಾರಗಳಲ್ಲಿ ಹೆಚ್ಚಾಗಿ ಹರಡುತ್ತಿದೆ. ಇದು ವೇಗವಾಗಿ ಹರಡುತ್ತದೆಯಾದರೂ, ತೀವ್ರತೆ ಕಡಿಮೆ ಎಂದು ಡಾ. ಕೆ.ಕೆ. ತಲ್ವಾರ್ ನೇತೃತ್ವದ ರಾಜ್ಯ ಕೋವಿಡ್ ಪರಿಣಿತರ ಸಮಿತಿ ತಿಳಿಸಿದೆ.

## ಕಣ್ತೆರೆಯಬೇಕಿದೆ



ಕಣ್ತೆರೆಯಬೇಕಿದೆ
ಹಗಲಾಗಿ ಮನುಜನು
ಬಾಳಿನಾ ಬೆಳಕಿಗೆ
ಅರಿವಿನಾ ಜನ್ಮಕೆ!

ಕಣ್ತೆರೆಯುವುದೆಂದರೆ
ಅರೆಬಟ್ಟೆಯ ಬಡಹಣ್ಣ
ಕಂಡ ಗಾಂಧಿ
ಸರಳತೆಯ ಧರಿಸಿ
ದೇಶಾಭಿಮಾನದಿ
ಸೇವೆಯಲಿ ಲೀನರಾದಂತೆ
ಗೌತಮನು ಲೌಕಿಕ ಬಿಟ್ಟು
ಬುದ್ದನಾದಂತೆ!

ಕಣ್ತೆರೆಯುವುದೆಂದರೆ
ಬಸವಣ್ಣ ತನ್ನ
ಅಕ್ಕನಿಗಿರದ
ಜನಿವಾರ ತನಗೆ ಬೇಡವೆಂದು
ಲಿಂಗ ತಾರತಮ್ಯಕೆ
ಸಿಡಿದು ತಣ್ಣಗೆ
ಕಲ್ಯಾಣದಲಿ ನಿಂತು
ಸಮಾನತೆಯ ತೋರಿದಂತೆ
ಹೆಣ್ಣಿಗೂ ವ್ಯಕ್ತಿತ್ವವಿದೆ
ಎಂಬುದನು ಕಾಣಿಸಿದಂತೆ!

ಕಣ್ತೆರೆಯುವುದೆಂದರೆ
ಅಲ್ಲಮನ ಉಪದೇಶಕೆ
ಸಿದ್ಧರಾಮ ಯೋಗಿಯಾದಂತೆ
ಸಣ್ಣತನದ ನೆಲೆಯಲಿ
ಬೆಂದು ನೊಂದರೂ
ವಿದ್ಯೆ ಕಲಿತು
ಅಂಬೇಡ್ಕರ್ ಬೆಳೆದಂತೆ!

ಕಣ್ತೆರೆಯುವುದೆಂದರೆ
ಪರಮಹಂಸರ ಧ್ಯಾನದಿಂದ
ನರೇಂದ್ರ ವಿವೇಕನಾದಂತೆ
ಪಕ್ಷಿಯಳಲ ಕಂಡ ವಾಲ್ಮೀಕಿ
ಮಹಾಕವಿ ಆದಂತೆ!

- ಎ.ಸಿ.ಶಶಿಕಲಾ ಶಂಕರಮೂರ್ತಿ
ಶಿಕ್ಷಕಿ, ಸಾಹಿತಿ, ದಾವಣಗೆರೆ.
shashikalaac123@gmail.com

## ಮಾಯಕೊಂಡ ತಾ. ಮಾಡುವಂತೆ ಆಗ್ರಹಿಸಲು ಸಿಎಂ ಭೇಟಿ

ದಾವಣಗೆರೆ, ಮಾ.23- ಮಾಯಕೊಂಡ ತಾಲ್ಲೂಕು ಕೇಂದ್ರ ಮಾಡುವ ನಿಟ್ಟಿನಲ್ಲಿ ಹೋರಾಟ ಸಮಿತಿಯ ಸಭೆ ನಡೆಸಿದ್ದು, ಇದೇ ವಿಧಾನಸಭಾ ಅಧಿವೇಶನದಲ್ಲಿ ಮತ್ತೊಮ್ಮೆ ಮುಖ್ಯಮಂತ್ರಿಗಳನ್ನು ಭೇಟಿ ಮಾಡಲು ನಿರ್ಧರಿಸಲಾಗಿದೆ ಎಂದು ಎಂ.ಎಸ್.ಕೆ. ಶಾಸ್ತ್ರಿ ತಿಳಿಸಿದ್ದಾರೆ.

ಶಾಸಕರಾದ ಎಂ.ಪಿ. ರೇಣುಕಾಚಾರ್ಯ, ಮಾಡಾಳ್ ವಿರೂಪಾಕ್ಷಪ್ಪನವರ ಮುಖಂಡತ್ವದಲ್ಲಿ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಮಾಯಕೊಂಡ ತಾಲ್ಲೂಕು ಕೇಂದ್ರವಾಗಿರುವ ಘೋಷಣಾ ಪತ್ರವನ್ನು ತರೋಣ ಎಂದು ಸಭೆ ನಿರ್ಣಯಿಸಿತು ಹಾಗೂ ಬಿಜೆಪಿ ಉಪಾಧ್ಯಕ್ಷ ಬಿ.ಎಸ್. ವಿಜಯೇಂದ್ರ ಅವರನ್ನು ಭೇಟಿ ಮಾಡೋಣ ಎಂದು ನಿರ್ಧಾರ ತೆಗೆದುಕೊಳ್ಳಲಾಯಿತು.

ದಿನ ನಿಗದಿಯಾದ ನಂತರ ಕೊರೊನಾ ಹಿನ್ನೆಲೆಯಲ್ಲಿ 20 ಜನರು ಮಾತ್ರ ಬೆಂಗಳೂರಿಗೆ ತೆರಳಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡುವುದಾಗಿ ಶಾಸ್ತ್ರಿ ಹೇಳಿದರು.

## ಭಗವದ್ಗೀತೆ ವೇದಿಕೆ ಸಂಘಟನೆಯಿಂದ ಸ್ವಾತಂತ್ರ್ಯ ಹೋರಾಟಗಾರರ ಪುಣ್ಯಸ್ಮರಣೆ



ದಾವಣಗೆರೆ, ಮಾ. 23 - ನಗರದ ಭಗವದ್ಗೀತೆ ವೇದಿಕೆ ಸಂಘಟನೆಯಿಂದ ಕಚೇರಿಯಲ್ಲಿ ಸ್ವಾತಂತ್ರ್ಯ ಹೋರಾಟಗಾರರಾದ ಭಗತ್ ಸಿಂಗ್, ರಾಜ್ ಗುರು, ಸುಖ್ ದೇವ್ ಅವರುಗಳ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಶ್ರೀ ರಾಮ ಸೇನೆಯ ಅಧ್ಯಕ್ಷ ರಮೇಶ್, ಸಂಘಟನೆಯ ಎಲ್ಲಾ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಮತ್ತಿತರರು ಉಪಸ್ಥಿತರಿದ್ದರು.

## ಚಕ್ರಬಡ್ಡಿಗೆ ಸುಪ್ರೀಂ ತಡೆ

**(1ನೇ ಪುಟದಿಂದ)** ಸರ್ಕಾರ ಮತ್ತು ರಿಸರ್ವ್ ಬ್ಯಾಂಕ್ ನಿರ್ಧಾರದಲ್ಲಿ ಮಧ್ಯ ಪ್ರವೇಶಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಇದು ಹಣಕಾಸು ನೀತಿಯ ವಿಷಯವಾಗಿರುವುದರಿಂದ ಮಧ್ಯ ಪ್ರವೇಶ ಮಾಡುವುದಿಲ್ಲ ಎಂದು ನ್ಯಾಯಾಲಯ ಹೇಳಿದೆ.

ಹಲವಾರು ವಾಣಿಜ್ಯ ಸಂಘಟನೆಗಳು, ರಿಯಲ್ ಎಸ್ಟೇಟ್ ವಲಯದವರು ಹಾಗೂ ವಿದ್ಯುತ್ ವಲಯ ಸೇರಿದಂತೆ, ಹಲವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿ ಕೊರೊನಾ ಹಿನ್ನೆಲೆಯಲ್ಲಿ ಸಾಲ ಮರು ಪಾವತಿ ಗಡುವು ವಿಸ್ತರಿಸಬೇಕೆಂದು ಕೋರಿದ್ದರು. ಕಳೆದ ವರ್ಷ ಮಾರ್ಚ್ 27ರಂದು ರಿಸರ್ವ್ ಬ್ಯಾಂಕ್ ಸಾಲದ ಕಂತುಗಳ ಮರು ಪಾವತಿಗೆ ಒಟ್ಟು ಆರು ತಿಂಗಳ ಗಡುವು ವಿಸ್ತರಿಸಿತ್ತು.

ಸಾಲದ ಕಂತು ಅವಧಿ ವಿಸ್ತರಿಸಬೇಕೆಂಬ ಮನವಿಯನ್ನು ಒಪ್ಪದ ನ್ಯಾಯಾಲಯ, ಕೇಂದ್ರ ಸರ್ಕಾರ ಹಾಗೂ ರಿಸರ್ವ್ ಬ್ಯಾಂಕ್‌ಗಳು ಸಾಲಗಾರರಿಗೆ ಪರಿಹಾರ ನೀಡುವುದನ್ನು ಪರಿಗಣಿಸಿಲ್ಲ ಎಂದು ಹೇಳಲಾಗದು. ಸಂಪೂರ್ಣ ಬಡ್ಡಿ ಮನ್ನಾ ಮಾಡುವುದರಿಂದ ಭಾರೀ ಹಣಕಾಸು ಪರಿಣಾಮವಾಗುವುದರಿಂದ, ಈ ವಿಷಯದಲ್ಲಿ ಮಧ್ಯ ಪ್ರವೇಶಿಸಲಾಗದು ಎಂದು ನ್ಯಾಯಾಲಯ ತಿಳಿಸಿದೆ.

ಎಲ್ಲಾ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡುವುದಾದರೆ ಇದರಿಂದ ಸರ್ಕಾರಕ್ಕೆ 6 ಲಕ್ಷ ಕೋಟಿ ರೂಗಳ ಹೊರೆಯಾಗುತ್ತದೆ. ಬ್ಯಾಂಕುಗಳು ಈ ಹೊರೆ ಹೊರಬೇಕು ಎಂದು ತಿಳಿಸಿದರೆ ಅವುಗಳ ಅಸ್ತಿತ್ವದ ಮೇಲೆ ಪರಿಣಾಮವಾಗುತ್ತದೆ ಎಂದು ಕೇಂದ್ರ ಸರ್ಕಾರ ನ್ಯಾಯಾಲಯಕ್ಕೆ ತಿಳಿಸಿತ್ತು.

## ಪಕ್ಷದಿಂದ ಉಚ್ಛಾಟನೆ



ದಾವಣಗೆರೆ, ಮಾ.23- ಪಕ್ಷ ವಿರೋಧಿ ಚಟುವಟಿಕೆ ನಡೆಸಿದ್ದಾರೆಂಬ ಆರೋಪದ ಹಿನ್ನೆಲೆಯಲ್ಲಿ ಜಿಲ್ಲಾ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಮಹಮ್ಮದ್ ಮುಜಾಹಿದ್ ಪಾಷಾ ಅವರನ್ನು ಪ್ರಾಥಮಿಕ ಸದಸ್ಯತ್ವದಿಂದ 6 ವರ್ಷಗಳ ಕಾಲ ಉಚ್ಛಾಟನೆ ಮಾಡಲಾಗಿದೆ ಎಂದು ಪಕ್ಷದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ ತಿಳಿಸಿದ್ದಾರೆ.

## ಕುಡಿವ ನೀರಿನ ಸಮಸ್ಯೆ ಇಲ್ಲ

**(1ನೇ ಪುಟದಿಂದ)** ಯೋಜನೆಯ ಕಾಮಗಾರಿಯನ್ನೂ ಪರಿಶೀಲಿಸಲಾಯಿತು. ಈ ಕಾಮಗಾರಿ ಭರದಿಂದ ನಡೆದಿದೆ ಎಂದರು. ಟಿವಿ ಸ್ಟೇಷನ್ ಕೆರೆಗೆ ಚಾನಲ್ ನೀರು ಬರುತ್ತಿದ್ದು, ಕೆರೆಯಲ್ಲಿ ಸಾಕಷ್ಟು ನೀರಿದೆ. ಕುಂದುವಾಡ ಕೆರೆ ಅಭಿವೃದ್ಧಿ ಯಾಗುತ್ತಿರುವ ಕಾರಣ, ರಾಜನಹಳ್ಳಿ ಪಂಪ್ ಹೌಸ್ ನಿಂದ ನೇರ ಕುಂದುವಾಡ ಕೆರೆ ಪಂಪ್ ಹೌಸ್ ಗೆ ಬರುವ ನೀರು ಅಲ್ಲಿ ಶುದ್ಧೀಕರಣಗೊಂಡು ನಾಗರಿಕರಿಗೆ ಸರಬರಾಜು ಮಾಡಲಾಗುತ್ತಿದೆ ಎಂದು ಅವರು ತಿಳಿಸಿದರು. ನಗರದ ಕೆಲ ಭಾಗಗಳಿಗೆ 5-6 ದಿನಗಳಿಗೊಮ್ಮೆ ಮತ್ತೆ ಕೆಲವು ಭಾಗಗಳಿಗೆ 6-7 ದಿನಗಳಿಗೊಮ್ಮೆ ನೀರು ಸರಬರಾಜು ಮಾಡಲಾಗುತ್ತಿದ್ದು, ಒಟ್ಟಿನಲ್ಲಿ ಬೇಸಿಗೆ ಅವಧಿಯಲ್ಲಿ ಜನರಿಗೆ ಕುಡಿಯುವ ನೀರಿನ ತೊಂದರೆಯಾಗದಿರುವಂತೆ ಎಚ್ಚರಿಕೆ ವಹಿಸಲಾಗಿದೆ ಎಂದು ಅವರು ವಿವರಿಸಿದರು.

ವಕೀಲ ಎ.ವೈ. ಪ್ರಕಾಶ್, ಮುಖಂಡ ಶ್ರೀನಿವಾಸ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಓದುಗರ ಪತ್ರ


### ಕೊರೊನಾ ಕಾರ್ಖಾನೆಗಳಂತಾಗದಿರಲಿ ಶಾಲಾ - ಕಾಲೇಜುಗಳು...

ಮಾನ್ಯರೇ,

ಇತ್ತೀಚೆಗೆ ಉಡುಪಿಯ ಮಣಿಪಾಲ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ನಲ್ಲಿಯೇ ಮೂವತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳು ಮತ್ತು ಮಲ್ಲೇಶ್ವರಂನ ಹಾಸ್ಟೆಲ್‌ನಲ್ಲಿ ಹದಿನೈದಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿಗೆ ಕೋವಿಡ್ ದೃಢವಾಗಿತ್ತು. ಸರ್ಕಾರ ಅವಶ್ಯವಿದ್ದರೆ ಈಗಿನಿಂದಲೇ ಶಾಲಾ-ಕಾಲೇಜುಗಳಿಗೆ ರಜೆ ಘೋಷಿಸುವುದು ಒಳಿತು, ಸರ್ಕಾರ ಹೀಗೆಯೇ ಭಂಡತನ ಮತ್ತು ಜಾಣ ಕುರುಡು ಪ್ರದರ್ಶಿಸಿದರೆ ಭವಿಷ್ಯದಲ್ಲಿ ಹೀಗೆಯೇ ಸೋಂಕು ಮುಂದುವರೆದರೆ ಶಾಲಾ-ಕಾಲೇಜುಗಳು ಕೊರೊನಾ ಕಾರ್ಖಾನೆಗಳಾಗುವುದರಲ್ಲಿ ಯಾವುದೇ ಅನುಮಾನವಿಲ್ಲ. ರಾಜ್ಯ ಸರ್ಕಾರ ಈಗಿನಿಂದಲೇ ಜವಾಬ್ದಾರಿಯುತವಾದ ನಿರ್ಧಾರ ತೆಗೆದುಕೊಂಡು ಶಾಲಾ-ಕಾಲೇಜುಗಳಿಗೆ ರಜೆ ಘೋಷಿಸಿ ಸಮಯಪ್ರಜ್ಞೆ ಮೆರೆಯಬೇಕಾಗಿದೆ. ಇಲ್ಲದಿದ್ದರೆ ಭವಿಷ್ಯದಲ್ಲಿ ಭಾರೀ ಬೆಲೆ ತೆರಬೇಕಾದೀತು ಎಚ್ಚರ.

- ಮುರುಗೇಶ ಡಿ., ದಾವಣಗೆರೆ.

## 15ನೇ ವರ್ಷದ ಪುಣ್ಯಸ್ಮರಣೆ



**ಹೆಚ್.ಎಂ.ಪ್ರಕಾಶ್‌ರವರು**

(ನೇತ್ರದಾನಿ) ಹಾಲುವರ್ತಿ ಗ್ರಾಮ.

ಜನನ: 27.10.1974 ಮರಣ: 24.03.2006

ನೀವು ನಮ್ಮನ್ನಗಲಿ ಇಂದಿಗೆ 15 ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿರುವ

**ತಂದೆ : ಹೆಚ್.ಡಿ.ಮಹೇಶ್ವರಪ್ಪ**
**ತಾಯಿ: ಶಿವನಾಗಮ್ಮ**
**ಸಹೋದರರು, ಅಕ್ಕಂದಿರು ಹಾಗೂ ಬಂಧು-ಬಳಗ, ಹಾಲುವರ್ತಿ ಗ್ರಾಮ, ದಾವಣಗೆರೆ ತಾಲ್ಲೂಕು.**

## ವೈ.ಎಂ. ಪಾರ್ವತಮ್ಮ ನಿಧನ



ದಾವಣಗೆರೆ ವಿನಾಯಕ ಬಡಾವಣೆ ವಿದ್ಯಾನಗರ, 1ನೇ ಮೇನ್ 7ನೇ ಕ್ರಾಸ್ ವಾಸಿ, ಹೊಳಲ್ಕೆರೆ ತಾಲ್ಲೂಕು ಚನ್ನಪ್ಪನಹಟ್ಟಿ ಗ್ರಾಮದ ದಿ|| ಸಿ.ಹೆಚ್. ಯಶವಂತಪ್ಪ ಇವರ ಧರ್ಮಪತ್ನಿ

**ಶ್ರೀಮತಿ ವೈ.ಎಂ. ಪಾರ್ವತಮ್ಮ**

ಅವರು ದಿನಾಂಕ 23.03.2021ರ ಮಂಗಳವಾರ ಸಂಜೆ 4.45 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೃತರಿಗೆ 78 ವರ್ಷ ವಯಸ್ಸಾಗಿತ್ತು.

ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 24.03.2021ರ ಬುಧವಾರ ಮಧ್ಯಾಹ್ನ 12 ಗಂಟೆಗೆ ನಗರದ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ಇಂತಿ ದುಃಖತಪ್ತರು : ಪ್ರೊ. ಪಿ.ವೈ. ಮಲ್ಲಿಕಾರ್ಜುನ ಮತ್ತು ಶ್ರೀಮತಿ ಶಶಿಕಲಾ ಮಲ್ಲಿಕಾರ್ಜುನ್, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಮಕ್ಕಳು, ಮೊಮ್ಮಕ್ಕಳು, ದಾವಣಗೆರೆ. ಮೊ. : 97378 18568**


## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 23.3.2021ರ ಮಂಗಳವಾರ
ಬೆಳಿಗ್ಗೆ 7.30ಕ್ಕೆ ನಿಧನರಾದ
**ವಿಕ್ಟರಿ ಡಿಜಿಟಲ್ ನಿರ್ದೇಶಕರಾದ ತಿಪ್ಪೇಸ್ವಾಮಿ ಅವರ ತಾಯಿಯವರಾದ**
**ಶ್ರೀಮತಿ ಲಕ್ಷ್ಮಮ್ಮ ಬಸವರಾಜಪ್ಪ**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಪ್ರಾರ್ಥಿಸುವ.

VoneFibernet

**ವಿಕ್ಟರಿ ಡಿಜಿಟಲ್ ನೆಟ್‌ವರ್ಕ್ಸ್ ಪ್ರೈವೇಟ್ ಲಿಮಿಟೆಡ್‌ನ ಸಮಸ್ತ ಕೇಬಲ್ ಆಪರೇಟರ್‌ಗಳು ಹಾಗೂ ಸಿಬ್ಬಂದಿ ವರ್ಗದವರು**
ಪಿ.ಬಿ. ರಸ್ತೆ, ದಾವಣಗೆರೆ.

||ಶ್ರೀ ಸಿದ್ದೇಶ್ವರ ಪ್ರಸನ್ನ||

## ಕೈಲಾಸ ಸಮಾರಾಧನೆ ಆಹ್ವಾನ




ದಾವಣಗೆರೆ ಪಿ.ಜೆ. ಬಡಾವಣೆ,
3ನೇ ಮೇನ್, 3ನೇ ಕ್ರಾಸ್ ವಾಸಿ
ಈಶ್ವರ್ ರೇಡಿಯೋ
**ಎ. ಶಿವಾನಂದಪ್ಪನವರು**
ಮಾಡುವ ವಿಜ್ಞಾಪನೆಗಳು.
ದಿನಾಂಕ : 20.03.2021ನೇ ಶನಿವಾರ
ಸಂಜೆ 5.00 ಗಂಟೆಗೆ ನನ್ನ ಅಣ್ಣನವರಾದ
**ದಿ|| ಎ. ಪರಮೇಶ್ವರಪ್ಪನವರ**
ತೃತೀಯ ಪುತ್ರ
**ದಿ|| ಶ್ರೀ ಎ.ಪಿ. ದಿವಾಕರ್ ಇವರು**
ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಸಮಾರಾಧನೆ'ಯನ್ನು**
**ದಿನಾಂಕ : 24.03.2021ನೇ ಬುಧವಾರದಂದು ಬೆಳಿಗ್ಗೆ 11.30ಕ್ಕೆ ತೊಗಟವೀರ ಕಲ್ಯಾಣ ಮಂಟಪ ಎಂ.ಸಿ.ಸಿ. "ಎ" ಬ್ಲಾಕ್, ದಾವಣಗೆರೆಯಲ್ಲಿ** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

**ಇಂತಿ ದುಃಖತಪ್ತರು : ಶ್ರೀಮತಿ ಎ. ಸೌಭಾಗ್ಯ ದಿವಾಕರ್ ಮತ್ತು ಮಕ್ಕಳು, ಅಣಪೂರ್ ವಂಶಸ್ಥರು, ಕಾರಿಗನೂರು ಪಟೇಲ್ ವಂಶಸ್ಥರು ಹಾಗೂ ಬಂಧು-ಮಿತ್ರರು, ಫೋ. : 88929 87999**


ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.


## ಸುಧಾಮಣಿ ಡಿ.ಎಸ್. ನಿಧನ



ದಾವಣಗೆರೆ ತರಳಬಾಳು ಬಡಾವಣೆ ವಾಸಿ, ಉಳುಪಿನಕಟ್ಟೆ ದಿ|| ಕಡ್ಲಪ್ಪರ ಸಿದ್ದಪ್ಪನವರ ಪುತ್ರ, ಡಾ|| ಹೆಚ್.ಎಸ್. ಜಯಪ್ಪ ಇವರ ಪತ್ನಿ ನಿವೃತ್ತ ಉಪನ್ಯಾಸಕಿ ಡಿ.ಎಸ್. ಸುಧಾಮಣಿ (72) ಇವರು ದಿನಾಂಕ 23.03.2021 ರ ಮಂಗಳವಾರ ಸಂಜೆ 5.40 ಕ್ಕೆ ನಿಧನರಾದರು. ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 24.03.2021ರ ಬುಧವಾರ ಮಧ್ಯಾಹ್ನ 12.30 ಕ್ಕೆ ದಾವಣಗೆರೆ ತಾಲ್ಲೂಕು ಉಳುಪಿನಕಟ್ಟೆ ಗ್ರಾಮದಲ್ಲಿ ನೆರವೇರಲಿದೆ.

## ಶ್ರೀಮತಿ ಶಕುಂತಲಮ್ಮ ನಿಧನ



ಹರಪನಹಳ್ಳಿ ತಾಲ್ಲೂಕು (ವಿಜಯನಗರ ಜಿಲ್ಲೆ) ಚಿಕ್ಕಮೇಗಳಗೆರೆ ವಾಸಿ, ಚಂದ್ರಶೇಖರಯ್ಯ, ನಿವೃತ್ತ ಪ್ರೊಫೆಸರ್, ಬಿಐಇಟಿ ಕಾಲೇಜ್, ದಾವಣಗೆರೆ. ಇವರ ಧರ್ಮಪತ್ನಿ ಶ್ರೀಮತಿ ಶಕುಂತಲಮ್ಮ ಇವರು ದಿನಾಂಕ 23.3.2021ರ ಮಂಗಳವಾರ ಲಿಂಗೈಕ್ಯರಾಗಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ದಿನಾಂಕ : 24.03.2021ರ ಬುಧವಾರ ಬೆಳಿಗ್ಗೆ 11 ಗಂಟೆಗೆ ಮೃತರ ಸ್ವಗ್ರಾಮ ಚಿಕ್ಕಮೇಗಳಗೆರೆಯ ಸಾರ್ವಜನಿಕ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

## ಪಾಸಿಟಿವಿಟಿ ಹೆಚ್ಚಳ

**(1ನೇ ಪುಟದಿಂದ)** ಸಿಟಿ, ಆರೈಕೆ, ಆಶ್ರಯ, ಸಂಜೀವಿನಿ, ಸುಕ್ಷೇಮ ಸೇರಿದಂತೆ ವಿವಿಧ ಆಸ್ಪತ್ರೆಗಳು ಕೂಡ ಪರಿಸ್ಥಿತಿ ಎದುರಿಸಲು ಸಿದ್ಧವಾಗಿರಬೇಕು ಎಂದರು. ಸಭೆಯಲ್ಲಿ ಜಿ.ಪಂ. ಸಿಇಒ ಡಾ. ವಿಜಯಮಹಾಂತೇಶ್ ದಾನಮ್ಮನವರ್, ಕೋವಿಡ್ ಜಿಲ್ಲಾ ನೋಡಲ್ ಅಧಿಕಾರಿ ಪ್ರಮೋದ್, ಎಡಿಸಿ ಪೂಜಾರ್ ವೀರಮಲ್ಲಪ್ಪ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಜೀವ್, ಆರ್‌ಸಿಹೆಚ್ ಅಧಿಕಾರಿ ಡಾ. ಮೀನಾಕ್ಷಿ, ಚಿಗಟೇರಿ ಜಿಲ್ಲಾ ಆಸ್ಪತ್ರೆ ಶಸ್ತ್ರ ಚಿಕಿತ್ಸಕ ಡಾ. ಜಯಪ್ರಕಾಶ್, ತಜ್ಞ ವೈದ್ಯರುಗಳಾದ ಡಾ. ಬಾಲು, ಡಾ. ಸುರೇಂದ್ರ ಇತರರಿದ್ದರು.

# ಶೀಘ್ರವಾಗಿ ಅಂತರ್ಜಲ ಮಟ್ಟವನ್ನು ಹೆಚ್ಚಿಸಬಲ್ಲ ಜೈನ್ ವಿಧಾನ

ಸಕಲ ಜೀವ ಗಳಿಗೆ ಜೀವಾಮೃತವಾದ ಅಂತರ್ಜಲ ಇತ್ತೀಚೆಗೆ ಕೆಲವೊಂದು ಪ್ರದೇಶಗಳಲ್ಲಿ 1500 ದಿಂದ 2000 ಅಡಿಗಳಷ್ಟು ಆಳದ ಕೊಳವೆ ಬಾವಿ ಕೊರೆದರೂ ಸಿಗದಂತಹ ಪರಿಸ್ಥಿತಿಯನ್ನು ನಾವೇ (ಪೂರ್ಣವಾಗಿ ಮಾನವ ಜಾತಿ) ಸೃಷ್ಟಿಸಿ ಕೊಂಡಿದ್ದೇವೆ.

ಬಾವಿಗಳನ್ನು ತೊಡಿಸುವ ಮೊದಲು ಸಹಸ್ರಾರು ವರ್ಷಗಳಿಂದ ನೆಲದ ಮೇಲೆ ಹಲವು ಕಾರಣಗಳಿಂದ ಹರಿಯುತ್ತಿದ್ದ ನೀರು ನೆಲದಾಳಕ್ಕೆ ಇಂಗಿ ಅಂತರ್ಜಲ ಸಂಗ್ರಹವಾಗುತ್ತಿತ್ತು. ಮನುಷ್ಯ ಬಾವಿಗಳನ್ನು ತೋಡಲು ಪ್ರಾರಂಭಿಸಿ ಸಹಸ್ರಾರು ವರ್ಷಗಳಾದರೂ ಅವುಗಳಿಂದ ನೀರೆತ್ತುವ ಒಟ್ಟು ಪ್ರಮಾಣ ಕಳೆದ ನಾಲ್ಕೈದು ದಶಕಗಳವರೆಗೂ ಅತ್ಯಂತ ಕಡಿಮೆ ಮಟ್ಟದಲ್ಲಿತ್ತು. ಅದಕ್ಕೆ ಮುಖ್ಯ ಕಾರಣ ವಿದ್ಯುತ್ ಹಾಗೂ ಡೀಸೆಲ್ ನ ಬಳಕೆ ಇಲ್ಲದಿದ್ದುದು. ಆವಾಗ ಪ್ರತೀ ವರ್ಷವೂ ಕಪ್ಲೆ ಅಥವಾ ಇನ್ನಿತರೆ ಶ್ರಮ ವಹಿಸಿ ನೀರೆತ್ತುವ ಜೊತೆ ಜೊತೆಗೆ ನೆಲದ ಮೇಲ್ಪದರಗಳಲ್ಲಿದ್ದ ನೀರು ಕೂಡಾ ಮತ್ತೆ ಅಂತರ್ಜಲ ವಲಯಗಳಲ್ಲಿ ಸೇರಿಕೊಂಡು ಸರಾಸರಿ ಮಟ್ಟದ ಸುಧಾರಣೆ ಆಗುತ್ತಿತ್ತು. ಕಾಲಕ್ರಮೇಣ ಬಾವಿಗಳಿಂದ ಪಂಪ್ ಸೆಟ್ ಗಳ ಮೂಲಕ ನೀರನ್ನು ಹಾಯಿಸುವುದನ್ನು ಪ್ರಾರಂಭಿಸಲಾಯಿತು. ಆದರೆ ನಿಜವಾದ ಸಮಸ್ಯೆ ಶುರುವಾದದ್ದು ಕೊಳವೆ ಬಾವಿ ಕೊರೆದು ಅತಿ ಹೆಚ್ಚು ಕ್ಷಮತೆಯ ಸಬ್ ಮರ್ಸಿಬಲ್ ಪಂಪುಗಳನ್ನು ಅಳವಡಿಸಿ ನೀರೆತ್ತ ತೊಡಗಿದ ನಂತರವೇ. ಭೂಗರ್ಭದಲ್ಲಿ ಶೇಖರಣೆ ಆಗಿದ್ದ ಅಪಾರವಾದ ಅಂತರ್ಜಲ ಬತ್ತ ತೊಡಗಿತು. ಈ ರೀತಿಯಲ್ಲಿ ಪ್ರಾರಂಭವಾದ ಅವನತಿ ಈಗಾಗಲೇ ಎಲ್ಲಿಗೆ ತಲುಪಿದೆ ಎಂದರೆ ನಮ್ಮ ಕರ್ನಾಟಕದಲ್ಲೇ ಹಲವಾರು ಕಡೆ ಕೊಳವೆ ಬಾವಿಗಳಲ್ಲಿ ಅಂತರ್ಜಲ ಸಿಗುವುದೇ 1000 ದಿಂದ 1500 ಅಡಿಗಳ ವರೆಗೆ ಇಳಿದಿದೆ.

ಇತ್ತೀಚೆಗೆ ವಿಶ್ವ ಜಲ ದಿನವನ್ನು ಆಚರಿಸಲಾಯಿತು. ಕಛೇರಿಗಳಲ್ಲಿ ಕೂತು, ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದು ಚಿಂತನೆಗಳನ್ನು ಹರಿಬಿಡುವುದರ ಮೂಲಕ ಅಂತರ್ಜಲ ಮಟ್ಟವನ್ನು ಹೆಚ್ಚಿಸುವುದು ಸಾಧ್ಯವಿಲ್ಲ. ಕಟ್ಟಡಗಳ ಮೇಲಿಂದ ಮಳೆ ನೀರನ್ನು ಸಂಗ್ರಹಿಸಿ ಬೋರ್ ವೆಲ್ ಗಳಿಗೆ ಬಿಡುವುದರಿಂದ ಅಂತರ್ಜಲ ಮಟ್ಟ ಹೆಚ್ಚಿಸುವ ಮಾತೇ ಹಾಸ್ಯಾಸ್ಪದ. ಏಕೆಂದರೆ ದಿನಕ್ಕೆ ಸಹಸ್ರಾರು ಲೀಟರ್ ನೀರು ಬಳಸುವ ನಮಗೆ, ವರ್ಷವೊಂದಕ್ಕೆ ನಾಲ್ಕಾರು ಸಾವಿರ ಲೀಟರ್ ನೀರನ್ನು ನೆಲದಾಳಕ್ಕೆ ಬಿಡುವುದರಿಂದ ಯಾವುದೇ ರೀತಿಯ ಪ್ರಯೋಜನವಾಗಿಲ್ಲ, ಆಗಲ್ಲ. ಅದಲ್ಲದೇ ದೊಡ್ಡ ದೊಡ್ಡ ಕಟ್ಟಡಗಳಿರುವ ನಗರಗಳಲ್ಲಿ ಕಟ್ಟಡಗಳ ಮೇಲಿನ ನೀರನ್ನು ಅಂತರ್ಜಲ ವಲಯಕ್ಕೆ ಸೇರಿಸಿದರೆ ಇಡೀ ನೆಲದಾಳದ ನೀರು ಕಲುಷಿತಗೊಳ್ಳುವ ಅಪಾಯ ಕೂಡಾ ಕಟ್ಟಿಟ್ಟ ಬುತ್ತಿ.

ಕೆರೆಗಳಲ್ಲಿ ಅಪಾರ ವಿದ್ಯುತ್ ಬಳಸಿ ಪೈಪ್ ಲೈನ್ ಗಳನ್ನು ಅಳವಡಿಸಿ ನೀರನ್ನು ತುಂಬಿಸುವುದು, ಚೆಕ್ ಡ್ಯಾಂ ಕಟ್ಟಿ ನೀರು ನಿಲ್ಲಿಸುವುದು, ಕೃಷಿ ಹೊಂಡ ಕಟ್ಟುವುದು ಮುಂತಾದ ವಿಧಾನಗಳಿಂದ ಕೊಂಚ ಮಟ್ಟಿಗೆ ಪ್ರಯೋಜನ ಆದರೂ ಇವುಗಳಲ್ಲಿ ಪುನಃ ಪುನಃ ನೀರು ತುಂಬಿಸುವ ಮತ್ತು ನಿರ್ವಹಣಾ ವೆಚ್ಚಕ್ಕೆ ಬೇಕಾಗುವ ಖರ್ಚಿನ ಮುಂದೆ ಇವುಗಳ ಪ್ರಯೋಜನ ನಗಣ್ಯ. ಏಕೆಂದರೆ ಈ ಯೋಜನೆಗಳಲ್ಲಿ ನೀರು ನೆಲದಾಳಕ್ಕೆ ಇಂಗುವುದಕ್ಕಿಂತ ಬಿಸಿಲಿನ ತಾಪಕ್ಕೆ ಆವಿಯಾಗಿ ಹೋಗುವ ಪ್ರಮಾಣವೇ ಹೆಚ್ಚು.

**ಮಾಡಬೇಕಾದದ್ದೇನು.....? :**

ಈ ಕೂಡಲೇ ಎಂದರೆ ಬೇಸಿಗೆಯಲ್ಲಿಯೇ ಬತ್ತಿ ಹೋಗಿರುವ ನದಿಗಳಲ್ಲಿ, ಕೆರೆಗಳಲ್ಲಿ ಮತ್ತಿತರೆ ಮಳೆಗಾಲಗಳಲ್ಲಿ ನೈಸರ್ಗಿಕವಾಗಿ ನೀರು ಹರಿಯುವ ದಾರಿ, ಹಳ್ಳಗಳಲ್ಲಿ





ಪಾಯಿಂಟ್ ಗುರುತಿಸಿಕೊಂಡು ಸುಮಾರು 300 ಅಡಿ ಆಳದಷ್ಟು ಹಲವಾರು ಕೊಳವೆ ಬಾವಿಗಳನ್ನು ಕೊರೆಯಿಸಿ, ಅವುಗಳಿಗೆ ನೆಲಮಟ್ಟದಿಂದ 2 ರಿಂದ 3 ಅಡಿಗಳಷ್ಟು ಎತ್ತರದವರೆಗೆ ಕೇಸಿಂಗ್ ಪೈಪಿರಿಸಿ, ಅದರ ಬಾಯಿ ಮುಚ್ಚದೇ ಸುತ್ತಲೂ ಗಟ್ಟಿಮುಟ್ಟಾದ ಜಂಗು ಹಿಡಿಯಲಾರದಂತಹ ಜಾಲರಿ ಅಳವಡಿಸಿದರೆ ಯೋಜನೆಯ ಕಾಮಗಾರಿ ಮುಗಿದಂತೆ.

ಈ ರೀತಿ ಒಂದೇ ಒಂದು ಸಲದ ಸಿದ್ಧತೆ ಮಾಡಿದ ನಂತರ ಮಳೆಗಾಲ ಆರಂಭವಾದಾಗ ಹರಿಯಲು ಪ್ರಾರಂಭಿಸುವ ಮಳೆ ನೀರು ಶುರುವಿನಲ್ಲಿ ಕಸ ಕಡ್ಡಿ ಇತ್ಯಾದಿ ಗಲೀಜೆಲ್ಲ ಕೊಚ್ಚಿಕೊಂಡು ಹೋದ ನಂತರ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಯಲು ಆರಂಭಿಸಿದಾಗ ಭಾರೀ ಪ್ರಮಾಣದಲ್ಲಿ ಮಳೆ ನೀರು ಈ ಕೊಳವೆಬಾವಿ ಬಾವಿಗಳ ಮೂಲಕ ಯಾವುದೇ ಅಡೆ ತಡೆ ಇಲ್ಲದೆ ನೇರವಾಗಿ ಅಂತರ್ಜಲ ವಲಯಕ್ಕೆ ಸೇರಿ ಅಂತರ್ಜಲ ಮಟ್ಟವನ್ನು ಅದ್ಭುತವಾಗಿ ಏರಿಸುವುದು. ಈ ರೀತಿ ಭೋರ್ಗರೆಯುತ್ತಾ ಕೆಳಕ್ಕಿಳಿವ ನೀರು ಯಾವುದೇ ಗಡಿಯ, ಇತಿ ಮಿತಿ ಇಲ್ಲದೇ ಪಸರಿಸುವುದರಿಂದ ಮಳೆ ನೀರು ನಿರ್ದಿಷ್ಟ ಪ್ರದೇಶದಲ್ಲಿ ಕೆಲವೇ ಕೊಳವೆ ಬಾವಿಗಳ ಮೂಲಕ ನೆಲದಾಳಕ್ಕೆ ಇಳಿದರೂ ಒಮ್ಮೆ ಇಳಿಯಲು ಪ್ರಾರಂಭಿ ಸುವ ಜೀವ ಜಲ ಅಷ್ಟ ದಿಕ್ಕುಗಳಲ್ಲಿಯೂ ಪಸರಿಸುವುದನ್ನು ಕಾಣಬಹುದು.

'ಯಥೇಚ್ಛವಾಗಿ ನೀರಿರುವ ಕಡೆ ನೀರಿನ ಹರಿವನ್ನು ನಿರಂತರವಾಗಿ ನೆಲದಾಳಕ್ಕೆ ನೈಸರ್ಗಿಕವಾಗಿ ಹೊರಳಿಸುವುದೇ ಈ ವಿಧಾನದ ಮೂಲ ಮಂತ್ರ'

**ಈ ವಿಧಾನದ ಪ್ರಯೋಜನ ಹಾಗೂ ವಿಶೇಷತೆಗಳು**

1. ಪ್ರತಿಯೊಂದು ಕೊಳವೆ ಬಾವಿಯಿಂದಲೂ ಪ್ರತಿ ಗಂಟೆಗೆ ಲಕ್ಷಗಟ್ಟಲೆ ಲೀಟರ್ ನೀರು ಅಂತರ್ಜಲ ವಲಯವನ್ನು ಸೇರುವುದರಿಂದ ಅಂತರ್ಜಲ ಮಟ್ಟವು ವಿಸ್ಮಯಕಾರಿ ವೇಗದಲ್ಲಿ ಹೆಚ್ಚುವುದು.


2. ನೆಲದಾಳದಲ್ಲಿ ಮಳೆ ನೀರು ಶೇಖರಣೆಯಾಗುವುದರಿಂದ ಜೀವಜಲವು ಆವಿಯಾಗಿ ಹೋಗುವ ಸಾಧ್ಯತೆಗಳು ಇರುವುದಿಲ್ಲ.

3. ಈ ವಿಧಾನವನ್ನು ಒಮ್ಮೆ ಅಳವಡಿಸಿಕೊಂಡರೆ ಪ್ರತಿ ಮಳೆಗಾಲದಲ್ಲೂ ಯಾವುದೇ ಪುನರಾವರ್ತನೆ ಆಗುವಂತಹ ಖರ್ಚುಗಳಿರುವುದಿಲ್ಲ.

4. ಈ ವಿಧಾನಕ್ಕೆ ಯಾವುದೇ ರೀತಿಯ ಇಂಧನವಾಗಲೀ, ವಿದ್ಯುಚ್ಛಕ್ತಿಯದ್ದಾಗಲೀ ಅವಶ್ಯಕತೆ ಇರುವುದಿಲ್ಲ ಹಾಗೂ ಈ ಕಾರಣದಿಂದಾಗಿ ಯಾವುದೇ ಅಪಾಯವೂ ಇರುವುದಿಲ್ಲ.

5. ನೇರವಾಗಿ ಮಳೆಯ ನೀರು ಅಂತರ್ಜಲ ವಲಯಕ್ಕೆ ಸೇರುವುದರಿಂದ ಹಲವು ಅಪಾಯಕಾರಿಯಾಗಿರುವ ಫ್ಲೋರೈಡ್ ಇನ್ನಿತರ ರಾಸಾಯನಿಕಗಳಿಂದ ಗಡುಸಾದ ನೀರು ಕೂಡಾ ಬದಲಾಗಿ ಕುಡಿಯಲು ಯೋಗ್ಯವಾದ ಸುಜಲವಾಗುವುದು.


## ವಿಶ್ವ ಜಲ ದಿನ




6. ವಿದ್ಯುತ್ ಉಪಯೋಗಿಸಿ ಕೆರೆಗಳಿಗೆ ನೀರು ತುಂಬಿಸುವುದಕ್ಕಿಂತ ಇದು ತುಂಬಾ ಮಿತವ್ಯಯಕಾರಿ ಹಾಗೂ ಪರಿಣಾಮಕಾರಿಯಾದ ಯೋಜನೆ. ಹೂಳು ತುಂಬಿ ಕೆರೆಗಳ ಸಂಗ್ರಹ ಸಾಮರ್ಥ್ಯ ಕಡಿಮೆಯಾಗ ಬಹುದು, ಆದರೆ ದಶಕಗಳಿಂದ ನೀರೆತ್ತಿ ಖಾಲಿಯಾಗಿರುವ ಅಂತರ್ಜಲ ವಲಯದ ಸಂಗ್ರಹ ಸಾಮರ್ಥ್ಯ ಅಪರಿಮಿತ ವಾಗಿದ್ದು, ಹರಿಯುವ ನದಿಯನ್ನೇ ಅದರೊಳಕ್ಕೆ ಹರಿಸಿದರೂ ತುಂಬಲಾರದಷ್ಟು ಸ್ಥಳವುಳ್ಳದ್ದಾಗಿದೆ.

7. ನೈಸರ್ಗಿಕವಾಗಿ ಇರುವ ಅಪರಿಮಿತ ಅಂತರ್ಜಲ ಮಾರ್ಗಗಳನ್ನು ಉಪಯೋಗಿಸಿ ಕೊಂಡು ಈಗಾಗಲೇ ಬತ್ತಿ ಹೋಗಿ ರುವ ಕೊಳವೆ ಬಾವಿಗಳಲ್ಲಿ ಅಂತರ್ಜಲ ಮಟ್ಟ ಹೆಚ್ಚಿ ರೈತರು ತಮ್ಮ ತಮ್ಮ ಜಮೀನುಗಳಲ್ಲೇ ಕಡಿಮೆ ಖರ್ಚಿನಲ್ಲಿ ನೀರೆತ್ತಿಕೊಳ್ಳಬಹುದು.

8. ನೀರಿಲ್ಲದ ಅಥವಾ ನಗಣ್ಯವಾದ ನೀರಿನ ಮೂಲಗಳಿರುವ ಕಡೆಗಳಲ್ಲಿ ವೆಚ್ಚ ಮಾಡುವುದರಿಂದ ಆಗದ ಪ್ರಯೋಜನವು ಅಗಾಧ ಪ್ರಮಾಣ ದಲ್ಲಿ ನೀರು ಹರಿಯುವ ಮತ್ತು ನಿಲ್ಲುವ ಸ್ಥಳಗಳಲ್ಲಿ ಮಾಡುವುದ ರಿಂದ ಅತ್ಯಂತ ಕಡಿಮೆ ಖರ್ಚಿನಲ್ಲಿ ಅತೀ ಹೆಚ್ಚು ಪ್ರಯೋಜನಕಾರಿಯಾಗುವುದು.



ಜಲ ಮರುಪೂರಣಕ್ಕಾಗಿ ತೋಡುವ ಬೋರ್‌ವೆಲ್‌ನ ಕೇಸಿಂಗ್ ಪೈಪನ್ನು ಮುಚ್ಚಬಹುದಾದ ರೀತಿ,

9. ಈ ಯೋಜನೆಯ ಫಲಿತಾಂಶವನ್ನು ನೇರವಾಗಿ ನೋಡಲು ಕೂಡ ಸಾಧ್ಯವಿದೆ. ನದಿ ಅಥವಾ ಕೆರೆಗಳಲ್ಲಿ ತೋಡಿಸಿರುವ ಕೊಳವೆ ಬಾವಿಗಳಲ್ಲಿ ನೀರಿಳಿಯುವ ಸಂದರ್ಭದಲ್ಲಿ ನೀರಿನಲ್ಲಿ ಕರಗುವ ಬಣ್ಣ (ಅಪಾಯಕಾರಿಯಲ್ಲದ) ತುಂಬಿದ ಬಟ್ಟೆಯ ಚೀಲವೊಂದನ್ನು ಇಳಿಬಿಟ್ಟರೆ ಯಾವ ಯಾವ ಕೊಳವೆ ಬಾವಿಗಳಲ್ಲಿ ಈ ಬಣ್ಣದ ನೀರು ಹರಿದು ಬರುತ್ತಿದೆ ಎಂಬುದನ್ನು ನೋಡುವುದರ ಮೂಲಕ ನೆಲದಾಳದ ನೀರಿನ ಹರಿವಿನ ದಿಕ್ಕನ್ನು ಸಹಾ ಕಂಡು ಹಿಡಿಯಬಹುದು.

10. ಹೊಸ ಹೊಸ ಚೆಕ್ ಡ್ಯಾಂ, ಕೆರೆಗಳಿಗೆ ನೀರು ತುಂಬಿಸುವ, ಮೋಡ ಬಿತ್ತನೆ ಮಾಡುವ, ಕಟ್ಟಡಗಳ ಮೇಲಿಂದ ಬೋರ್ ವೆಲ್‌ಗಳಿಗೆ ನೀರು ಇಂಗುವಂತೆ ಮಾಡುವ ಎಲ್ಲಾ ವಿಧಾನಗಳಿಗಿಂತ ಈ ವಿಧಾನವು ಅತ್ಯಂತ ಮಿತವ್ಯಯಿ, ಪುನರಾವರ್ತನೆ ಆಗುವಂತಹ, ಯಾವುದೇ ಖರ್ಚಿಲ್ಲದೆ ಹಾಗೂ ನೇರವಾಗಿ ಅದ್ಭುತವಾದ ಫಲಿತಾಂಶವನ್ನು ನೀಡುವಂತಹ ವಿಧಾನ. ಗುರುತ್ವಾಕರ್ಷಣ ಶಕ್ತಿಯ ಸೆಳೆತ (Gravitational Force) ಹಾಗೂ ವಾಯು ಮಂಡಲದ (Atmospheric Pressure) ಒತ್ತಡಗಳಿಂದ ಅದ್ಭುತ ಹಾಗೂ ವಿಸ್ಮಯಕಾರಿ ಪ್ರಮಾಣದಲ್ಲಿ ಮಳೆ ನೀರು ಅಂತರ್ಜಲ ವಲಯಕ್ಕೆ ನುಗ್ಗುವುದು.

ಅನಾವಶ್ಯಕವಾಗಿ ಹರಿದು ಸಮುದ್ರ ಸೇರುವ ತಿಳಿಯಾದ, ಮೃದುವಾದ, ಕುಡಿಯಲು ಯೋಗ್ಯವಾದ ಮಳೆ ನೀರನ್ನು, ನಾವೇ ಬರಿದು ಮಾಡಿರುವ ನೈಸರ್ಗಿಕ ನೀರಿನ ಟ್ಯಾಂಕ್ ಗೆ ಹರಿಸಿ ನಮ್ಮ ಹಾಗೂ ಇಡೀ ಮನುಕುಲದ ಭವಿಷ್ಯವನ್ನು ಸುಧಾರಿಸಬಹುದು. ಈ ವಿಧಾನವನ್ನು ಅಳವಡಿಸಿಕೊಳ್ಳಲು ದಾವಣಗೆರೆ,ಹರಿಹರ ನಗರಗಳು ನೈಸರ್ಗಿಕವಾಗಿ ಅತ್ಯಂತ ಸೂಕ್ತವಾದ ತಾಣಗಳು. ಇಲ್ಲಿ ನದಿ ಪಾತ್ರಗಳು ಇವೆ, ಕೋಡಿ ಬೀಳುವಂತಹ ಕೆರೆಗಳೂ ಇವೆ, ವರುಣನ ಕೃಪೆಯಾದಾಗ ರಭಸದಿಂದ ಹರಿಯುವ ಹಳ್ಳಗಳು, ಕಾಲುವೆಗಳು ಇದ್ದು ಜೊತೆಗೆ ಒಣಗಿ ಬತ್ತಿ ಹೋಗಿರುವ ಸಹಸ್ರಾರು ಕೊಳವೆ ಬಾವಿಗಳು ಇವೆ. ಆದ್ದರಿಂದ ಇಲ್ಲಿ ಈ ವಿಧಾನವನ್ನು ಕಾರ್ಯಗತಗೊಳಿಸಿದರೆ ತಕ್ಷಣವೇ (ಬೇಸಿಗೆ ಕಳೆದು ಮಳೆಗಾಲ ಪ್ರಾರಂಭವಾದ ಕೂಡಲೇ) ಫಲಿತಾಂಶವನ್ನೂ ಕಾಣಬಹುದು. ಈ ವಿಧಾನವನ್ನು ಒಮ್ಮೆ ಅಳವಡಿಸಿಕೊಂಡರೆ ನಮ್ಮ ಜಿಲ್ಲೆಯು ಇಡೀ ರಾಜ್ಯ, ದೇಶ ಅಷ್ಟೇ ಅಲ್ಲದೇ ಇಡೀ ವಿಶ್ವಕ್ಕೇ ಮಾದರಿ ಆಗುವುದರಲ್ಲಿ ಯಾವುದೇ ಅನುಮಾನವಿಲ್ಲ.

**- ಜಯಚಂದ್ರ ಜೈನ್,**
ಅಂತರ್ಜಲ ಶೋಧಕರು, ದಾವಣಗೆರೆ.
ಮೊ: 98445 83442

### ಬಹುಮುಖ ಪ್ರತಿಭೆಯ ಜಯಚಂದ್ ಪಿ. ಜೈನ್



ದಾವಣಗೆರೆ ನಗರದ ಅಂತರ್ಜಲ ಶೋಧಕರಾದ ಜಯಚಂದ್ ಜೈನ್ ಅವರು ಬಿ.ಕಾಂ., ಎಲ್ ಎಲ್ ಬಿ., ಪದವೀಧರರಾದರೂ, ಅಂತರ್ಜಲದ ಬಗ್ಗೆ ಅಪಾರ ಆಸಕ್ತಿಯಿಂದ ಅಧ್ಯಯನ ಮತ್ತು ಪ್ರಾಯೋಗಿಕ ಅನುಭವ ಮಾಡಿದ್ದಾರೆ. ಕಳೆದ ಸುಮಾರು 35 ವರ್ಷಗಳಿಂದ ಅಂತರ್ಜಲ ಶೋಧನೆ ಮಾಡುತ್ತಿರುವ ಅವರು ಸಾಮಾಜಿಕ ಸೇವಾ ಸಂಸ್ಥೆ ಯಾದ ಜೈನ ಯುವಕ ಸಂಘದ ಸಂಸ್ಥಾಪಕ ಕಾರ್ಯದರ್ಶಿ.

ರಾಜ್ಯದ ಸಾಂಸ್ಕೃತಿಕ ರಾಯಭಾರಿಯಾಗಿ ಅಮೆರಿಕ ಮತ್ತು ಕೆನಡಾ ದೇಶಗಳಿಗೆ 1992 ರಷ್ಟು ಹಿಂದೆಯೇ ಭೇಟಿ ನೀಡಿ ತಮ್ಮ ಅಂತರ್ಜಲ ಶೋಧನೆಯ ವಿಧಾನದ ಬಗ್ಗೆ ಅಲ್ಲಿನವರಿಗೆ ಪಾಠ ಮಾಡಿದ ಹೆಗ್ಗಳಿಕೆ ಇವರದು. ನಂತರದ ದಿನಗಳಲ್ಲಿ 1998 ರಲ್ಲಿ ದಾವಣಗೆರೆ ರೋಟರಿ ಸಂಸ್ಥೆಯ ಅತ್ಯಂತ ಕಿರಿಯ ವಯಸ್ಸಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ದಶಕಗಳಿಂದ ಮುಚ್ಚಿ ಹೋಗಿದ್ದ ನಗರದ ಗೋಶಾಲೆ ಯನ್ನು ರಾಮಕೃಷ್ಣ ಹೆಗಡೆ ಅವರು ಮುಖ್ಯ ಮಂತ್ರಿಗಳಾಗಿದ್ದ ಸಮಯದಲ್ಲಿ ಯಾಮಾರಿಸಿದ್ಧ ಭೀಕರ ಬರಗಾಲದ ಸಮಯದಲ್ಲಿ ಪುನಃ ಪ್ರಾರಂಭ ಮಾಡುವಲ್ಲಿ ಜೈನ ಸಮುದಾಯದ ಹಲವು ಹಿರಿಯ ಮುಖಂಡರ ಜೊತೆ ಇವರದ್ದೂ ಒಂದು ಪ್ರಮುಖ ಪಾತ್ರ.

ಮೈಸೂರು ವಿಶ್ವವಿದ್ಯಾಲಯದ ಕಾನೂನು ಪದವಿಯನ್ನು ರ್‍ಯಾಂಕ್ ಮೂಲಕ ಪಡೆದು ಮೂರ್ನಾಲ್ಕು ವರ್ಷಗಳ ಕಾಲ ವಕೀಲಿ ವೃತ್ತಿ ಮಾಡಿದ್ದ ಜಯಚಂದ್ ಜೈನ್ ಅವರು ಅದೇ ಸಮಯದಲ್ಲಿ ಕಾನೂನು ವಿದ್ಯಾರ್ಥಿಗಳಿಗಾಗಿ ಲಾ ಆಫ್ ಇನ್ಶೂರೆನ್ಸ್ ಎಂಬ ಪುಸ್ತಕ ಬರೆದು ಪ್ರಕಟಿಸಿದ್ದಾರೆ. ಜೇಸೀಸ್ ಸಂಸ್ಥೆಯಿಂದ 'ಔಟ್ ಸ್ಟ್ಯಾಂಡಿಂಗ್ ಯಂಗ್ ಪರ್ಸನ್' ಎಂದು ರಾಜ್ಯ ಮಟ್ಟದಲ್ಲಿ ಸನ್ಮಾನಿತರಾದ ಇವರನ್ನು ಹಲವಾರು ಸಂಸ್ಥೆಗಳು ಗುರುತಿಸಿ ಸನ್ಮಾನಿಸಿ ಗೌರವಿಸಿವೆ. ಜವಳಿ ವರ್ತಕರ ಸಂಘದ ಸಹ ಕಾರ್ಯದರ್ಶಿಯಾಗಿ, ಗಿರವಿ ಮತ್ತು ಲೇವಾದೇವಿಗಾರರ ಸಂಘಕ್ಕೆ ದಶಕಗಳ ಕಾಲ ಅಧ್ಯಕ್ಷರಾಗಿದ್ದ ಅವರು, ಅಪ್ಪಟ ಕನ್ನಡ ಅಭಿಮಾನಿ. ಜಿಲ್ಲಾ ಕಾಂಗ್ರೆಸ್ ವಕ್ತಾರರಾಗಿಯೂ ರಾಜಕೀಯದಲ್ಲಿದ್ದರು.

ಆಂಗ್ಲ ಭಾಷೆಯಿಂದ ಕನ್ನಡಕ್ಕೆ, ಕನ್ನಡದಿಂದ ಇಂಗ್ಲಿಷಿಗೆ ಮತ್ತು ಇದೇ ರೀತಿ ಹಿಂದಿಯಿಂದ ಕನ್ನಡ, ಇಂಗ್ಲಿಷ್ ಗೆ ಅಚ್ಚುಕಟ್ಟಾಗಿ ಬೆಲೆ ಬಾಳುವ ಆಸ್ತಿ ಪತ್ರದಂತಹ ವಿಶೇಷ ದಸ್ತಾವೇಜುಗಳನ್ನು ಕೂಡ ಭಾಷಾಂತರ ಮಾಡಿಕೊಟ್ಟಿರುವ ಜೈನ್ ತ್ರೀ ಭಾಷಾ ತಜ್ಞರು.

ಭವಿಷ್ಯದಲ್ಲಿ ಉಂಟಾಗಬಹುದಾದ ಅಂತರ್ಜಲ ಕುಸಿತದ ಸಮಸ್ಯೆಯನ್ನು ಬಗ್ಗೆ 1999 ರಷ್ಟು ಹಿಂದೆಯೇ ಊಹಿಸಿ, ಗ್ರಹಿಸಿ ಅದಕ್ಕೆ ಪರಿಹಾರವನ್ನು ತಮ್ಮ ಸಂಶೋಧನಾ ಲೇಖನಗಳ ಮೂಲಕ ತೋರಿಸಿರುವ ಜಯಚಂದ್ ಜೈನ್ ಅವರಿಗೆ ತಮ್ಮ ಜೀವಿತಾವಧಿಯಲ್ಲಿ ತಾವು ಆವಿಷ್ಕರಿಸಿದ ಅಂತರ್ಜಲ ಮಟ್ಟವನ್ನು ತುರ್ತಾಗಿ ಏರಿಸಬಲ್ಲ ಯೋಜನೆ ಕಾರ್ಯರೂಪಕ್ಕೆ ಬರುವುದನ್ನು ಕಾಣುವ ಮಹದಾಸೆ.

---

## ಹಡಗಲಿ ತಾಲ್ಲೂಕು ಸೋಗಿ ಗ್ರಾಮದಲ್ಲಿ ಮಂದಗತಿಯ ರಸ್ತೆ ಅಗಲೀಕರಣ ಕಾಮಗಾರಿ

ಹೂವಿನಹಡಗಲಿ, ಮಾ. 23 - ತಾಲ್ಲೂಕಿನ ಸೋಗಿ ಗ್ರಾಮದಲ್ಲಿ ಕಳೆದ ತಿಂಗಳು, ಬಹಳ ವರ್ಷಗಳಿಂದಲೂ ರಸ್ತೆ ಅಗಲೀಕರಣವಾಗದೇ ನೆನೆಗುದಿಗೆ ಬಿದ್ದಿದ್ದ ಕಿರಿದಾದ ರಸ್ತೆಯನ್ನು ವಿಸ್ತರಣೆ ಮಾಡುವ ಸಲುವಾಗಿ ಅತಿಯಾಗಿ ಒತ್ತುವರಿ ಮಾಡಿ ಮನೆಗಳು ಹಾಗೂ ಅಂಗಡಿಗಳನ್ನು ನಿರ್ಮಿಸಿಕೊಂಡಿದ್ದನ್ನು ತೆರವುಗೊಳಿಸಲಾಗಿತ್ತು. ಆದರೆ, ಲೋಕೋಪಯೋಗಿ ಇಲಾಖೆಯಿಂದ ಕಾಮಗಾರಿಯ ಟೆಂಡರ್ ಗುತ್ತಿಗೆ ಪಡೆದಿರುವ ಗುತ್ತಿಗೆದಾರರು ತ್ವರಿತವಾಗಿ ಕಾಮಗಾರಿ ಕೈಗೊಳ್ಳುವಲ್ಲಿ ವಿಳಂಬ ಮಾಡುತ್ತಿದ್ದಾರೆಂದು ನಾಗರಿಕರು ಪತ್ರಿಕೆಗೆ ತಿಳಿಸಿದ್ದಾರೆ.

ಈಗಾಗಲೇ ಬಿಸಿಲು ಹೆಚ್ಚಾಗಿದೆ. ಅದರಲ್ಲೂ ಹಳೇ ವಿದ್ಯುತ್ ಕಂಬಗಳನ್ನು ತೆರವುಗೊಳಿಸಲು ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುತ್ತಿದೆ. ಇದರಿಂದಾಗಿ ತೊಂದರೆಯಾಗುತ್ತಿದೆ. ಹಾಗಾಗಿ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಇತ್ತ ಗಮನ ಹರಿಸಿ ರಸ್ತೆ ಅಗಲೀಕರಣ, ಚರಂಡಿ ಇತ್ಯಾದಿ ಕೆಲಸವನ್ನು ಬೇಗನೇ ಮಾಡಿ ಮುಗಿಸಲು ಒತ್ತಾಯಿಸಿದರು.

## ಟೇಬಲ್ ಟೆನ್ನಿಸ್‌ನಲ್ಲಿ ಎವಿಕೆ ಪ್ರಥಮ



ದಾವಣಗೆರೆ, ಮಾ.23- ನಗರದ ಎ.ವಿ. ಕಮಲಮ್ಮ ಮಹಿಳಾ ಪ.ಪೂ. ಕಾಲೇಜು ವಿದ್ಯಾರ್ಥಿನಿಯರು ಪದವಿ ಪೂರ್ವ ಕಾಲೇಜು ವಿಭಾಗದ ಜಿಲ್ಲಾ ಮಟ್ಟದ ಟೇಬಲ್ ಟೆನ್ನಿಸ್ ಪಂದ್ಯಾವಳಿಯಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಗಳಿಸಿದ್ದಾರೆ. ವಿದ್ಯಾರ್ಥಿನಿಯರಾದ ವೆರೋನಿಕ ಕೆಲಿನ್, ಸ್ಕೇವ್ ಸಂಜನಾ ಎಸ್., ಎಂ.ಎನ್. ಹೇಮ, ಯು. ಅದಿತಿ, ಬಿ.ಎಸ್. ಸುದೀಕ್ಷಾ ಪಾಲ್ಗೊಂಡು ವಿಜೇತರಾಗಿದ್ದಾರೆ ಎಂದು ತರಬೇತುದಾರ ಅಂಜಲಿ ರಾಘವೇಂದ್ರ ಹಾಗೂ ಸಿ.ಎಸ್. ಸತ್ಯನಾರಾಯಣ ತಿಳಿಸಿದ್ದಾರೆ.

## ಆರ್‌ಟಿಒ ಅಧಿಕಾರಿಗಳಿಗೆ ಲಸಿಕೆ



ದಾವಣಗೆರೆ, ಮಾ.23- ಜಿಲ್ಲಾ ಆಸ್ಪತ್ರೆಯಲ್ಲಿ ಆರ್‌ಟಿಒ ಅಧಿಕಾರಿಗಳು ಕೊರೊನಾ ಲಸಿಕೆ ಹಾಕಿಸಿಕೊಂಡರು. ಅಧಿಕಾರಿಗಳಾದ ಸುರೇಶ್, ವೀರೇಶ್ ಡಿ.ಎಚ್, ಕೆ. ವಾಸುದೇವ್, ಎಂ. ಭಾರತಿ, ಸೋಮಣ್ಣ, ರವಿ, ವೀರಭದ್ರಪ್ಪ ಅವರಿಗೆ ಲಸಿಕೆ ಹಾಕಲಾಯಿತು. ಈ ವೇಳೆ ಜಿಲ್ಲಾ ಸರ್ವೇಕ್ಷಣಾಧಿಕಾರಿ ರಾಘವನ್ ಉಪಸ್ಥಿತರಿದ್ದರು.

## ಉದ್ಯಾನ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ



ದಾವಣಗೆರೆ, ಮಾ.23- ವಾರ್ಡ್ ನಂ.6 ರಲ್ಲಿ ಮಹಾನಗರ ಪಾಲಿಕೆಯಿಂದ 1ನೇ ಮುಖ್ಯ ರಸ್ತೆಯಲ್ಲಿ ಬರುವ ಸಾಯಿಬಾಬಾ ಮಂದಿರದ ಹಿಂಭಾಗದಲ್ಲಿ ಉದ್ಯಾನವನ ಅಭಿವೃದ್ಧಿ ಕಾಮಗಾರಿಯ ಗುದ್ದಲಿ ಪೂಜೆಯನ್ನು ಪಾಲಿಕೆ ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷ ಎಲ್.ಡಿ. ಗೋಣೆಪ್ಪ ನೆರವೇರಿಸಿದರು.

ಈ ಸಾಲಿನ 15ನೇ ಹಣಕಾಸು ಆಯೋಗದ ಅನುದಾನದಲ್ಲಿ ಮಂಜೂರಾಗಿರುವ ಕಾಮಗಾರಿಯ ಗುದ್ದಲಿ ಪೂಜೆ ಕಾರ್ಯಕ್ರಮದಲ್ಲಿ ಪಾಲಿಕೆ ಸಹಾಯಕ ಅಭಿಯಂತರ ಅನುಪ್, ಜೆ.ಇ. ರಾಮಚಂದ್ರಪ್ಪ, ವಾರ್ಡಿನ ಪ್ರಮುಖರಾದ ಲಿಂಗೋಜಿರಾವ್, ನಂಜುಂಡಪ್ಪ, ಹನುಮಂತಪ್ಪ, ಜಿ. ಬಸವರಾಜ್, ಗುತ್ತಿಗೆದಾರರಾದ ಜಿ. ತಿಪ್ಪೇಸ್ವಾಮಿ, ಟಿ. ಶಿವಕುಮಾರ್ ಸೇರಿದಂತೆ ವಾರ್ಡಿನ ಪ್ರಮುಖರು ಹಾಗೂ ಕಾರ್ಯಕರ್ತರು ಹಾಜರಿದ್ದರು.

## ಇಂದು ವಿಶ್ವ ಕ್ಷಯರೋಗ ದಿನಾಚರಣೆ

ದಾವಣಗೆರೆ, ಮಾ.23- ನಾಳೆ ದಿನಾಂಕ 24 ರಂದು ಬೆಳಿಗ್ಗೆ 10.30ಕ್ಕೆ ನಗರದ ಕುವೆಂಪು ಕನ್ನಡ ಭವನದಲ್ಲಿ ವಿಶ್ವ ಕ್ಷಯರೋಗ ದಿನಾಚರಣೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಕೆ.ಎಚ್.ಗಂಗಾಧರ್ ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿಂದು ಮಾತನಾಡಿದ ಅವರು, ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಜಿ.ಪಂ. ಸಿಇಒ ವಿಜಯ ಮಹಾಂತೇಶ್ ದಾನಮ್ಮನವರ ಐಇಸಿ ಬಿಡುಗಡೆ ಮಾಡಿ, ಕ್ಷಯ ರೋಗ ಗೆದ್ದಿರುವ ಟಿಬಿ ಚಾಂಪಿಯನ್ಸ್‌ಗಳಿಗೆ ಸನ್ಮಾನಿಸಲಿದ್ದಾರೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ನಾಗರಾಜ ಅಧ್ಯಕ್ಷತೆ ವಹಿಸುವರು ಎಂದು ಹೇಳಿದರು.

ಪಾಲಿಕೆ ಮೇಯರ್ ಎಸ್.ಟಿ.ವೀರೇಶ್, ದೂಡಾ ಅಧ್ಯಕ್ಷ ರಾಜನಹಳ್ಳಿ ಶಿವಕುಮಾರ್ ಇತರರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಕ್ಷಯರೋಗದ ಜಾಗೃತಿಗಾಗಿ ಮಾ.24ರಂದು ಸರ್ಕಾರಿ ಕಟ್ಟಡಗಳು ಮತ್ತು ಪ್ರಮುಖ ಸ್ಮಾರಕಗಳ ಮೇಲೆ ಕೆಂಪು ದೀಪ ಬೆಳಗಿಸಲಾಗುವುದು. ಜಿಲ್ಲಾ ಕೇಂದ್ರ ಸೇರಿದಂತೆ ಎಲ್ಲಾ ತಾಲ್ಲೂಕುಗಳಲ್ಲಿ ಬೀದಿ ನಾಟಕ, ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ರಸ ಪಶ್ನೆ, ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗುವುದು ಎಂದು ಮಾಹಿತಿ ನೀಡಿದರು.

2019ರ ಅಂಕಿ - ಅಂಶಗಳ ಪ್ರಕಾರ ವಿಶ್ವದಲ್ಲಿ ಭಾರತ ಕ್ಷಯರೋಗಿಗಳು ಹೆಚ್ಚಾಗಿರುವ ಮೊದಲ ದೇಶವಾಗಿದೆ. ಕರ್ನಾಟಕ ದೇಶದಲ್ಲಿ 10ನೇ ಸ್ಥಾನದಲ್ಲಿದೆ. ದಾವಣಗೆರೆ ರಾಜ್ಯದಲ್ಲಿ 14ನೇ ಸ್ಥಾನದಲ್ಲಿತ್ತು. ಆದರೆ, 2020ರಲ್ಲಿ 1899 ಪ್ರಕರಣ ಹೊಂದುವ ಮೂಲಕ ಜಿಲ್ಲೆ ರಾಜ್ಯದ 15ನೇ ಸ್ಥಾನದಲ್ಲಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ನಾಗರಾಜ್ ಹಾಜರಿದ್ದರು.

## ಭಗತ್‌ಸಿಂಗ್ ಆದರ್ಶ ಅಳವಡಿಸಿಕೊಳ್ಳಲು ಕರೆ




ದಾವಣಗೆರೆ, ಮಾ. 23- ಸಾವಿನ ನಂತರವೂ ಜೀವಂತವಾಗಿರುವ ವಿರಳಾತಿ ವಿರಳರ ಸಾಲಿನಲ್ಲಿ, ಭಗತ್‌ಸಿಂಗ್, ರಾಜಗುರು, ಸುಖದೇವ ಮೊದಲಿಗರಾಗಿ ನಿಲ್ಲುತ್ತಾರೆ ಎಂದು ಎ.ಐ.ವೈ.ಎಫ್. ರಾಜ್ಯ ಉಪಾಧ್ಯಕ್ಷ ಆವರಗೆರೆ ವಾಸು ತಿಳಿಸಿದ್ದಾರೆ.

ಅವರು ಭಗತ್‌ಸಿಂಗ್ ಬಲಿದಾನ ದಿನದ ಪ್ರಯುಕ್ತ ನಗರದ ರೈಲ್ವೇ ನಿಲ್ದಾಣದ ಮುಂಭಾಗದ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಮಾತನಾಡುತ್ತಿದ್ದರು.

ಇಂದಿಗೂ ತಲೆಮಾರಿನಿಂದ ತಲೆಮಾರಿಗೆ ಬೆಳಕು ನೀಡುತ್ತಾ ನಿತ್ಯ ಸ್ಫೂರ್ತಿಯಾಗುತ್ತಾ ಭಗತ್‌ಸಿಂಗ್ ನಮ್ಮ ನಡುವಿದ್ದಾರೆ. ವಿದ್ಯಾರ್ಥಿ ಯುವಜನ ಭಗತ್‌ಸಿಂಗ್ ಆದರ್ಶವನ್ನು ಅಳವಡಿಸಿಕೊಳ್ಳಬೇಕು ಎಂದು ವಾಸು ತಿಳಿಸಿದರು.

ಈ ಸಂದರ್ಭದಲ್ಲಿ ಸಂಘಟನೆಯ ಪದಾಧಿಕಾರಿಗಳಾದ ಕೆರನಹಳ್ಳಿ ರಾಜು, ಎ. ತಿಪ್ಪೇಶಿ, ಜೀವನ ನಿಟುವಳ್ಳಿ, ಫಜಲುಲ್ಲಾ, ಗದಿಗೇಶ್ ಪಾಳೇದ್, ಇರ್ಫಾನ್, ಹೆಚ್.ಕೆ. ಸಂಪತ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

66/11 ಕೆ.ವಿ. ವಿತರಣಾ ಕೇಂದ್ರದಿಂದ ಹೊರಡುವ ಎಸ್.ವಿ.ಟಿ 11 ಕೆ.ವಿ. ಫೀಡರ್‌ನಲ್ಲಿ ಮತ್ತು 220 ಕೆ.ವಿ. ಸ್ವೀಕರಣಾ ಕೇಂದ್ರ, ಎಸ್.ಆರ್. ಎಸ್ ದಾವಣಗೆರೆಯಿಂದ ಹೊರಡುವ ವಿವೇಕಾನಂದ ಫೀಡರ್‌ನಲ್ಲಿ ಬೆ.ವಿ. ಕಂ ವತಿಯಿಂದ ತುರ್ತು ಕಾರ್ಯವನ್ನು ಹಮ್ಮಿಕೊಂಡಿರುವುದರಿಂದ ಇಂದು ಬೆಳಿಗ್ಗೆ 10 ರಿಂದ 1 ರವರೆಗೆ ಎಸ್.ವಿ.ಟಿ ಫೀಡರ್ ವ್ಯಾಪ್ತಿಯ ಡೆಂಟಲ್ ಕಾಲೇಜ್ ರಸ್ತೆ, ಎಮ್.ಸಿ.ಸಿ.ಬಿ. ಬಿ ಬ್ಲಾಕ್, ಆಂಜನೇಯ ಬಡಾವಣೆ, ಮಾಮಾಸ್ ಜಾಯಿಂಟ್‌ರಸ್ತೆ ಸುತ್ತ ಮುತ್ತ ಪ್ರದೇಶಗಳು, ಶ್ರೀನಿವಾಸನಗರ 1ನೇ ಕ್ರಾಸ್ ನಿಂದ 6ನೇ ಕ್ರಾಸ್ ವರೆಗೆ, ಆದಾಯ ತೆರಿಗೆ ಕಛೇರಿ, ಅನುಭವ ಮಂಟಪ ಶಾಲೆ, ನೀರಾವರಿ ಇಲಾಖೆ, ಗ್ರಾಮಾಂತರ ಪೊಲೀಸ್ ಠಾಣೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

## ಕಲಾಕುಂಚ ಶಾಖೆಯ ಅಧ್ಯಕ್ಷರಾಗಿ ಪ್ರಭಾ ರವೀಂದ್ರ



ದಾವಣಗೆರೆ, ಮಾ. 23- ಕಲಾಕುಂಚ ಸಾಂಸ್ಕೃತಿಕ ಸಂಸ್ಥೆಯ ದಾವಣಗೆರೆಯ ಎಂ.ಸಿ.ಸಿ. 'ಎ' ಮತ್ತು 'ಬಿ' ಬ್ಲಾಕ್‌ನ ಶಾಖೆ ನೂತನ ಅಧ್ಯಕ್ಷರಾಗಿ ರಾಜನಹಳ್ಳಿ ಪ್ರಭಾ ರವೀಂದ್ರರವನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಕಲಾಕುಂಚ ಮಹಿಳಾ ವಿಭಾಗದ ಸಂಸ್ಥಾಪಕಿ ಶ್ರೀಮತಿ ಜ್ಯೋತಿ ಗಣೇಶ್ ಶೆಣೈ ತಿಳಿಸಿದ್ದಾರೆ.

## ರಾಜ್ಯ ಪುರಸ್ಕಾರ ಪರೀಕ್ಷಾ ಶಿಬಿರ



ದಾವಣಗೆರೆ, ಮಾ. 23- ನಗರದ ಬಾಪೂಜಿ ಶಾಲೆಯಲ್ಲಿ ರಾಜ್ಯಮಟ್ಟದ ಸ್ಕೌಟ್ಸ್ ಮತ್ತು ಗೈಡ್ಸ್ ಮಕ್ಕಳಿಗೆ ರಾಜ್ಯ ಪುರಸ್ಕಾರ ಪರೀಕ್ಷಾ ಶಿಬಿರವನ್ನು ಮೊನ್ನೆ ನಡೆಸಲಾಯಿತು.

ಗೈಡ್ ವಿಭಾಗದ ನಾಯಕಿಯಾಗಿ ಕಾತ್ಯಾಯಿನಿ ಎಎಲ್‌ಟಿ ಗೈಡ್, ಸ್ಕೌಟ್ ವಿಭಾಗದ ನಾಯಕನಾಗಿ ಶಿವಶಂಕರ್ ಎಎಲ್‌ಟಿ ಸ್ಕೌಟ್ ಕಾರ್ಯ ನಿರ್ವಹಿಸಿದರು. ಜಿಲ್ಲಾ ಮುಖ್ಯ ಆಯುಕ್ತರಾದ ಮುರುಘರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಸ್ಕೌಟ್ ಆಯುಕ್ತರಾದ ಎ.ಪಿ.ಷಡಾಕ್ಷರಪ್ಪ ಹಾಗೂ ಜಿಲ್ಲಾ ಕಾರ್ಯದರ್ಶಿ ರತ್ನ, ಜಿಲ್ಲಾ ಖಜಾಂಚಿ ಬಿ.ವಿ ವಿಶ್ವನಾಥ್ ಶಿಬಿರದಲ್ಲಿ ಪಾಲ್ಗೊಂಡಿದ್ದರು. ಜಿಲ್ಲಾ ಜಂಟಿ ಕಾರ್ಯದರ್ಶಿ ಸುಖವಾಣಿ ಕ್ವಾಟರ್ ಮಾಸ್ಟರ್ ಆಗಿ ಕಾರ್ಯನಿರ್ವಹಿಸಿದರು. ಅಶ್ವಿನಿ ಪರೀಕ್ಷಾ ಶಿಬಿರವನ್ನು ಸಂಘಟಿಸಿದರು.

**WANTED**

**Required Accountant with Basic Knowledge of Tally Operating and Data Entry.**

**ASHUJI DISTRIBUTORS**
**# 323, BINNY COMPANY ROAD, DAVANGERE - 577 001.**

**ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, (ಹಿ.ವಿ.) ದಾವಣಗೆರೆ.**

**ಎಸ್.ಸಿ. ಸಂಖ್ಯೆ : 12/2020**

ವಾದಿ : **ವಿಜಯಾ ಬ್ಯಾಂಕ್,** (ಬ್ಯಾಂಕ್ ಆಫ್ ಬರೋಡ), ಪಿ.ಬಿ. ರೋಡ್ ಶಾಖೆ, ದಾವಣಗೆರೆ. - ವಿರುದ್ಧ -

ಪ್ರತಿವಾದಿಗಳು : **ಪೃಥ್ವಿ ಶಿವಕುಮಾರ್ ಮತ್ತು ಇತರರು**

**1. ಪೃಥ್ವಿ ಶಿವಕುಮಾರ್** ಬಿ.ಎಂ. ಬಿನ್ ಶಿವಕುಮಾರ್ ಬಿ.ಎಂ. ವಯಸ್ಸು 25 ವರ್ಷ. **2. ಶಿವಕುಮಾರ್** ಬಿ.ಎಂ. ಬಿನ್ ರುದ್ರಮುನಿಯಪ್ಪ, ವಯಸ್ಸು 55 ವರ್ಷ. ಇಬ್ಬರ ವಾಸ : ಡೋರ್ ನಂ. 2402/1, ಎಂಸಿಸಿ ಎ ಬ್ಲಾಕ್, ಬಕ್ಕೇಶ್ವರ ಹೈಸ್ಕೂಲ್ ಎದುರು, ದಾವಣಗೆರೆ. **3. ಶಶಿಧರ ಹೆಚ್.ಎಂ.** ಬಿನ್ ಮುರುಗೇಂದ್ರಯ್ಯ, ಡೋರ್ ನಂ. 119/2, 1ನೇ ಮೇನ್, 8ನೇ ಕ್ರಾಸ್, ದೇವರಾಜ ಅರಸು ಬಡಾವಣೆ, ದಾವಣಗೆರೆ.

**ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20ರ ಅಡಿಯಲ್ಲಿ ಪ್ರತಿವಾದಿ ನಂ. 1 ರಿಂದ 3 ಇವರಿಗೆ ನೀಡಲಾದ ನೋಟಿಸ್**

ಈ ಮೇಲ್ಕಂಡ ಕೇಸಿನಲ್ಲಿ ವಾದಿಯೂ, ಪ್ರತಿವಾದಿಯರ ವಿರುದ್ಧ ಸಾಲದ ಹಣದ ವಸೂಲಾತಿಗಾಗಿ ದಾವೆಯನ್ನು ಸಲ್ಲಿಸಿದ್ದು, ಸದರಿ ದಾವೆಯಲ್ಲಿ 1 ರಿಂದ 3ನೇ ಪ್ರತಿವಾದಿಯಾದ ನಿಮಗೆ ನ್ಯಾಯಾಲಯದಿಂದ ಹಾಗೂ ನೋಂದಾಯಿತ ಅಂಚೆ ಮೂಲಕ ನೋಟೀಸು ಕಳಿಸಿದಾಗ್ಯೂ, ಸದರಿ ನೋಟೀಸು ಜಾರಿಯಾಗಿರುವುದಿಲ್ಲ. ಆದ್ದರಿಂದ ಈ ಮೇಲ್ಕಂಡ ಪ್ರತಿವಾದಿಯಾದ ನಿಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ತಾವು ದಿನಾಂಕ 16.4.21ರಂದು ಬೆಳಿಗ್ಗೆ 11 ಗಂಟೆಗೆ ನ್ಯಾಯಾಲಯಕ್ಕೆ ಖುದ್ದಾಗಿಯಾಗಲೀ ಅಥವಾ ವಕೀಲರ ಮುಖಾಂತರವಾಗಲೀ ಹಾಜರಾಗತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಸದರಿ ಪ್ರಕರಣವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ : 23.03.21ರಂದು ಕೊಡಲ್ಪಟ್ಟಿದೆ.

ವಾದಿ ಪರ ವಕೀಲರು
**(ಕೆ.ಬಿ. ಶೈಲಶ್ರೀ),**

ನ್ಯಾಯಾಲಯದ ಅಪ್ಪಣೆ ಮೇರೆಗೆ **ಶಿರಸ್ತೇದಾರರು,**
ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, (ಹಿ.ವಿ.), ಮತ್ತು ಸಿ.ಜೆ.ಎಂ. ದಾವಣಗೆರೆ.

## ಜಿಗಳಿ: 26ಕ್ಕೆ ರಂಗನಾಥ ಸ್ವಾಮಿ ರಥೋತ್ಸವ



ಮಲೇಬೆನ್ನೂರು, ಮಾ.23- ಜಿಗಳಿ ಗ್ರಾಮದ ಆರಾಧ್ಯ ದೈವ ಶ್ರೀ ರಂಗನಾಥ ಸ್ವಾಮಿಯ ರಥೋತ್ಸವವು ಇದೇ ದಿನಾಂಕ 26 ಶುಕ್ರವಾರ ತಡರಾತ್ರಿ ಜರುಗಲಿದೆ.

ರಥೋತ್ಸವದ ಅಂಗವಾಗಿ 25 ರ ಗುರುವಾರ ರಾತ್ರಿ 8.30ಕ್ಕೆ ಮಹಾರಥಕ್ಕೆ ಕಳಸಧಾರಣೆ ಮಾಡಲಾಗುವುದು. ಮಾ.26 ರ ಶುಕ್ರವಾರ ಬೆಳಿಗ್ಗೆ 8 ಗಂಟೆಗೆ ಗಜ ಉತ್ಸವ ನಡೆಯಲಿದ್ದು, ಸಂಜೆ 4 ಗಂಟೆಯಿಂದ ಶಸ್ತ್ರ ಕಾರ್ಯಕ್ರಮಗಳು ಜರುಗಲಿವೆ. ಇದೇ ದಿನ ತಡರಾತ್ರಿ (ಶನಿವಾರ ಬೆಳಗಿನ ಜಾವ) ಶ್ರೀ ರಂಗನಾಥ ಸ್ವಾಮಿಯ ರಥೋತ್ಸವವು ಯಲವಟ್ಟಿಯ ಶ್ರೀ ಆಂಜನೇಯ ಸ್ವಾಮಿ, ಜಿ. ಬೇವಿನಹಳ್ಳಿಯ ಶ್ರೀ ಆಂಜನೇಯ ಸ್ವಾಮಿ ಹಾಗೂ ಗ್ರಾಮದ ಶ್ರೀ ಬೀರಲಿಂಗೇಶ್ವರ ದೇವರ ಒಡಗೂಡಿ ಸಕಲ ಬಿರುದಾವಳಿಗಳೊಂದಿಗೆ ನಡೆಯಲಿದೆ.

27 ರ ಶನಿವಾರ ಬೆಳಿಗ್ಗೆ 10.30 ರಿಂದ ದೇವಸ್ಥಾನದಲ್ಲಿ ಜವಳ, ಮುದ್ರೆ ಇತ್ಯಾದಿ ಸೇವಾ ಕಾರ್ಯಕ್ರಮಗಳು ನಡೆಯುವವು. ಸಂಜೆ ಓಕಳಿ ನಂತರ ಕಂಕಣ ವಿಸರ್ಜನೆ ಮಾಡಲಾಗುವುದು. 28ರ ಭಾನುವಾರ ಬೆಳಿಗ್ಗೆ ವಿವಿಧ ಕಾರ್ಯಕ್ರಮಗಳ ನಂತರ ಸಂಜೆ 7.30 ಕ್ಕೆ ಶ್ರೀ ರಂಗನಾಥ ಸ್ವಾಮಿ ಸೇರಿದಂತೆ ಎಲ್ಲಾ ದೇವರುಗಳ ಸಮ್ಮುಖದಲ್ಲಿ ಭೂತನ ಸೇವೆ ಮತ್ತು ರಾಜ ಬೀದಿಗಳಲ್ಲಿ ದೇವರುಗಳ ಮೆರವಣಿಗೆ ನಡೆಯುವುದು. 30 ರ ಮಂಗಳವಾರ ಶ್ರೀ ಚೌಡಮ್ಮದೇವಿ ಹಬ್ಬ ನಡೆಯಲಿದೆ.

## ಸಿಎಎ ನಿಯಮ ರೂಪಿಸಲು ಕೇಂದ್ರಕ್ಕೆ ಗಡುವು

ನವದೆಹಲಿ, ಮಾ. 23 – ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಅನ್ವಯ ನಿಯಮಗಳನ್ನು ರೂಪಿಸಲು ಕೇಂದ್ರ ಸರ್ಕಾರಕ್ಕೆ ಲೋಕಸಭೆಯು ಏಪ್ರಿಲ್ 9ರವರೆಗೆ ಹಾಗೂ ರಾಜ್ಯಸಭೆಯು ಜುಲೈ 9ರವರೆಗೆ ಸಮಯ ನೀಡಿದೆ. ಗೃಹ ಖಾತೆ ಅಧೀನ ಸಚಿವ ನಿತ್ಯಾನಂದ ರಾಯ್ ಅವರು ಲೋಕಸಭೆಯಲ್ಲಿ ಮಾತನಾಡುತ್ತಾ, ಸಿಎಎಗೆ ಡಿಸೆಂಬರ್ 12, 2019ರಂದು ಅಧಿಸೂಚನೆ ಹೊರಡಿಸಲಾಗಿದೆ. ಅದು ಜನವರಿ 10, 2020ರಿಂದ ಜಾರಿಗೆ ಬಂದಿದೆ ಎಂದಿದ್ದಾರೆ.

# ವಿದ್ಯೆಯಿಂದ ವಿನಯ, ವಿವೇಚನೆ : ಡಾ. ಶುಕ್ಲಾ ಶೆಟ್ಟಿ



ದಾವಣಗೆರೆ, ಮಾ.23- ವಿದ್ಯೆಯಿಂದ ವಿನಯ ಹಾಗೂ ವಿವೇಚನಾ ಶಕ್ತಿ ಬರುತ್ತದೆ. ಮಕ್ಕಳನ್ನು ಶಿಕ್ಷಣವಂತರನ್ನಾಗಿ ಮಾಡುವಂತೆ ಜ.ಜ.ಮು. ವೈದ್ಯಕೀಯ ಮಹಾವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಶುಕ್ಲಾ ಶೆಟ್ಟಿ ಮಹಿಳೆಯರಿಗೆ ಕರೆ ನೀಡಿದರು.

ಜಮಾ ಅತೆ ಇಸ್ಲಾಮಿ ಹಿಂದ್ ದಾವಣಗೆರೆ ಮಹಿಳಾ ಘಟಕ ಏರ್ಪಡಿಸಿದ್ದ ವಿಚಾರ ಸಂಕಿರಣ ಹಾಗೂ ಸನ್ಮಾನ ಕಾರ್ಯಕ್ರಮದಲ್ಲಿ 'ಆದರ್ಶ ಮಹಿಳೆ, ಸುಖೀ ಕುಟುಂಬ ಮತ್ತು ಆರೋಗ್ಯಕರ ಸಮಾಜಕ್ಕೆ ವರದಾನ' ಕುರಿತು ಮಾತನಾಡಿದರು.

ಮಹಿಳೆ ಕೇವಲ ಕುಟುಂಬದ ಜವಾಬ್ದಾರಿ ನಿಭಾಯಿಸಿದರಷ್ಟೇ ಸಾಲದು, ಮಕ್ಕಳಿಗೆ ಶಿಕ್ಷಣದ ಜೊತೆ ಸಂಸ್ಕಾರವಂತರನ್ನಾಗಿ ಮಾಡುವ ಮಹತ್ತರ ಪಾತ್ರ ಮಹಿಳೆಯದ್ದಾಗಿದೆ ಎಂದರು.

ಕುಟುಂಬ ನಿರ್ವಹಣೆಯಲ್ಲಿ ತೊಡಗಿರುವ ಮಹಿಳೆ ಕುಟುಂಬ ಸದಸ್ಯರ ಆರೋಗ್ಯದ ಜೊತೆಗೆ ತನ್ನ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವ ಅಗತ್ಯವಿದೆ ಎಂದು ಹೇಳಿದರು.

ಮುಸ್ಲಿಂ ಸಮುದಾಯದಲ್ಲಿ ಪುರುಷರಿಗಿಂತ ಮಹಿಳೆಯರೇ ಹೆಚ್ಚು ಶಿಕ್ಷಣ ಕ್ಷೇತ್ರದಲ್ಲಿ ಮುಂದಿದ್ದಾರೆ. ಆದರೆ ತಂದೆ-ತಾಯಿಗಳು ಹೆಣ್ಣು-ಗಂಡೆಂಬ ಭೇದ ತೋರದೇ ಸಮಾನವಾಗಿ ಬೆಳೆಸಬೇಕೆಂದರು.

ದಾವಣಗೆರೆಯ ಹಳೇ ಭಾಗದಲ್ಲಿ ಮಹಿಳೆಯರಲ್ಲಿಯೇ ಹೆಚ್ಚು ಮಧುಮೇಹ, ರಕ್ತದೊತ್ತಡದಂತಹ ಕಾಯಿಲೆಗಳು ಕಾಣಿಸಿಕೊಂಡಿದ್ದು, ಈ ಕಾಯಿಲೆಗಳನ್ನು ನಿರ್ಲಕ್ಷ್ಯ ಮಾಡುತ್ತಿರುವುದು ಬೇಸರದ ಸಂಗತಿ ಎಂದರು. ಅಲ್ಲಿನ ಮಹಿಳೆಯರು ರಕ್ತದೊತ್ತಡ, ಮಧುಮೇಹ ಕಾಯಿಲೆಗಳಿಂದ ಬಳಲುತ್ತಿದ್ದಾರೆ. ಮಹಿಳೆಯರು ಉತ್ತಮ ಪೌಷ್ಟಿಕ ಆಹಾರ ಸೇವನೆ ಜೊತೆಗೆ ಆರೋಗ್ಯಕ್ಕೆ ಹೆಚ್ಚು ಗಮನಹರಿಸುವಂತೆ ಕರೆ ನೀಡಿದರು.

ಮಲೇಬೆನ್ನೂರು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕಿ ಡಾ. ಅತಿಯಾ ಕೌಸರ್ ಅಧ್ಯಕ್ಷತೆ ವಹಿಸಿದ್ದರು.

ಕುಂಬಳೂರು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕಿ ಸುಮತಿ ಜಯಪ್ಪ, ಅಖಿಲ ಭಾರತ ವೀರ ಶೈವ ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷೆ ವಿನುತಾ ರವಿ, ವಕೀಲರಾದ ಐ.ಕೆ. ಮಂಜುಳ ಮಾತನಾಡಿದರು.

ಜಿ.ಐ.ಓ ಜಿಲ್ಲಾ ಸಂಚಾಲಕಿ ತಹೇರಾಬಾನು ಕುರ್‌ಆನ್ ಪಠಿಸಿದರು. ಫರ್‌ಖುಂದ ಬಾನು ಸ್ವಾಗತಿಸಿದರು. ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಸಾಯೀದುನ್ನಿಸಾ ಪ್ರಾಸ್ತಾವಿಕವಾಗಿ ಮಾತನಾಡಿದರು.

ರೇಷ್ಮಾಬಾನು ನಿರೂಪಿಸಿದರು. ಜಮ್‌ಷಿದಾ ಬಾನು ವಂದಿಸಿದರು.

## ಹೊನ್ನಾಳಿ : ಸಂಘಟನೆ, ಭವನ ನಿರ್ಮಾಣಕ್ಕೆ ಆದ್ಯತೆ



### ಕುಳಗಟ್ಟೆ ರಂಗನಾಥ್

ಹೊನ್ನಾಳಿ, ಮಾ.23- ತಾಲ್ಲೂಕಿನ ಸುಂಕ ದಕಟ್ಟೆ ರಸ್ತೆಯಲ್ಲಿರುವ ವಾಲ್ಮೀಕಿ ಸಮುದಾಯ ಭವನದಲ್ಲಿ ತಾಲ್ಲೂಕು ವಾಲ್ಮೀಕಿ ಸಮಾಜದ ನೂತನ ಅಧ್ಯಕ್ಷ ಕುಳಗಟ್ಟೆ ರಂಗನಾಥ್ ಅಧ್ಯಕ್ಷತೆಯಲ್ಲಿ ಇಂದು ಸಭೆ ನಡೆಯಿತು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ರಂಗನಾಥ್ ಸಮಾಜ ಸಂಘಟನೆ ಹಾಗೂ ಅಭಿ ವೃದ್ಧಿ ವಿಚಾರದಲ್ಲಿ ಒಗ್ಗಟ್ಟು ಹಾಗೂ ವಿಶ್ವಾಸ ದಿಂದ ಕಾರ್ಯ ನಿರ್ವಹಿಸಿಕೊಂಡು ಹೋಗಲು ಸರ್ವ ಸದಸ್ಯರ ಸಹಕಾರ ಅತ್ಯಗತ್ಯ ಎಂದರು.

ಸಂಘಟನೆ ಜೊತೆಗೆ ವಾಲ್ಮೀಕಿ ಭವನದ ಉಳಿದ ಕಾರ್ಯವನ್ನು ಪೂರ್ಣಗೊಳಿಸಬೇಕು ಹಾಗೂ ಸಮಾಜದಲ್ಲಿ ಯಾವುದೇ ಪಕ್ಷ ಹಾಗೂ ರಾಜಕೀಯಕ್ಕೆ ಅವಕಾಶ ನೀಡದೆ, ಮಾಜಿ ಅಧ್ಯಕ್ಷರು ಹಾಗೂ ಸಮಾಜದ ಹಿರಿಯರೊಂದಿಗೆ ಚರ್ಚಿಸಿ, ಸಮಾಜವನ್ನು ಮತ್ತಷ್ಟು ಬಲಪಡಿಸುವುದಾಗಿ ಹೇಳಿದರು.

ಮಾಜಿ ಅಧ್ಯಕ್ಷ ತಿಮ್ಮೇನಹಳ್ಳಿ ಚಂದಪ್ಪ, ಗೌರವ ಅಧ್ಯಕ್ಷ ಕೋಣನತಲೆ ನಾಗಪ್ಪ, ನಾಗೇಂದ್ರಪ್ಪ, ಬೇಲಿಮಲ್ಲೂರು ಶಿವಾನಂದ್, ಶಿಕ್ಷಕ ಹನುಮಂತಪ್ಪ, ಚಂದ್ರಪ್ಪ, ಕಾರ್ಯದರ್ಶಿ ಪ್ರವೀಣ್, ಪಂಚಾಯ್ತಿ ಸದಸ್ಯ ರಾಜೇಂದ್ರ, ಕುಳ ಗಟ್ಟೆ ಹನುಮಂತ, ನಾಗ ರಾಜ್, ಪ್ರಭುಗೌಡ, ಶೇಖರಪ್ಪ ಇನ್ನಿತರರು ಉಪಸ್ಥಿತರಿದ್ದರು.

## ಇಸ್ರೋ ರಾಕೆಟ್ ಪರೀಕ್ಷೆ ವಿಫಲ

ಬೆಂಗಳೂರು, ಮಾ. 23 – ಇಸ್ರೋದ ನೂತನ ಪೀಳಿಗೆಯ ಸಣ್ಣ ಉಪಗ್ರಹ ಉಡಾವಣಾ ವಾಹನ (ಎಸ್.ಎಸ್.ಎಲ್.ವಿ.) ರಾಕೆಟ್‌ನ ಸ್ಟಾಟಿಕ್ ಸಾಲಿಡ್ ಮೋಟರ್ (ಎಸ್.ಎಸ್.ಐ.) ಮೊದಲ ಹಂತದ ಪರೀಕ್ಷೆ ವಿಫಲವಾಗಿದೆ.

ಪರೀಕ್ಷೆಯ 95 ಸೆಕೆಂಡುಗಳ ನಂತರ ಮೋಟರ್ ವಿಫಲವಾಗಿದೆ. ಒಟ್ಟು 110 ಸೆಕೆಂಡುಗಳ ಕಾಲ ಪರೀಕ್ಷೆ ನಡೆಯಬೇಕಿತ್ತು ಎಂದು ಇಸ್ರೋದ ಮೂಲಗಳು ತಿಳಿಸಿವೆ.

### ವ್ಯರ್ಥ

ಅವನ ಮಂಡೆ ತೊಳೆಯಲು
ಹೆಚ್ಚಿನ ನೀರು, ಶ್ಯಾಂಪು
ಹಾಕಲು ಎಣ್ಣೆಯೇ ಬೇಕಿಲ್ಲ
ಕಾರಣ ಅವನ ಮಂಡೆ ಮೇಲೆ
ಕೇಶರಾಶಿಯೇ ಇಲ್ಲ!

– ಬಸವನಗೌಡ ಹೆಬ್ಬಳಗೆರೆ.

### ರಾಜ್ಯ - ರಾಷ್ಟ್ರೀಯ ವಾರ್ತೆ

## ಅತಿ ವಲಸೆಯಿಂದ ನಗರಗಳಲ್ಲಿ ಅಸಮತೋಲನ : ಸಚಿವ ಯೋಗೇಶ್ವರ

ಬೆಂಗಳೂರು, ಮಾ. 23 - ರಾಜ್ಯದಲ್ಲಿರುವ ಪ್ರಮುಖ ನಗರಗಳಲ್ಲಿ ವಲಸೆ ಹಾಗೂ ಅತಿಯಾದ ಜನಸಂಖ್ಯೆಯಿಂದ ಪರಿಸರ ಅಸಮತೋಲನ ಉಂಟಾಗಿದ್ದು, ನೀರು ಸೇರಿದಂತೆ ಅತ್ಯವಶ್ಯಕ ವಸ್ತುಗಳ ಕೊರತೆ ಉಂಟಾಗುತ್ತಿದೆ ಎಂದು ಪರಿಸರ ಸಚಿವ ಸಿ.ಪಿ.ಯೋಗೇಶ್ವರ್ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಇತ್ತೀಚಿನ ವರದಿಗಳ ಅನ್ವಯ ರಾಜಧಾನಿ ಬೆಂಗಳೂರು, ದಾವಣಗೆರೆ, ತುಮಕೂರು ಹಾಗೂ ಬೀದರ್ ನಗರಗಳು ರಾಷ್ಟ್ರೀಯ ಮಟ್ಟದ ಮಾಲಿನ್ಯ ಪ್ರಮಾಣದ ಮಿತಿಯನ್ನು ಮೀರಿವೆ ಎಂದಿದ್ದಾರೆ. ತುಮಕೂರು 131 ಎಕ್ಯೂಐ, ಬೆಂಗಳೂರು 130 ಹಾಗೂ ಪೀಣ್ಯ ಕೈಗಾರಿಕಾ ಪ್ರದೇಶ 251 ಎಕ್ಯೂಐ ಪ್ರಮಾಣದಲ್ಲಿರುವುದು ಆತಂಕಕಾರಿ ವಿಷಯವಾಗಿದೆ.

ಮೈಸೂರು, ಮಂಡ್ಯ ಹಾಗೂ ಭದ್ರಾವತಿಯಲ್ಲಿ ಕಡಿಮೆ ಮಾಲಿನ್ಯ ಪ್ರಮಾಣ ದಾಖಲಾಗಿರುವುದು ಸಮಾಧಾನದ ಸಂಗತಿಯಾಗಿದೆ. ಹಾಸನ ರಾಜ್ಯದಲ್ಲೇ ಅತೀ ಕಡಿಮೆ 28 ಎಕ್ಯೂಐ ಮಾಲಿನ್ಯ ಪ್ರಮಾಣ ದಾಖಲಾಗಿದ್ದು ಉತ್ತಮ ಸ್ಥಿತಿಯಲ್ಲಿದೆ ಎಂದು ಹೇಳಿದ್ದಾರೆ.

ರಾಜಧಾನಿ ಬೆಂಗಳೂರು ಭೀಕರ ನೀರಿನ ಕೊರತೆಯತ್ತ ಸಾಗುತ್ತಿದೆ, ನಗರದ ಜನಸಂಖ್ಯೆಗೆ ಜಲಮೂಲಗಳಿಂದ ಅಗತ್ಯವಿರುವಷ್ಟು ನೀರು ಒದಗಿಸಲು ಸಾಧ್ಯವಾಗುತ್ತಿಲ್ಲ. ಮುಂದಿನ ದಿನಗಳಲ್ಲಿ ಜಲಮೂಲಗಳನ್ನು ರಕ್ಷಿಸಿ, ಮಳೆ ನೀರು ಕೊಯ್ಲು ಮೂಲಕ ಬೆಂಗಳೂರಿನ ಬೇಡಿಕೆ ಪ್ರಮಾಣದ ನೀರನ್ನು ಒದಗಿಸಬೇಕಾದ ಸವಾಲು ಎದುರಾಗಿದೆ ಎಂದವರು ತಿಳಿಸಿದ್ದಾರೆ.

ಕೈಗಾರಿಕೆಗಳು ಹಾಗೂ ಜನವಸತಿ ಪ್ರದೇಶಗಳ ತ್ಯಾಜ್ಯದಿಂದ ರಾಜ್ಯದ 17 ನದಿಗಳು ಮಾಲಿನ್ಯಗೊಂಡಿವೆ, ಪ್ರತಿ ನದಿಯನ್ನು ಸ್ವಚ್ಛಗೊಳಿಸುವುದು ಎಲ್ಲರ ಕರ್ತವ್ಯವಾಗಿದ್ದು, ಮುಂದಿನ ದಿನಗಳಲ್ಲಿ ಪರಿಸರ ಇಲಾಖೆ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲಿದೆ ಎಂದವರು ಹೇಳಿದ್ದಾರೆ.

## ನಾಲ್ಕು ತಿಂಗಳ ನಂತರ ರಾಜ್ಯದಲ್ಲಿ 2 ಸಾವಿರಕ್ಕೂ ಹೆಚ್ಚು ಸೋಂಕು

ಬೆಂಗಳೂರು, ಮಾ. 23 – ಸುಮಾರು ನಾಲ್ಕು ತಿಂಗಳ ನಂತರ ರಾಜ್ಯದಲ್ಲಿ ಒಂದೇ ದಿನ 2 ಸಾವಿರಕ್ಕೂ ಹೆಚ್ಚು ಕೊರೊನಾ ಪ್ರಕರಣಗಳು ಕಂಡು ಬಂದಿವೆ. ಕೊರೊನಾದಿಂದ ಇದೇ ದಿನ ಐವರು ಸಾವನ್ನಪ್ಪಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ. ಈ ಹಿಂದೆ ಕಳೆದ ವರ್ಷ ನವೆಂಬರ್ 13ರಂದು ಒಂದೇ ದಿನ 2,016 ಪ್ರಕರಣಗಳು ಕಂಡು ಬಂದಿದ್ದವು. ಆನಂತರ ಮಂಗಳವಾರ 2,010 ಸೋಂಕುಗಳು ಕಂಡು ಬಂದಿವೆ.

## ಕಾಂಗ್ರೆಸ್‌ನಿಂದ ಕುಂಟು ನೆಪದ ಪ್ರತಿಭಟನೆ : ಸಿಎಂ ಯಡಿಯೂರಪ್ಪ

ಬೆಂಗಳೂರು, ಮಾ. 23 - ವಿಧಾನಮಂಡಲದ ಬಜೆಟ್ ಅಧಿವೇಶನ ಸಂದರ್ಭದಲ್ಲಿ ಕಾಂಗ್ರೆಸ್ ಸದಸ್ಯರು ಕುಂಟು ನೆಪ ಹೇಳಿ ಪ್ರತಿಭಟನೆ ಮಾಡುತ್ತಿದ್ದಾರೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಟೀಕಿಸಿದ್ದಾರೆ.

ರಾಸಲೀಲೆ ಸಿ.ಡಿ. ಹಗರಣ ಕುರಿತಂತೆ ನೈತಿಕ ಹೊಣೆ ಹೊತ್ತು ಸಚಿವ ಸ್ಥಾನಕ್ಕೆ ರಮೇಶ್ ಜಾರಕಿಹೊಳಿ ರಾಜೀನಾಮೆ ನೀಡಿದ್ದಾರೆ. ತನಿಖೆ ನಡೆಸಲು ಎಲ್ಲಾ ಕ್ರಮ ಕೈಗೊಳ್ಳಲಾಗಿದೆ. ಪ್ರತಿಪಕ್ಷ ಕಾಂಗ್ರೆಸ್ ಸದಸ್ಯರಿಗೆ ಚರ್ಚೆ ನಡೆಸಲು ಬೇರೆ ವಿಚಾರ ಸಿಗದೆ ಕುಂಟು ನೆಪ ಮಾಡಿಕೊಂಡು ಧರಣಿ ನಡೆಸುತ್ತಿದ್ದಾರೆ, ಇದು ಎಷ್ಟರ ಮಟ್ಟಿಗೆ ಸರಿ? ಎಂದು ಮುಖ್ಯಮಂತ್ರಿ ಪ್ರಶ್ನಿಸಿದ್ದಾರೆ. ನಿಮ್ಮೆಲ್ಲರ ಮಾತು ಕೇಳಿದ್ದೇನೆ, ಹಗರಣ ಸಂಬಂಧ ಪ್ರತಿಪಕ್ಷ ಕಾಂಗ್ರೆಸ್ ಸದಸ್ಯರ ಮಾತುಗಳನ್ನೂ ಆಲಿಸಿದ್ದೇನೆ, ಸದನ ಕಲಾಪ ಸುಸೂತ್ರವಾಗಿ ನಡೆಸಲು ಅವಕಾಶ ನೀಡಬೇಕು. ಹಗರಣದ ಆರೋಪಿತ ಹೆಣ್ಣುಮಗಳು ತನಿಖೆಗೆ ಸಿಗುತ್ತಿಲ್ಲ, ಮಹಿಳೆ ಲಭ್ಯವಾದರೆ ಪ್ರಕರಣಕ್ಕೆ ಅಂತ್ಯ ದೊರೆಯಲಿದೆ.ಅಲ್ಲಿಯವರೆಗೆ ಪ್ರತಿಪಕ್ಷ ಕಾಂಗ್ರೆಸ್ ಧರಣಿ ಬಿಟ್ಟು ಕಲಾಪಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಮುಖ್ಯಮಂತ್ರಿ ಮನವಿ ಮಾಡಿದರು.

## ಭವಿಷ್ಯ ನಿಧಿ : 5 ಲಕ್ಷ ರೂ.ಗಳವರೆಗೆ ತೆರಿಗೆ ವಿನಾಯಿತಿ

ನವದೆಹಲಿ, ಮಾ. 23 – ವಾರ್ಷಿಕ ಐದು ಲಕ್ಷ ರೂ.ಗಳವರೆಗೆ ಭವಿಷ್ಯ ನಿಧಿಗೆ ಜಮಾ ಮಾಡುವವರಿಗೆ ಬಡ್ಡಿಯ ಮೇಲಿನ ತೆರಿಗೆಯಲ್ಲಿ ವಿನಾಯಿತಿ ನೀಡಲಾಗುವುದು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ. ಈ ಮಿತಿಯನ್ನು 2.5 ಲಕ್ಷ ರೂ.ಗಳಿಗೆ ಇಳಿಸುವುದಾಗಿ ಸೀತಾರಾಮನ್ ಬಜೆಟ್‌ನಲ್ಲಿ ಪ್ರಸ್ತಾಪಿಸಿದ್ದರು.

ಹೆಚ್ಚು ಆದಾಯ ಗಳಿಸುವವರು ಭವಿಷ್ಯ ನಿಧಿಯಲ್ಲಿ ಹಣ ತೊಡಗಿಸುವುದಕ್ಕೆ ಉತ್ತೇಜನ ನೀಡಬಾರದು ಎಂದು ಮಿತಿಯನ್ನು 2.5 ಲಕ್ಷ ರೂ.ಗಳಿಗೆ ನಿಗದಿ ಪಡಿಸಲು ಯೋಜಿಸಲಾಗಿತ್ತು. ಆದರೆ, ಬಜೆಟ್ ಕುರಿತು ಮಂಗಳವಾರ ಲೋಕಸಭೆಯಲ್ಲಿ ಮಾತನಾಡಿದ ಸೀತಾರಾಮನ್, ಮಿತಿಯನ್ನು 5 ಲಕ್ಷ ರೂ.ಗಳಿಗೆ ಹೆಚ್ಚಿಸುವುದಾಗಿ ಹೇಳಿದ್ದಾರೆ.

## ನಕ್ಸಲ್ ಬಾಂಬ್ : ಪೊಲೀಸರ ಸಾವು

ರಾಯಪುರ, ಮಾ. 23 – ಛತ್ತೀಸ್‌ಘಡದ ನಾರಾಯಣಪುರ ಜಿಲ್ಲೆಯಲ್ಲಿ ನಕ್ಸಲರು ನಡೆಸಿದ ಬಾಂಬ್ ದಾಳಿಗೆ ಸಿಲುಕಿ ಬಸ್‌ನಲ್ಲಿದ್ದ ಐವರು ಪೊಲೀಸರು ಮೃತಪಟ್ಟಿದ್ದಾರೆ ಮತ್ತು ಇತರೆ 13 ಜನ ಗಾಯಗೊಂಡಿದ್ದಾರೆ. ಕನ್ಹರಗಾಂವ್ ಮತ್ತು ಕಡೆನರ್ ಹಳ್ಳಿಗಳ ನಡುವಿನ ದಾರಿಯಲ್ಲಿ ನೆಲಬಾಂಬ್ ಸ್ಫೋಟಿಸಿ ದಾಳಿ ನಡೆಸಲಾಗಿದೆ. ದಾಳಿಯಲ್ಲಿ ಚಾಲಕ ಸೇರಿದಂತೆ ಡಿ.ಆರ್.ಜಿ.ಯ ಐವರು ಸಿಬ್ಬಂದಿ ಸಾವ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಗಾಯಗೊಂಡವರನ್ನು ಹೆಲಿಕಾಪ್ಟರ್‌ನಲ್ಲಿ ರಾಯಪುರದ ಆಸ್ಪತ್ರೆಗೆ ದಾಖಲಿಸಲಾಗಿದೆ.

## ಆಮ್ ಆದ್ಮಿ ಪಾರ್ಟಿ ಶಾಸಕನಿಗೆ ಜೈಲು

ನವದೆಹಲಿ, ಮಾ. 23 – ಎ.ಐ.ಐ.ಎಂ.ಎಸ್. ಭದ್ರತಾ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಆಮ್ ಆದ್ಮಿ ಪಾರ್ಟಿ ಶಾಸಕ ಸೋಮನಾಥ ಭಾರತಿಗೆ ಎರಡು ವರ್ಷ ಜೈಲು ಶಿಕ್ಷೆ ವಿಧಿಸಿದ್ದನ್ನು ದೆಹಲಿ ನ್ಯಾಯಾಲಯ ಎತ್ತಿ ಹಿಡಿದಿದೆ. 2016ರಲ್ಲಿ ನಡೆದ ಘಟನೆಗೆ ಸಂಬಂಧಿಸಿದಂತೆ ಕಳೆದ ಜನವರಿಯಲ್ಲಿ ಮ್ಯಾಜಿಸ್ಟ್ರೇಟ್ ನ್ಯಾಯಾಲಯ ಜೈಲು ಶಿಕ್ಷೆ ವಿಧಿಸಿತ್ತು. ವಿಶೇಷ ನ್ಯಾಯಮೂರ್ತಿ ವಿಕಾಸ್ ಧುಲ್ ಅವರು ಭಾರತಿ ವಿರುದ್ಧ ನೀಡಲಾದ ತೀರ್ಪನ್ನು ಎತ್ತಿ ಹಿಡಿದಿದ್ದಾರೆ.

## ಕೊರೊನಾ : ಪರೀಕ್ಷೆ, ಲಸಿಕೆ ಹೆಚ್ಚಿಸಲು ಕೇಂದ್ರ ಸರ್ಕಾರ ಸೂಚನೆ

ನವದೆಹಲಿ, ಮಾ. 23 – ಕೊರೊನಾಗೆ ಸಂಬಂಧಿಸಿದಂತೆ ಏಪ್ರಿಲ್ ತಿಂಗಳ ಮಾರ್ಗಸೂಚಿ ಬಿಡುಗಡೆ ಮಾಡಿರುವ ಕೇಂದ್ರ ಸರ್ಕಾರ, ರಾಜ್ಯಗಳು ಆರ್.ಟಿ. - ಪಿ.ಸಿ.ಆರ್. ಪರೀಕ್ಷೆ ಹೆಚ್ಚಿಸಬೇಕು ಹಾಗೂ ಸೋಂಕಿತರನ್ನು ಗುರುತಿಸಿ ಚಿಕಿತ್ಸೆ ನೀಡುವ ಜೊತೆಗೆ ಲಸಿಕೆ ಪ್ರಕ್ರಿಯೆ ಚುರುಕುಗೊಳಿಸಬೇಕು ಎಂದು ತಿಳಿಸಿದೆ. ಗೃಹ ಸಚಿವಾಲಯ ಹೊಸ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿದ್ದು, ಲಸಿಕೆಯಿಂದ ಕೊರೊನಾ ಹರಡುವಿಕೆಯ ಸರಣಿ ತುಂಡರಿಸಬಹುದು ಎಂದು ತಿಳಿಸಲಾಗಿದೆ.

## ರಾಜ್ಯಸಭಾ ಸದಸ್ಯ ಮೊಹಮ್ಮದ್ಜಾನ್ ನಿಧನ

ಚೆನ್ನೈ, ಮಾ. 23 – ತಮಿಳುನಾಡಿನ ಮಾಜಿ ಸಚಿವ ಹಾಗೂ ಎಐಎಡಿಎಂಕೆ ರಾಜ್ಯಸಭಾ ಸದಸ್ಯ ಮೊಹಮ್ಮದ್ಜಾನ್ ನಿಧನರಾಗಿದ್ದಾರೆ. ಅವರಿಗೆ 72 ವರ್ಷ ವಯಸ್ಸಾಗಿತ್ತು. ಎದೆನೋವಿನ ಕಾರಣದಿಂದ ಅವರನ್ನು ವಲಾಜಪೇಟ್ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ, ಮಾರ್ಗಮಧ್ಯದಲ್ಲೇ ಅವರು ಸಾವನ್ನಪ್ಪಿದ್ದಾರೆ.


**ಜಮೀನು ಮಾರಾಟಕ್ಕಿದೆ**
ಹರಪನಹಳ್ಳಿ ತಾಲ್ಲೂಕು ಅರಸೀಕೆರೆ ಹೋಬಳಿ ಹಿರೇಮೇಗಳಗೆರೆ ಗ್ರಾಮದಲ್ಲಿ 5.53 ಮತ್ತು 6.55 ಎಕರೆ ಅಕ್ಕ ಪಕ್ಕ ಇರುವ ಒಟ್ಟು ವಿಸ್ತೀರ್ಣ 12.08 ಎಕರೆ. ಅಕ್ಕ ಪಕ್ಕದಲ್ಲಿ ರಸ್ತೆ, 3 ಬೋರ್‌ಗಳಿವೆ. ದಾವಣಗೆರೆಯಿಂದ 10 ಕಿ.ಮೀ. ಹತ್ತಿರದಲ್ಲಿದೆ.
ಬೂಸ್ನೂರು ಕಿರಣ್ (ಏಜೆಂಟ್)
98440 63409, 97315 63409

ಮಾಸ್ಕ್ ಬಳಸಿ ಕೊರೊನಾ ತೊಲಗಿಸಿ

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ :
ಮೊ. : 98453 17181

**ಸೈಟುಗಳು ಮಾರಾಟಕ್ಕಿವೆ**
ಎಂ.ಸಿ.ಸಿ. 'ಎ' ಬ್ಲಾಕ್ ನಲ್ಲಿ 30x120 ಪಶ್ಚಿಮ
ಕುಂದುವಾಡ ಕೆರೆ ರಸ್ತೆ, ಬಂಟರ ಭವನ ಸಮೀಪ 30x50 ಪೂರ್ವ, 30x40 ದಕ್ಷಿಣ ಅಕ್ಕ-ಪಕ್ಕ.
ಸ್ವಾಮಿ ಏಜೆಂಟ್, ವಿದ್ಯಾನಗರ
97421-44715

**ಕಾರು ಬೇಕಾಗಿವೆ**
Skoda, Verna, Maruthi, Toyota, Duster, TATA Renault ಯಾವುದೇ ಕಾರುಗಳು ಮಾರಾಟಕ್ಕೆ ಇದ್ದರೆ ತಿಳಿಸಿರಿ.
ಕಿರಣ್ ಬೂಸ್ನೂರ್
98440-63409, 97315-63409

**ಸೈಟುಗಳು ಮಾರಾಟಕ್ಕಿವೆ**
ಮಹಾಲಕ್ಷ್ಮಿ ಲೇಔಟ್ ನಲ್ಲಿ ಮತ್ತು ಸುತ್ತಮುತ್ತ 45x58 South, 49x58 South, 30x50 West, 94x58 South, 28x70 West
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166-12110

**ಹೋಟೆಲ್ ಬಾಡಿಗೆಗೆ ಬೇಕಾಗಿದೆ**
ರನ್ನಿಂಗ್ ಸ್ಥಿತಿಯಲ್ಲಿರುವ ಫರ್ನೀಚರ್ ಹೊಂದಿರುವ ಸಸ್ಯಹಾರಿ ಹೋಟೆಲ್ ಬಾಡಿಗೆಗೆ ಬೇಕಾಗಿದೆ. ಸಂಪರ್ಕಿಸಿ :
ಮೊ. : 90601 72745

**ಗಾರ್ಡನ್‌ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ**
ಸಂಪರ್ಕಿಸಿ : ನೂತನ ಕಾಲೇಜ್,
6000/- ಸಂಬಳ
ಬೆಳಿಗ್ಗೆ 8 ರಿಂದ ಸಂಜೆ 6 ರವರೆಗೆ
ಮೊ. : 97417 23358

**ಸೈಟು ಮಾರಾಟಕ್ಕೆ (JHP)**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 40x60 ಪೂರ್ವ.
ಕಿರಣ್ ಬೂಸ್ನೂರ್ (ಏಜೆಂಟ್)
98440-63409, 97315-63409
(ಡಾಲರ್ಸ್ ಕಾಲೋನಿ 40x60 ಉತ್ತರ)

**ಸೈಟುಗಳು ಮಾರಾಟಕ್ಕಿವೆ**
ಬಸವೇಶ್ವರ ಲೇಔಟ್ ನಲ್ಲಿ 30x50 South, 45x50 North, 30x40 East, 30x45 North West Corner
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166-12110, 93410-14130

**ಬಾತ್‌ರೂಂ ಗ್ರೌಟ್**
ಬಾತ್ ರೂಂನಲ್ಲಿ ಸಾಧಾರಣ ಗ್ರೌಟ್ ಮಾಡಿರುವುದರಿಂದ ಸೀಲಿಂಗ್‌ನಲ್ಲಿ ನೀರು ಲೀಕೇಜ್ ಆಗಿ ರೂಫ್ ದುರ್ಬಲ ಆಗಬಹುದು. ಅದಕ್ಕೆ ಪರ್ಮನೆಂಟಾದ ಗ್ರೌಟ್ ಮಾಡಿಸಿ ಕೊಂಡು ನಿಶ್ಚಿಂತರಾಗಿ, ಈ ಗ್ರೌಟ್ ಟೈಲ್ಸ್‌ಗೆ ಪರ್ಮನೆಂಟಾಗಿ ಫಿಕ್ಸ್ ಆಗಿರುತ್ತದೆ. ರಿಯಾಯಿತಿ ದರ.
81050 40110

**ಮನೆಯ ರೀ ಪೇಂಟಿಂಗ್**
ಹಳೆಯ ಮನೆಯನ್ನು ಹೊಸದಾಗಿ ಪೇಂಟಿಂಗ್ ಮಾಡಿಸಿಕೊಳ್ಳಿ, ಕಡಿಮೆ ದರದಲ್ಲಿ
72046 33302

**ಬೇಕಾಗಿದ್ದಾರೆ**
ಕರುಣಾ ಜೀವ ಕಲ್ಯಾಣ ಟ್ರಸ್ಟ್‌ಗೆ ಸಮಾಜ ಸೇವೆಯಲ್ಲಿ ಆಸಕ್ತಿ ಇರುವ ಉತ್ಸಾಹಿ ಯುವಕರು ಮತ್ತು ವಿವಾಹಿತ ಮಹಿಳೆಯರು ಕೆಲಸಕ್ಕೆ ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC / PUC
83105 20002

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ 18 ರಿಂದ 25 ವರ್ಷದೊಳಗಿನ ಸೇಲ್ಸ್ ಗರ್ಲ್ಸ್ ಮತ್ತು ಸೇಲ್ಸ್ ಬಾಯ್ಸ್ ಬೇಕಾಗಿದ್ದಾರೆ. ಗ್ರಾಮಾಂತರದ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯವಿದೆ.
ಸಂಪರ್ಕಿಸಿ : 82173 52453

**ಅಪಾರ್ಟ್‌ಮೆಂಟ್‌ನಲ್ಲಿ ಮನೆ ಮಾರಾಟಕ್ಕಿದೆ**
ಅಪಾರ್ಟ್‌ಮೆಂಟ್‌ನಲ್ಲಿ 3 BHK ಪೂರ್ವ ದಿಕ್ಕಿನ ಮನೆ ಜಯನಗರದಲ್ಲಿ ಮಾರಾಟಕ್ಕಿದೆ
SS ಐಟೆಕ್ ಬಡಾವಣೆ, 30x50 ಪಶ್ಚಿಮ ದಿಕ್ಕಿನ ಮನೆ ಮಾರಾಟಕ್ಕಿದೆ.
99457 02495, ಐಗೂರು ವಿಜಯ್ ಕುಮಾರ್
95911 60520 -ಸುರೇಶ್

**ನಿವೇಶನ ಮಾರಾಟಕ್ಕಿದೆ**
ಸ್ಥಳ : ಬೆಂಗಳೂರು ಜಿಲ್ಲೆ, ಬ್ಲಾಕ್ ನೆಲಮಂಗಲ ಯಂಟಗಾನಹಳ್ಳಿ ಗ್ರಾ.ಪಂ. ಗ್ರಾಮ : ಮಲ್ಲರಬಾಣವಾಡಿ. ಮಾಲೀಕರ ಹೆಸರು : ಹೆಚ್.ಜಿ. ಅನ್ನಪೂರ್ಣಮ್ಮ. ವಿಸ್ತೀರ್ಣ : ಪೂರ್ವ 51.9 ft. ಪಶ್ಚಿಮ : 45.6 ft. ಉತ್ತರ: 80 ft. ದಕ್ಷಿಣ : 80 ft. ನಿವೇಶನ ಸಂಖ್ಯೆ : 507/407. ತರಳಬಾಳು ಬಡಾವಣೆ, ಮಲ್ಲರಬಾಣವಾಡಿ ಗ್ರಾಮ. ಸಂಪರ್ಕಿಸಬೇಕಾದ ದೂರವಾಣಿ :
ಅನ್ನಪೂರ್ಣಮ್ಮ : 87479-72242

**ಬೇಕಾಗಿದ್ದಾರೆ**
ಟೈಲರಿಂಗ್ ಮಹಿಳೆಯರು ಸಹಾಯಕ ಮಹಿಳೆಯರು
Part time ಕೆಲಸಕ್ಕೆ ಮಹಿಳೆಯರು
ಮೊ. : 74830 88761

**ಬೇಕಾಗಿದ್ದಾರೆ**
ಬೇಕರಿ ಕೆಲಸಕ್ಕೆ 25 ವರ್ಷದೊಳಗಿನ ಹುಡುಗಿಯರು ಬೇಕಾಗಿದ್ದಾರೆ.
ಆಸಕ್ತರು ಸಂಪರ್ಕಿಸಿರಿ
90713 55022

**ಮಾರಾಟಕ್ಕಿದೆ**
ದಾವಣಗೆರೆ ನಗರದ ಚೌಕಿಪೇಟೆಯಲ್ಲಿ 12x88 ವಿಸ್ತೀರ್ಣದ ತಿಂಗಳಿಗೆ 60 ಸಾವಿರ ಬಾಡಿಗೆ ಬರುವಂತಹ ಕಟ್ಟಡ ಮಾರಾಟಕ್ಕಿದೆ. ಸಂಪರ್ಕಿಸಿ :
78922 95142, 78991 73500
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)

**ಮನೆ ಬಾಡಿಗೆಗೆ ಇದೆ**
#3367/49, ಶಾಮನೂರು ರಸ್ತೆ, ಲಕ್ಷ್ಮಿ ಫ್ಲೋರ್ ಮಿಲ್ ಹತ್ತಿರ, ಪೆಟ್ರೋಲ್ ಬಂಕ್ ಎದುರು ಗ್ರೌಂಡ್ ಫ್ಲೋರ್ 2 ಬೆಡ್ ರೂಂ ಮನೆ, ಕಾರ್ ಪಾರ್ಕಿಂಗ್ ಇದೆ ಮತ್ತು ಎರಡನೇ ಮಹಡಿಯಲ್ಲಿ ಅಟ್ಯಾಚ್ ಬಾತ್‌ರೂಂ ಇರುವ ರೂಂ ಸಹ ಬಾಡಿಗೆಗೆ ಇದೆ.
94487 58967

**ಬಟ್ಟೆ ಅಂಗಡಿಯಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ**
ಹುಡುಗರು ಬೇಕಾಗಿದ್ದಾರೆ.
ಜನತಾ ಖಾದಿ ಭಂಡಾರ, ಅಶೋಕ ರಸ್ತೆ, ಮಹಿಳಾ ಸಮಾಜ ಕಾಂಪ್ಲೆಕ್ಸ್, ದಾವಣಗೆರೆ.

**ಶ್ರೀ ದುರ್ಗಾಂಬಿಕ ಹೋಂ ಕೇರ್ ಸರ್ವೀಸ್**
ನಮ್ಮಲ್ಲಿ ವಯೋವೃದ್ಧರನ್ನು ನೋಡಿಕೊಳ್ಳಲು ಆಯಾಗಳನ್ನು ಕಳುಹಿಸುತ್ತೇವೆ.
ವಯೋವೃದ್ಧರನ್ನು ನೋಡಿಕೊಳ್ಳಲು ಯುವಕ, ಯುವತಿಯರು ಬೇಕಾಗಿದ್ದಾರೆ.
(ಊಟ, ವಸತಿ ವ್ಯವಸ್ಥೆ ಇರುತ್ತದೆ.)
ಫೋ. : 96062 82814

**ಮಳಿಗೆ ಬಾಡಿಗೆಗೆ ಇದೆ**
ವಿದ್ಯಾರ್ಥಿ ಭವನದ ಹತ್ತಿರ, ಹದಡಿ ರೋಡ್ ದಾವಣಗೆರೆ
84315 68521

**WANTED SALES MANAGER**
B.A./B.Com/Diploma. Tally, Basic Computer Knowledge. Walk-in with Resume to
Agadi Track & Trail
Murughrajendra Complex, Hadadi Road.

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ಸ್ ಮತ್ತು ಸೆಕ್ಯೂರಿಟಿ ಸೂಪರ್‌ವೈಜರ್‌ಗಳು ಕೆಲಸಕ್ಕೆ ಕೂಡಲೇ ಬೇಕಾಗಿದ್ದಾರೆ. ಸಂಪರ್ಕಿಸಿ :
NDF Security Solutions India Pvt Ltd
ಕುರುಬರ ಹಾಸ್ಟೆಲ್, ಜಯದೇವ ಸರ್ಕಲ್, ದಾವಣಗೆರೆ-2.
98448 08903, 96631 43409

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯಿತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
www.lingayathweds.com
ದಾವಣಗೆರೆ, ಶಿವಮೊಗ್ಗ, ಸಾಗರ ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
ಮೊ: 95135 79130, 80509 52637

**ಬೇಕಾಗಿದ್ದಾರೆ**
ಹೆಲ್ಪರ್ಸ್/ಸೇಲ್ಸ್‌ಗೆ ಹುಡುಗ/ಹುಡುಗಿಯರು ಬೇಕಾಗಿದ್ದಾರೆ.
ನಾಗಣೇಚಿ ಕಟ್ ಫೀಸ್ ಸೆಂಟರ್
#19/1, ಕಾಳಿಕಾದೇವಿ ರೋಡ್, ದಾವಣಗೆರೆ-1.
81055 53341

**ಗುಮಾಸ್ತರು ಬೇಕಾಗಿದ್ದಾರೆ**
ದಾವಣಗೆರೆಯ ಅಂಗಡಿ ಕೆಲಸಕ್ಕೆ ಗುಮಾಸ್ತರು ಬೇಕಾಗಿದ್ದಾರೆ.
ಸಂಪರ್ಕಿಸುವ ಸಮಯ :
ಬೆಳಿಗ್ಗೆ 11 ರಿಂದ ಸಂಜೆ 5ರ ಒಳಗೆ
99864 67206

**15 ದಿನಗಳಲ್ಲಿ ಪರಿಹಾರ**
ಬಿಪಿ, ಶುಗರ್, ಥೈರಾಯ್ಡ್, ಗ್ಯಾಸ್ಟ್ರಿಕ್, ವೆರಿಕೋಸ್, ವೈನ್ಸ್, ಮೈಗ್ರೇನ್, ತೂಕ ಇಳಿಕೆ, ನರಗಳ ಸೆಳೆತ, ಮಂಡಿ, ಬೆನ್ನು, ಸೊಂಟ, ಕುತ್ತಿಗೆ ನೋವುಗಳು ಹಲವು ಸಮಸ್ಯೆಗಳಿಗೆ ಪರಿಹಾರ.
ಸಮಯ : ಬೆ: 9.00 ರಿಂದ 5:00 ರವರೆಗೆ
ಗಂಗೋತ್ರಿ ವೆಲ್‌ನೆಸ್ ಸೆಂಟರ್
ಜಯದೇವ ಸರ್ಕಲ್, ದಾವಣಗೆರೆ.
86602 35013

**ಬೇಕಾಗಿದ್ದಾರೆ**
ಸುಪ್ರಸಿದ್ಧ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್‌ಗರ್ಲ್ಸ್, ಸೇಲ್ಸ್‌ಬಾಯ್ಸ್ ಮತ್ತು ಕ್ಯಾಷಿಯರ್ ಬೇಕಾಗಿದ್ದಾರೆ. ಸಂಪರ್ಕಿಸಿ :
ಮೊ. : 87622 21696

**ಬೇಕಾಗಿದ್ದಾರೆ**
1) Computer Teachers (Ladies) - 6 No.s
2) Tailoring Teachers (Ladies) - 6 No.s
Quali ; Fashion Designing, PGDC (Diploma), BCA, JOC
ಆಸಕ್ತರು ಫೋಟೋ 2, ಆಧಾರ್ ಕಾರ್ಡ್, ಪಾನ್ ಕಾರ್ಡ್, ಮಾರ್ಕ್ಸ್ ಕಾರ್ಡ್ ಜೆರಾಕ್ಸ್ ನೊಂದಿಗೆ ಸಂಪರ್ಕಿಸಿ
73493 97287, 97417 46205
Whatsappಗೆ ಮೂಲ ದಾಖಲೆ ಕಳುಹಿಸಿ
Davangere/Harihar

**ಬೇಕಾಗಿದ್ದಾರೆ**
ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಯುವಕ, ಯುವತಿಯರು ಬೇಕಾಗಿದ್ದಾರೆ.ಸಂಬಳ 6000-8000
78922 95142
78991 73500

**ತಕ್ಷಣ ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಕೆಲಸಕ್ಕೆ ಗಂಡ-ಹೆಂಡತಿ ಇರುವವರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ 16000/- ಊಟ, ರೂಂ ಉಚಿತ.
97400 98064, 97400 98047

**ಅಧಿಕೃತ ಚೀಟಿ ಸಂಸ್ಥೆ**
ರೂ.5 ಲಕ್ಷದ ಚೀಟಿ ಪ್ರಾರಂಭ.
ತಿಂಗಳ ಕಂತು 10,000/- ದಿಂದ 6,500/- ಮಾತ್ರ
ಸ್ಕಂದ ಚಿಟ್ ಫಂಡ್ಸ್ (ರಿ) ದಾವಣಗೆರೆ-02
84531 61869

**ತಕ್ಷಣ ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಕೆಲಸಕ್ಕೆ ಗಂಡ-ಹೆಂಡತಿ ಇರುವವರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಬಳ 16000/- ಊಟ, ರೂಂ ಉಚಿತ.
97400 98064, 97400 98047

**ತಕ್ಷಣ ಬೇಕಾಗಿದ್ದಾರೆ**
ಶ್ರೀ ದುರ್ಗಾಶ್ರೀ ಟಿಂಬರ್ಸ್
ಹೆಲ್ಪರ್ಸ್/ಪುರುಷರು. ಸಮಯ : ಬೆಳಗ್ಗೆ 9 ರಿಂದ ಸಂಜೆ 7 ರವರೆಗೆ ವಾರದ ಸಂಬಳ ರೂ. 2000/-
ಸಂಪರ್ಕಿಸಿ :
98863 17201

**ಸೈಟು ಮಾರಾಟಕ್ಕಿದೆ**
ಪಿ.ಜೆ. ಬಡಾವಣೆ, 3ನೇ ಮುಖ್ಯರಸ್ತೆ, ಚೇತನ ಹೋಟೆಲ್ ಹತ್ತಿರ, 80×30 ಅಡಿ ಅಳತೆಯ ಸೈಟು ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ
ಮೊ. : 97310 55766

**ಸೈಟುಗಳು ಮಾರಾಟಕ್ಕಿವೆ**
ಜೆ.ಹೆಚ್. ಪಟೇಲ್ ಬಡಾವಣೆಯಲ್ಲಿ 40x60 ಉತ್ತರ, ಡಾಲರ್ಸ್ ಕಾಲೋನಿಯಲ್ಲಿ 30x50 ಪೂರ್ವ, ಶಿವಪಾರ್ವತಿ ಬಡಾವಣೆಯಲ್ಲಿ 30×50 ಪೂರ್ವ
Mob. 87226 08529
ರುದ್ರೇಶ್, ಏಜೆಂಟರು

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿ ಕೆಲಸಕ್ಕೆ ಹುಡುಗರು/ಹುಡುಗಿಯರು ತಕ್ಷಣ ಬೇಕಾಗಿದ್ದಾರೆ.
94803 43063

**ಮನೆ, ಸೈಟ್ ಮಾರಾಟಕ್ಕಿದೆ**
ಆನಗೋಡಿನಲ್ಲಿ 30×40 ಸೈಜಿನ ಮನೆ ಮಾರಾಟಕ್ಕಿದೆ. ವಾಣಿ ಹೊಂಡ ಶೋ ರೂಂ ಹತ್ತಿರ ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ:
ಮೊ. : 96117 43256

**ಸಾಲಗಳಿಗೆ ಸಂಪರ್ಕಿಸಿ**
(ಬಡ್ಡಿ ದರ ವಾರ್ಷಿಕ 7% ರಿಂದ ಪ್ರಾರಂಭ)
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ, ಕಟ್ಟಿರುವ ಮನೆಗೆ ಸಾಲ, ಬೇರೆ ಬ್ಯಾಂಕ್‌ನಲ್ಲಿ ತೆಗೆದುಕೊಂಡಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲಕ್ಕಾಗಿ ಸಂಪರ್ಕಿಸಿ. (ಸಂಬಳ ಮತ್ತು ವ್ಯವಹಾರದಾರರಿಗೆ ಮಾತ್ರ)
73385 80345

**WANTED**
MALE STAFF TO WORK IN CAFE
IN MCC 'B' BLOCK, AGE BETWEEN 18 TO 25
SALARY 8000.
Mob. : 8296672274

**ಬೇಕಾಗಿದ್ದಾರೆ**
ರಾಜಲಕ್ಷ್ಮಿ ಫಾರ್ಮಾದಲ್ಲಿ
ಕೆಲಸ ಮಾಡಲು SSLC, PUC ಆಗಿರುವ ಮಹಿಳೆಯರು Stock ತೆಗೆಯುವುದಕ್ಕೆ ಬೇಕಾಗಿದ್ದಾರೆ.
ವಿಳಾಸ : ಪಿ.ಜೆ. ಬಡಾವಣೆ, 7ನೇ ಮೇನ್, 7ನೇ ಕ್ರಾಸ್, ದಾವಣಗೆರೆ.
96060 48402

**ಮನೆ ಬಾಡಿಗೆಗೆ ಇದೆ**
ತರಳಬಾಳು ಬಡಾವಣೆ, 4ನೇ ಮೇನ್, 3ನೇ ಕ್ರಾಸ್, ಐಟಿಐ ಕಾಲೇಜು ಎದುರು ರೋಡ್, ಮೊದಲನೇ ಮಹಡಿಯಲ್ಲಿ 2 BHK ಮನೆ ಬಾಡಿಗೆಗೆ ಇದೆ.
ಮೊ. : 94814 52642

**ಜಗಳೂರಿನಲ್ಲಿ ಜಮೀನು ಬೇಕಾಗಿದೆ**
ಜಗಳೂರು ಅಕ್ಕಪಕ್ಕದಲ್ಲಿ ಜಮೀನು (ಹೊಲ) ಬೇಕಾಗಿದೆ. ಸಂಪರ್ಕಿಸಿ :
ಮೊ. : 99643 99129

**ಬಾಡಿಗೆಗೆ/ಲೀಸ್‌ಗೆ**
1 BHK, 2 BHK, 3 BHK
Mob. 87226 08529
ರುದ್ರೇಶ್, ಏಜೆಂಟರು

**Free Training**
Basic, DTP, Tally For Sc/St/2A/3B
ಇಂದೇ ಅರ್ಜಿ ಪಡೆಯಿರಿ.
97426 10385

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**UPS BATTERY & RO PURIFIERS**
Sales & Service
PEACE ENTERPRISES
83100 42490, 99013 18277
98801 56667

**Change of Name**
I Smt Vinodamma G. w/o Gurusiddappa B. 57 years residents @ 1675/57, 1st Main, 1st Cross, near HKR circle, Kiruvadi Layout, Lenin Nagar, Davangere. My name has been mentioned in my ECHS records as Kamala Devi w/o B. Gurusiddappa. I write to state that the before notary Davangere on 22.3.2021 above two names are me only and to none else. In future I will be using my name as Vinodamma G. w/o Gurusiddappa B.
Sd/- Vinodamma G.

**ಬೇಕಾಗಿದ್ದಾರೆ**
ನೀರಿನ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿರಿ :
88619 45934

**ಭೂಮಿಕಾ ಮ್ಯಾಟ್ರಿಮೊನಿ**
ಲಿಂಗಾಯಿತ ವಧು-ವರರ ಕೇಂದ್ರ
H.O : Near coffee day, Nutana collage road, Vidyanagara 2nd main, Davangere
77603 16576
90080 55813

**ಪ್ರವೇಶ ಪ್ರಕಟಣೆ**
ಕರೆಸ್ಪಾಂಡೆನ್ಸ್/ ರೆಗ್ಯೂಲರ್
SSLC, PUC, BA, BCom, BSc, MA, MCom, MSc, MBA, All PG & Diploma Courses
S.S. Global Institute for Higher Education, Davanagere.
63619 00533, 72593 59861

## ರಾಣೇಬೆನ್ನೂರಿನಲ್ಲಿ ಕ್ಷಯರೋಗ ಜಾಗೃತಿ ಕಾರ್ಯಕ್ರಮ



ರಾಣೆಬೆನ್ನೂರು, ಮಾ.22- ಕ್ಷಯರೋಗದ ಬಗ್ಗೆ ಪ್ರತಿಯೊಬ್ಬರು ಜಾಗ್ರತೆ ವಹಿಸುವುದು ಅವಶ್ಯಕವಾಗಿದೆ ಎಂದು ಇಲ್ಲಿನ ಹೊಸನಗರದ ಗುಡ್ ಶೆಫರ್ಡ್ ಚರ್ಚ್‌ನ ರೆವರೆಂಡ್ ಕ್ರಿಸ್ತಾನಂದ ಕೊಳಚಿ ಹೇಳಿದರು.

ಹೊಸ ನಗರದಲ್ಲಿರುವ ಗುಡ್ ಶೆಫರ್ಡ್ ಚರ್ಚ್‌ನಲ್ಲಿ ಜಿಲ್ಲಾ ಕ್ಷಯರೋಗ ನಿಯಂತ್ರಣ ಕೇಂದ್ರದ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮದಡಿ ಕ್ಷಯರೋಗ ಕುರಿತ ಮಾಹಿತಿ ನೀಡುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜಿಲ್ಲಾ ಕ್ಷಯರೋಗ ನಿಯಂತ್ರಣ ಕೇಂದ್ರದ ಮೇಲ್ವಿಚಾರಕ ಜಗದೀಶ್ ಪಾಟೀಲ ಮಾತನಾಡಿ, ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಕ್ಷಯರೋಗಕ್ಕೆ ಪರೀಕ್ಷೆ ಹಾಗೂ ಚಿಕಿತ್ಸೆ ಉಚಿತವಾಗಿದೆ. ಭಯಪಡದೇ ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂದರು.

ನಗರ ಕ್ಷಯರೋಗ ಆರೋಗ್ಯ ಸಂದರ್ಶಕ ಗಿರೀಶ್ ಮುರನಾಳ ಮಾತನಾಡಿ, ಕ್ಷಯರೋಗಿಗಳಿಗೆ ಪೌಷ್ಠಿಕ ಆಹಾರ ಸೇವನೆಗಾಗಿ ಅವರ ಬ್ಯಾಂಕ್ ಖಾತೆಗೆ ಪ್ರತಿ ತಿಂಗಳು 500 ರೂ. ಜಮಾ ಮಾಡಲಾಗುವುದು ಎಂದರು. ರೆವರೆಂಡ್ ರಾಜು ಮದಗೊಪ್ಪ, ಜಯಮಾಲಾ, ಸುಂದರಮ್ಮ, ಪುನೀತ, ವಿವೇಕ, ರತ್ನಾಕರ ಉಪಸ್ಥಿತರಿದ್ದರು.

## ದೊಡ್ಡಾಲಘಟ್ಟದಲ್ಲಿ ಇಂದು ರಥೋತ್ಸವ, ನಾಳೆ ಅಡ್ಡಪಲ್ಲಕ್ಕಿ ಉತ್ಸವ

ಚಿತ್ರದುರ್ಗ ತಾಲ್ಲೂಕಿನ ದೊಡ್ಡಾಲಘಟ್ಟ ಗ್ರಾಮದ ಶ್ರೀ ರಂಗನಾಥ ಸ್ವಾಮಿಯ ರಥೋತ್ಸವ ಇಂದು ಸಂಜೆ 4 ಗಂಟೆಗೆ ಜರುಗುವುದು. ರಥೋತ್ಸವದ ಅಂಗವಾಗಿ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

ನಾಳೆ ದಿನಾಂಕ 25 ರ ಗುರುವಾರ ರಾತ್ರಿ 8 ಗಂಟೆಗೆ ಶ್ರೀ ರಂಗನಾಥ ಸ್ವಾಮಿ ಹಾಗೂ ಶ್ರೀ ಬಸವೇಶ್ವರ ಸ್ವಾಮಿಯ ಹೂವಿನ ಅಡ್ಡಪಲ್ಲಕ್ಕಿ ಉತ್ಸವ ನಡೆಯುವುದು. ಅಂದು ರಾತ್ರಿ 11 ಗಂಟೆಗೆ ಶ್ರೀ ರಂಗನಾಥ ಸ್ವಾಮಿ ಓಕಳಿ ಇದೆ. ದಿನಾಂಕ 26 ರ ಶುಕ್ರವಾರ ಬೆಳಿಗ್ಗೆ 10.30 ಕ್ಕೆ ಭೂತನ ಸೇವೆ (ದೊಡ್ಡ ಎಡೆ) ನೆರವೇರಿಸಲಾಗುವುದು.

# ಹಗಲುಗನಸಾದ ಹರಿಹರ ಅಭಿವೃದ್ಧಿ

ಎಂ. ಚಿದಾನಂದ ಕಂಚಿಕೇರಿ

**ನಗರ ಹಾಗೂ ತಾಲ್ಲೂಕಿನಲ್ಲಿ ಅಭಿವೃದ್ಧಿ ಕೆಲಸಗಳಾಗದೆ ಇರುವುದಕ್ಕೆ ಮಾಜಿ ಶಾಸಕ ಬಿ.ಪಿ. ಹರೀಶ್ ಕಾರಣ. ರಾಜ್ಯ ಹಾಗೂ ಕೇಂದ್ರದಲ್ಲಿ ಆಡಳಿತದಲ್ಲಿರುವ ಬಿಜೆಪಿ ಪಕ್ಷವೂ ಕಾರಣವಾಗಿದೆ. ಹಾಗಾಗಿ ಅಭಿವೃದ್ಧಿ ಕೆಲಸಗಳಿಗೆ ಹಿನ್ನಡೆಯಾಗಿದೆ ಎಂದು ಶಾಸಕ ಎಸ್. ರಾಮಪ್ಪ ಅವರ ಅಭಿಪ್ರಾಯವಾಗಿದೆ. ನಗರಸಭೆ ವತಿಯಿಂದ ಸೊಳ್ಳೆಗಳ ನಿರ್ಮೂಲನೆಗೆ ಔಷಧಿ ಸಿಂಪಡಣೆ ಮಾಡುವ ವ್ಯವಸ್ಥೆ ಮಾಡಲಾಗಿದೆ. ಸ್ವಚ್ಛತಾ ಕಾರ್ಯಗಳನ್ನು ಸೂಕ್ತವಾಗಿ ಕೈಗೊಳ್ಳುವ ನಿಟ್ಟಿನಲ್ಲಿ ಅಧಿಕಾರಿಗಳ ಸಭೆ ಕರೆದು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಜಲಸಿರಿ ಯೋಜನೆ ಕಾಮಗಾರಿ ಮುಗಿಯುವ ಹಂತದಲ್ಲಿದ್ದು, ಬೇಗನೆ ಮುಗಿಸುವಂತೆ ಗುತ್ತಿಗೆದಾರರಿಗೆ ತಿಳಿಸಲಾಗಿದೆ ಎಂದು ನಗರಸಭೆ ಪೌರಾಯುಕ್ತೆ ಎಸ್. ಲಕ್ಷ್ಮಿ ತಿಳಿಸಿದ್ದಾರೆ.**

ಮಧ್ಯ ಕರ್ನಾಟಕದ ಹೃದಯ ಭಾಗದಲ್ಲಿರುವ ಹರಿಹರ ನಗರ ಐತಿಹಾಸಿಕ ಶ್ರೀ ಹರಿಹರೇಶ್ವರ ದೇವಾಲಯ ಹಾಗೂ ತುಂಗಭದ್ರಾ ನದಿ ಹರಿಯುವ ಪುಣ್ಯಕ್ಷೇತ್ರವಾಗಿದೆ.

ಕೆಲ ವರ್ಷಗಳ ಹಿಂದೆ ಮೈಸೂರು ಕಿರ್ಲೋಸ್ಕರ್ ಕಾರ್ಖಾನೆಯಿಂದ ನಗರ ವಾಣಿಜ್ಯ ವಿಷಯದಲ್ಲೂ ಪ್ರಸಿದ್ಧಿ ಹೊಂದಿತ್ತು. ಆದರೆ ದುರ್ದೈವವೋ ಏನೋ ಸಾವಿರಾರು ಜನರ ಅನ್ನದ ಚೀಲ ತುಂಬುತ್ತಿದ್ದ ಕಂಪನಿ ಮುಚ್ಚಿದ ಪರಿಣಾಮ, ನಗರದ ಕಾರ್ಮಿಕರ ಬದುಕನ್ನು ಕಿತ್ತುಕೊಂಡು ಕತ್ತಲೆಯಲ್ಲಿ ಮುಳುಗಿಸಿ, ಸಾವಿರಾರು ಕುಟುಂಬಗಳು ಬೀದಿಗೆ ಬಿದ್ದವು.

ಇವೆಲ್ಲಾ ಮರೆತು ಜನರು ಜೀವನ ಸಾಗಿಸುವ ಸಮಯದಲ್ಲಿ ಕೊರೊನಾ ಮಾರಿ ವಕ್ಕರಿಸಿ, ಬದುಕನ್ನು ಮೂರಾಬಟ್ಟೆ ಮಾಡಿತು. ಕೊರೊನಾ ಹೋಯಿತಪ್ಪಾ ಎನ್ನುವಷ್ಟರಲ್ಲಿ ಮತ್ತೆ ನಾ ಬಂದೆ ಎಂದು ಕೂಗುತ್ತಿದೆ.

ಇವೆಲ್ಲದರ ನಡುವೆ ಹರಿಹರ ನಗರದಲ್ಲಿ ಕಳೆದ ಮೂರು-ನಾಲ್ಕು ವರ್ಷಗಳಿಂದ ಯಾವುದೇ ಹೊಸ ಯೋಜನೆಗಳು ಕಾರ್ಯರೂಪಕ್ಕೆ ಬರದೆ, ನಗರ ಹಾಗೂ ತಾಲ್ಲೂಕು ಮಟ್ಟದಲ್ಲಿ ಪ್ರಗತಿಯನ್ನೇ ಕಾಣದೆ ಹೋಗುತ್ತಿದ್ದೇವೆ. ನಗರಸಭೆಯ ಆರೋಗ್ಯ ವಿಭಾಗ ಸ್ವಚ್ಛತಾ ಕಾರ್ಯಕ್ಕೆ ಗಮನ ನೀಡದ ಪರಿಣಾಮ ಚರಂಡಿಗಳು ಕಟ್ಟಿಕೊಂಡು ಗಬ್ಬೆದ್ದು ನಾರುತ್ತಿವೆ. ಸೊಳ್ಳೆ, ಹಂದಿಗಳು ಹೆಚ್ಚಾಗಿ ಸಾಂಕ್ರಾಮಿಕ ರೋಗ ಹರಡುವುದಕ್ಕೆ ದಾರಿ ಮಾಡಿಕೊಟ್ಟಂತಿದೆ. ಹಂದಿ, ಬಿಡಾಡಿ ದನಗಳ ಹಾವಳಿ ಹೆಚ್ಚಾಗಿದೆ. ಅಸಮರ್ಪಕ ಯುಜಿಡಿ ಕಾಮಗಾರಿಯಿಂದ ರಸ್ತೆಗಳು ಹಾಳಾಗಿದ್ದು, ಮಕ್ಕಳು, ವೃದ್ಧರು ಓಡಾಡದ ಮಟ್ಟದಲ್ಲಿದೆ.

ನಗರದ ಎಲ್ಲಾ ಬಡಾವಣೆಯ ಬಹುತೇಕ




ರಸ್ತೆಗಳು ಹಾಳಾಗಿ ಹೋಗಿವೆ. ನಗರದ ಪಿ.ಬಿ. ರಸ್ತೆಯ ಶಿವಬ್ಯಾಂಕ್ ಮುಂದೆ ಹಾಕಿರುವ ಹಾಗೂ ಶಿವಮೊಗ್ಗ ರಸ್ತೆಯಲ್ಲಿ ಹಾಕಿರುವ ಅಸಮರ್ಪಕ ಹಂಪ್ಸ್‌ಗಳಿಂದಾಗಿ ಸಾರ್ವಜನಿಕರು ಮತ್ತು ವಾಹನ ಸವಾರರು ಓಡಾಡುವ ವೇಳೆ ಪರದಾಡುವಂತಾಗಿದೆ. ಪಿ.ಬಿ. ರಸ್ತೆಯಲ್ಲಿ ವಿದ್ಯುತ್ ದೀಪಗಳನ್ನು ಅಳವಡಿಸಲಾಗಿದೆ. ಆದರೆ ಹಸಿರನ್ನು ಬೆಳೆಸುವಲ್ಲಿ ಶ್ರಮ ವಹಿಸಿಲ್ಲ. ತಾಲ್ಲೂಕಿನಲ್ಲಿ ತುಂಗಭದ್ರಾ ನದಿ ನೀರು ಹರಿಯುವುದರಿಂದ ದೊಡ್ಡ ಪ್ರಮಾಣದಲ್ಲಿ ಮರಳು ಶೇಖರಣೆ ಆಗುತ್ತಿದೆ. ಆದರೆ ಅಕ್ರಮ ಮರಳು ಸಾಗಾಟದಿಂದ ಸಾಮಾನ್ಯ ಜನರು ದುಪ್ಪಟ್ಟು ಹಣ ಕೊಟ್ಟು ಖರೀದಿಸುವಂತೆ ಆಗಿದೆ.

ನಗರಸಭೆ ವತಿಯಿಂದ ನಡೆಯುತ್ತಿರುವ 24x7 ನಿರಂತರ ಕುಡಿಯುವ ನೀರಿನ ಜಲಸಿರಿ ಯೋಜನೆಯ ಕೆಲಸವೂ ಕೂಡ ಅಷ್ಟೊಂದು ಗುಣಮಟ್ಟದಿಂದ ಕೂಡಿಲ್ಲ. ನಗರದ ಹೊರವಲಯದ ಬಡಾವಣೆಯ ಜನರು ಕುಡಿಯುವ ನೀರಿಗಾಗಿ ಪರದಾಡುವ ಸ್ಥಿತಿ ಒದಗಿ ಬಂದಿದೆ.

ಶಾಸಕ ಎಸ್. ರಾಮಪ್ಪ ಶಾಸಕರಾಗಿ ಆಯ್ಕೆ ಆದ ಪ್ರಾರಂಭದಲ್ಲಿ 2 ತಿಂಗಳು ಜನಸ್ಪಂದನ ಸಭೆ ನಡೆಸಿದರು. ಅದಾದ ಮೂರು ವರ್ಷಗಳ ನಂತರದಲ್ಲಿ ಮೊನ್ನೆ ಜನಸ್ಪಂದನ ಸಭೆಯನ್ನು ಏರ್ಪಡಿಸಿದ್ದು, ಜನರು ತಮ್ಮ ನೋವುಗಳ ಸರಮಾಲೆಯನ್ನು ತೋಡಿಕೊಂಡಿದ್ದಾರೆ. ಭ್ರಷ್ಟಾಚಾರ ತಡೆಗೆ ಸಾರ್ವಜನಿಕರು ಆಗ್ರಹಿಸಿದ್ದಾರೆ. ಹೀಗೆ ಹತ್ತು ಹಲವು ಸಮಸ್ಯೆಗಳ ಆಗರವಾಗಿರುವ ನಗರದಲ್ಲಿ ಪ್ರಗತಿ ದೂರದ ಮಾತಾಗಿದೆ. ಭ್ರಷ್ಟಾಚಾರ, ಜನಪ್ರತಿನಿಧಿಗಳ ನಡೆ ಸಾರ್ವಜನಿಕರಿಗೆ ನುಂಗಲಾರದ ತುತ್ತಾಗಿದೆ. ಇದಕ್ಕೆಲ್ಲಾ ಮುಕ್ತಿ ಎಂದೋ ಎನ್ನುತ್ತಿದ್ದಾರೆ ನಾಗರಿಕರು.

ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರು ನಗರಸಭೆ ಆಡಳಿತಾಧಿಕಾರಿಯಾಗಿದ್ದು, ಈ ಬಾರಿ ನಡೆಯುವ ನಗರಸಭೆ ಬಜೆಟ್‌ನಲ್ಲಿ ನಗರದ ಅಭಿವೃದ್ಧಿಗೆ ಹೆಚ್ಚು ಮಹತ್ವ ನೀಡುವುದರ ಜೊತೆಗೆ ಸ್ಥಳೀಯ ಜನರ ಬಹುದಿನಗಳ ಆಸೆಯಾದ ನೂತನ ಸಾಂಸ್ಕೃತಿಕ ರಂಗಮಂದಿರ, ಅಂಬೇಡ್ಕರ್ ಭವನ, ಹೂವು, ಹಣ್ಣು, ತರಕಾರಿ, ಮಟನ್ ಮಾರುಕಟ್ಟೆ ಹಾಗೂ ಮೇಲ್ಕಂಡ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಶ್ರಮಿಸಲಿ ಎಂಬುದು ಸ್ಥಳೀಯ ಜನರ ಕೋರಿಕೆಯಾಗಿದೆ.

## ಸಂಸದ ಸಿದ್ದೇಶ್ವರ ಅವರಿಗೆ ಮನವಿ



ದಾವಣಗೆರೆ, ಮಾ. 23 - ಕರಾವಳಿ ರೈಲ್ವೆ ಹೋರಾಟ ಸಮಿತಿಯಿಂದ ಸಂಸದ ಜಿ.ಎಂ. ಸಿದ್ದೇಶ್ವರ ಅವರಿಗೆ ವಿವಿಧ ಬೇಡಿಕೆಗಳಿರುವ ಮನವಿ ಸಲ್ಲಿಸಲಾಯಿತು.

## ಜೀವ ಬೆದರಿಕೆ ಹಾಕಿದವರನ್ನು ಬಂಧಿಸಲು ಸಮರ ಸೇನೆ ಮನವಿ



ಹೂವಿನಹಡಗಲಿ, ಮಾ. 23 - ಕರ್ನಾಟಕ ಸಮರ ಸೇನೆಯ ಆಜೀವ ಗೌರವ ಸದಸ್ಯರೂ ಆದ ಹಿರಿಯ ನಟ ಶಿವರಾಜ್‌ಕುಮಾರ್, ಮಾಜಿ ಸಚಿವೆ ಬಿ.ಟಿ. ಲಲಿತ ನಾಯ್ಕ್, ಪಬ್ಲಿಕ್ ಟಿ.ವಿ. ಸಂಪಾದಕ ರಂಗನಾಥ್ ಮತ್ತು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅವರುಗಳಿಗೆ ಕೊಲೆ ಬೆದರಿಕೆ ಪತ್ರ ಕಳಿಸಿದವರನ್ನು ಕೂಡಲೇ ಬಂಧಿಸುವಂತೆ ಕರ್ನಾಟಕ ಸಮರ ಸೇನೆಯ ತಾಲ್ಲೂಕು ಘಟಕದ ಅಧ್ಯಕ್ಷ ಬಿ.ಎಂ. ವೀರಯ್ಯಸ್ವಾಮಿ, ಮತ್ತಿತರರು ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.


## ಜಿಲ್ಲಾ ಕಾಂಗ್ರೆಸ್ ಸಮಿತಿ ಕಾರ್ಮಿಕ ವಿಭಾಗಕ್ಕೆ ವೀರಭದ್ರಪ್ಪ ಕಾರ್ಯದರ್ಶಿ



ದಾವಣಗೆರೆ, ಮಾ.23- ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಮಿಕ ವಿಭಾಗದ ಕಾರ್ಯದರ್ಶಿಯಾಗಿ ಎನ್.ಎಸ್. ವೀರಭದ್ರಪ್ಪ ಅವರು ನೇಮಕಗೊಂಡಿದ್ದಾರೆ.

## ಸಾರ್ವಜನಿಕ ಆಸ್ಪತ್ರೆಯ ಆರೋಗ್ಯ ರಕ್ಷಾ ಸಮಿತಿಯ ಸದಸ್ಯರುಗಳ ನೇಮಕ








ಹರಿಹರ ಮಾ. 23 - ನಗರದ ಸಾರ್ವಜನಿಕ ಆಸ್ಪತ್ರೆಯ ಆರೋಗ್ಯ ರಕ್ಷಾ ಸಮಿತಿಗೆ ನೂತನವಾಗಿ ಹೆಚ್. ಮಂಜಾನಾಯ್ಕ, ರಾಜು ಐರಣಿ, ಮಂಜಣ್ಣ ಹೆಚ್. ನಲ್ಲಿ, ವೀರೇಶ್ ಆಚಾರ್, ರೂಪಾ ಕಾಟ್ವೆ, ಬೆಣ್ಣಿ ಸಿದ್ದಪ್ಪ ಅವರುಗಳನ್ನು ಅಧಿಕಾರೇತರ ಸದಸ್ಯರನ್ನಾಗಿ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೂ ನಾಮ ನಿರ್ದೇಶನ ಮಾಡಿ ಆದೇಶ ಹೊರಡಿಸಿದ್ದಾರೆ.

ಈ ಹಿಂದೆ ಇದ್ದಂತಹ ನಾಮ ನಿರ್ದೇಶನ ಸದಸ್ಯರುಗಳ ಸದಸ್ಯತ್ವ ಸ್ಥಾನ ತಂತಾನೇ ರದ್ದಾಗುತ್ತದೆ ಎಂದು ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಕರ್ನಾಟಕ ಸರ್ಕಾರದ ಸಚಿವಾಲಯದಿಂದ ಆದೇಶ ಪತ್ರ ನೂತನ ನಾಮ ನಿರ್ದೇಶನ ಸದಸ್ಯರುಗಳಿಗೆ ಬಂದಿದೆ ಎಂದು ತಿಳಿದುಬಂದಿದೆ. ಸಂಸದ ಜಿ.ಎಂ. ಸಿದ್ದೇಶ್ವರ, ಮಾಜಿ ಶಾಸಕ ಬಿ.ಪಿ. ಹರೀಶ್, ಬಿಜೆಪಿ ಜಿಲ್ಲಾಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ ಅವರ ಶಿಫಾರಸ್ಸಿನ ಮೇರೆಗೆ ಸರ್ಕಾರ ಆರೋಗ್ಯ ರಕ್ಷಾ ಸಮಿತಿಯ ಸದಸ್ಯರುಗಳನ್ನು ನೇಮಕ ಮಾಡಿದೆ.

## ವಿಜಯಪುರ-ಮಂಗಳೂರು ರೈಲು ಸಮಯ ಬದಲಾವಣೆಗೆ ಒತ್ತಾಯ

ದಾವಣಗೆರೆ, ಮಾ.23- ರೋಗಿಗಳು, ಕಾರ್ಮಿಕರು, ಪ್ರವಾಸಿಗರಿಗೆ ಅನುಕೂಲವಾಗುವಂತೆ ವಿಜಯಪುರ-ಮಂಗಳೂರು ರೈಲು ಸಮಯವನ್ನು ಬದಲಾಯಿಸಬೇಕು ಎಂದು ದಾವಣಗೆರೆ-ಕರಾವಳಿ ರೈಲ್ವೆ ಹೋರಾಟ ಸಮಿತಿ ಒತ್ತಾಯಿಸಿದೆ.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ಅಧ್ಯಕ್ಷ ನಿರ್ಮಲ್ ರಾಜೇಂದ್ರ ಬಂಗೇರ ಅವರು, ಪ್ರಸ್ತುತ ಓಡುತ್ತಿರುವ ಜಯಪುರದಿಂದ ರಾತ್ರಿ 3 ಗಂಟೆಯಿಂದ ಹೊರಟು, ಮಂಗಳೂರು ರೈಲು ಹುಬ್ಬಳ್ಳಿ, ರಾಣೇಬೆನ್ನೂರು, ದಾವಣಗೆರೆ, ಬೀರೂರು, ಹಾಸನ, ಸುಬ್ರಹ್ಮಣ್ಯಂ ಮಾರ್ಗವಾಗಿ ಮಂಗಳೂರನ್ನು ಮಧ್ಯಾಹ್ನ 12 ಗಂಟೆಗೆ ತಲುಪುತ್ತಿದೆ. ಈ ರೈಲು ದಾವಣಗೆರೆಯನ್ನು ಮಧ್ಯರಾತ್ರಿ ತಲುಪುವುದರಿಂದ ಪ್ರಯಾಣಿಕರಿಗೆ ತೊಂದರೆಯಾಗುತ್ತದೆ ಎಂದರು.

ಈ ರೈಲು ದಾವಣಗೆರೆ ರೈಲ್ವೇ ನಿಲ್ದಾಣವನ್ನು ರಾತ್ರಿ 10 ಗಂಟೆ ವೇಳೆಗೆ ತಲುಪಿ ಬೆಳಿಗ್ಗೆ 6 ಗಂಟೆ ಸುಮಾರಿಗೆ ಮಂಗಳೂರು ತಲುಪಿದರೆ ವಿದ್ಯಾರ್ಥಿಗಳಿಗೆ, ಸರ್ಕಾರಿ ನೌಕರರಿಗೆ, ಬಡರೋಗಿಗಳಿಗೆ ತುಂಬಾ ಅನುಕೂಲವಾಗುತ್ತದೆ ಎಂದರು.

ಪ್ರಧಾನ ಕಾರ್ಯದರ್ಶಿ ಕೆ.ರಾಘವೇಂದ್ರ ನಾಯರಿ ಮಾತನಾಡಿ, ಸಮಯ ಬದಲಾವಣೆಯಿಂದ ಮುಖ್ಯವಾಗಿ ದಾವಣಗೆರೆ, ಹರಿಹರ ನಗರದಿಂದ ಮಂಗಳೂರು ಹಾಗೂ ಮಣಿಪಾಲ ಆಸ್ಪತ್ರೆಗಳಿಗೆ ಹೋಗುವ ನೂರಾರು ಜನ ರೋಗಿಗಳಿಗೆ ಮತ್ತು ಸುಬ್ರಹ್ಮಣ್ಯ, ಧರ್ಮಸ್ಥಳ, ಕಟೀಲು, ಪೊಳಲಿ ಮುಂತಾದ ತೀರ್ಥ ಕ್ಷೇತ್ರಗಳನ್ನು ದರ್ಶನ ಮಾಡುವವರಿಗೆ ಅನುಕೂಲವಾಗುತ್ತದೆ ಎಂದು ಹೇಳಿದರು.

ಶೀಘ್ರವೇ ಸಂಸದ ಜಿ.ಎಂ. ಸಿದ್ದೇಶ್ವರ ಹಾಗೂ ರೈಲ್ವೇ ಸಚಿವರಿಗೆ ಈ ಬಗ್ಗೆ ಮನವಿ ಸಲ್ಲಿಸುವುದಾಗಿಯೂ ಅವರು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಸಮಿತಿಯ ಸಹ ಕಾರ್ಯದರ್ಶಿ ಎ.ಫಕ್ರುದ್ದೀನ್, ಸಂಚಾಲಕ ಹೆಚ್.ಎಸ್. ಮಹಾಬಲೇಶ್ ಪೂಜಾರಿ, ರವೀಂದ್ರ ಸಾಣೂರು ಇತರರು ಉಪಸ್ಥಿತರಿದ್ದರು.

## ಮೂಲಭೂತ ಅವಶ್ಯಕತೆಗಳಲ್ಲಿ ನೀರು ಬಹುಮುಖ್ಯ

ದಾವಣಗೆರೆ, ಮಾ.23- ಮೂಲ ಭೂತ ಅವಶ್ಯಕತೆಗಳಲ್ಲಿ ನೀರು ಬಹು ಮುಖ್ಯ ಪಾತ್ರ ವಹಿಸುತ್ತದೆ. ಈ ಜಲವೇ ನಮಗೆ ಶಕ್ತಿ. ಇತ್ತೀಚಿನ ದಿನಗಳಲ್ಲಿ ವಾಣಿಜ್ಯ ವ್ಯವಹಾರವಾಗಿ ನೀರನ್ನು ಬಳಸುತ್ತಿರುವುದು ದುರದೃಷ್ಟಕರ ಹಾಗೂ ವಿಷಾದನೀಯ ಸಂಗತಿ ಎಂದು ಪ್ರಾಚಾರ್ಯ ಡಾ. ಬಿ.ಎಲ್.ಸಂತೋಷ್ ಹೇಳಿದರು.

ನಗರದ ಮಹೇಶ್ ಪಿ.ಯು.ಕಾಲೇಜಿ ನಲ್ಲಿ 'ವಿಶ್ವ ಜಲ ಸಂರಕ್ಷಣಾ' ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿ ದರು. ನೀರಿನ ಸೆಲೆಗಳಾದ ಕೆರೆ, ಬಾವಿ, ನದಿ, ಹಳ್ಳಗಳಲ್ಲಿ ನೀರು ಸಂಗ್ರಹಿಸಿ, ಅಂತರ್ಜಲ ಹೆಚ್ಚಿಸಲು ಕರೆ ನೀಡಿದರು.

ತರಳಬಾಳು ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ. ಟಿ.ಎನ್.ದೇವರಾಜ್ ಮಾತನಾಡಿ, ಕೃಷಿನ ಮೂಲಾಧಾರಗಳಲ್ಲಿ ಜಲವೇ ಪ್ರಮುಖ ಅಂಶ. ಜಲ




ಡಾ. ಬಿ.ಎಲ್.ಸಂತೋಷ್

ಕೃಷಿಯೇ ಭವಿಷ್ಯದ ಜೀವಾಳ. ನೀರಿನ ಬೆಲೆ ಕಟ್ಟಬೇಕಿದೆ. ಇಲ್ಲದಿದ್ದರೆ ಜೀವದ ಬೆಲೆ ತೆರಬೇಕಾಗುತ್ತದೆ ಎಂದು ಹೇಳಿದರು.

ವಿಸ್ತರಣಾಧಿಕಾರಿ ರಘುರಾಜು, ತರಳಬಾಳು ಕೃಷಿ ವಿಜ್ಞಾನ ಕೇಂದ್ರ ಹಾಗೂ ಕಾಲೇಜಿನ ಸಿಬ್ಬಂದಿ, ವಿದ್ಯಾರ್ಥಿಗಳು ಹಾಜರಿದ್ದರು. ಹೆಚ್.ಎಂ.ಶಶಿಧರಯ್ಯ ನಿರೂಪಿಸಿದರು. ಎ.ಎಡ್ವಿನ್ ಸ್ವಾಗತಿಸಿದರು. ಬಿ.ಯು.ರೂಪ ವಂದಿಸಿದರು.

## ಪ್ರೊ|| ಎಸ್.ಬಿ.ರಂಗನಾಥ್ ಅಭಿನಂದನಾ ಗ್ರಂಥಕ್ಕೆ ಲೇಖನ ಕೋರಿಕೆ

ದಾವಣಗೆರೆ, ಮಾ.23- ಪ್ರೊ. ಎಸ್. ಬಿ.ರಂಗನಾಥ್ ಅವರು ಕಳೆದ 6 ದಶಕಗಳಿಂದ ಪ್ರೌಢಶಾಲಾ ಅಧ್ಯಾಪಕ, ಮುಖ್ಯೋಪಾಧ್ಯಾಯ, ಕಿರಿಯ ಕಾಲೇಜಿನ ಪ್ರಾಚಾರ್ಯ, ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಹುದ್ದೆಯಿಂದ ಹಿಡಿದು ತಮ್ಮ ಅನುಭವ, ಬದ್ಧತೆ ಹಾಗೂ ಅರ್ಪಣಾ ಮನೋಭಾವನೆಯಿಂದಾಗಿ, ನಾಡಿನಾದ್ಯಂತ 270ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವ ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಆಡಳಿತಾಧಿಕಾರಿಯಂತಹ ಉನ್ನತ ಹುದ್ದೆಯವರೆಗೆ ಏರಿ, ನಿಸ್ಪೃಹತೆಯಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ.

ಲೇಖಕ, ಅನುವಾದಕ, ಪತ್ರಕರ್ತರಾಗಿ ಸಾಹಿತ್ಯ ಕ್ಷೇತ್ರದಲ್ಲಿ ಹೆಸರಾಗಿರುವ ಇವರು ಅವಿಭಜಿತ ಚಿತ್ರದುರ್ಗ ಮತ್ತು ವಿಭಜಿತ ದಾವಣಗೆರೆ ಜಿಲ್ಲೆಗಳ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಕುವೆಂಪು ವಿಶ್ವವಿದ್ಯಾಲಯದ ಶಿಕ್ಷಣ ಮಂಡಳಿ, ಸಿಂಡಿಕೇಟ್, ಸೆನೆಟ್, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಮುಂತಾದವುಗಳ ಸದಸ್ಯರಾಗಿ ಕಾರ್ಯನಿರ್ವಹಿಸಿದ ಅನುಭವಿಗಳು. ಅನುವಾದಗಳು ಸೇರಿದಂತೆ ಇದುವರೆಗೆ ಅವರ 8 ಮೌಲ್ಯಿಕ ಸಾಹಿತ್ಯ ಕೃತಿಗಳು ಹೊರಬಂದಿವೆ.

ಶ್ರೀಯುತರ ಸೇವೆಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕನ್ನಡ ಶ್ರೀ ಪ್ರಶಸ್ತಿ, ಮಹಾಲಿಂಗ ಪ್ರಶಸ್ತಿ, ತಾಲ್ಲೂಕು ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಶ್ರೀ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆಯ ಉತ್ತಮ ಸೇವಾ ಪ್ರಶಸ್ತಿ ಮುಂತಾದ ಗೌರವಗಳು ಸಂದಿವೆ.

ಬರುವ ಜೂನ್ 17ಕ್ಕೆ ರಂಗನಾಥ್ ಅವರು 80 ಸಾರ್ಥಕ ವಸಂತಗಳನ್ನು ಪೂರೈಸುತ್ತಿದ್ದಾರೆ. ಈ ಸಂದರ್ಭದಲ್ಲಿ ಇವರ ಅಭಿಮಾನಿಗಳು, ಒಡನಾಡಿಗಳು, ಶಿಷ್ಯ ವರ್ಗ ಹಾಗೂ ಬಂಧು-ಬಳಗದವರು ಜೊತೆಗೂಡಿ ಅವರನ್ನು ಅಭಿನಂದಿಸಿ, ಅಭಿನಂದನಾ ಗ್ರಂಥವನ್ನು ಹೊರತರಲು ಯೋಜಿಸಿರುತ್ತಾರೆ.

ಆದುದರಿಂದ ಪ್ರೊ. ಎಸ್.ಬಿ. ರಂಗನಾಥ್ ಅವರ ಒಡನಾಡಿಗಳು / ಹಿತೈಷಿಗಳು / ಶಿಷ್ಯರು ಶ್ರೀಯುತರನ್ನು ಕುರಿತು ಲೇಖನ ಬರೆದು ಕಳುಹಿಸಲು ವಿನಂತಿಸಿಕೊಳ್ಳುತ್ತೇವೆ. ದಯವಿಟ್ಟು ಜೊತೆಗೆ ಲೇಖಕರ ಪಾಸ್‌ಪೋರ್ಟ್ ಅಳತೆಯ ಬಣ್ಣದ ಭಾವಚಿತ್ರವೂ ಇರಲಿ.

ಡಿ.ಟಿ.ಪಿ ಮಾಡಿದ ತಮ್ಮ ಲೇಖನ ಹಾಗೂ ಫೋಟೋ ಮತ್ತು ಪ್ರೊ|| ಎಸ್. ಬಿ.ರಂಗನಾಥ್ ಅವರೊಡನೆ ಒಡನಾಟದ ಯಾವುದಾದರೂ ಫೋಟೋ ಇದ್ದಲ್ಲಿ ಸಂದರ್ಭ ಸಹಿತ ಟಿಪ್ಪಣಿಯೊಡನೆ ಅವುಗಳ ಸ್ಕ್ಯಾನ್ ಮಾಡಿದ ಪ್ರತಿಗಳನ್ನು ಬರುವ ಏಪ್ರಿಲ್ 20 ರೊಳಗೆ nagarajsirigere@gmail.com ಈ ಮಿಂಚಂಚೆಗೆ ಕಳುಹಿಸಲು ಸಮಿತಿ ಪ್ರಧಾನ ಸಂಪಾದಕರಾದ ಡಾ.ನಾ.ಲೋಕೇಶ್ ಒಡೆಯರ್ ಕೋರಿದ್ದಾರೆ.

**ಪೂರ್ವಭಾವಿ ಸಭೆ :** ನಗರದ ಎಂ.ಎಂ. ಶಿಕ್ಷಣ ಮಹಾವಿದ್ಯಾಲಯದ ನಿವೃತ್ತ ಪ್ರಾಚಾರ್ಯ, ಸಾಹಿತಿ, ಪತ್ರಕರ್ತ, ಶೈಕ್ಷಣಿಕ ಆಡಳಿತಗಾರರಾದ ಪ್ರೊ|| ಎಸ್. ಬಿ.ರಂಗನಾಥ್ ಅವರಿಗೆ ಬರುವ ಜೂನ್ 17ಕ್ಕೆ 80 ವರ್ಷ ತುಂಬುತ್ತಿದೆ. ಪ್ರಸ್ತುತ ಸಂದರ್ಭದಲ್ಲಿ ಅವರನ್ನು ಅಭಿನಂದಿಸಿ, ಅಭಿನಂದನಾ ಗ್ರಂಥವನ್ನು ಅರ್ಪಿಸುವ ಸಂಬಂಧ ಇದೇ ದಿನಾಂಕ ಮಾ.28 ರ ಭಾನುವಾರ ಬೆಳಿಗ್ಗೆ 11ಕ್ಕೆ ಅನುಭವ ಮಂಟಪ ಆವರಣದಲ್ಲಿರುವ ಎಂ. ಎಂ.ಶಿಕ್ಷಣ ಮಹಾವಿದ್ಯಾಲಯದಲ್ಲಿ 2ನೇ ಸಭೆಯನ್ನು ಕರೆಯಲಾಗಿದೆ.

ಪ್ರೊ|| ಎಸ್.ಬಿ.ರಂಗನಾಥ್ ಅವರ ಹಿರಿಯ ವಿದ್ಯಾರ್ಥಿಗಳು, ಹಿತೈಷಿಗಳು, ಸ್ನೇಹಿತರು, ಅಭಿಮಾನಿಗಳು ಆಗಮಿಸಿ, ಸಲಹೆ-ಸೂಚನೆಗಳನ್ನು ನೀಡಲು ನಿವೃತ್ತ ಪ್ರಾಚಾರ್ಯ ಡಾ. ಹೆಚ್.ವಿ.ವಾಮದೇವಪ್ಪ ಕೋರಿದ್ದಾರೆ.

## ಹೈನುಗಾರಿಕೆ ಕೌಶಲ್ಯಾಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನ

ದಾವಣಗೆರೆ, ಮಾ.23- ಐಸಿಎಆರ್-ತರಳಬಾಳು ಕೃಷಿ ವಿಜ್ಞಾನ ಕೇಂದ್ರ. ದಾವಣಗೆರೆ ವತಿಯಿಂದ ಭಾರತ ಸರ್ಕಾರದ ಕೌಶಲ್ಯಾಭಿವೃದ್ಧಿ ಮಂತ್ರಾಲಯದ ಈ ಸಾಲಿನ ರಾಷ್ಟ್ರೀಯ ಕೃಷಿ ಯೋಜನೆಯಡಿ ಉಚಿತ ಹೈನುಗಾರಿಕೆ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ಏಪ್ರಿಲ್ 5 ರಿಂದ ಮೇ 4 ರವರೆಗೆ ಕೇಂದ್ರದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ತರಬೇತಿಗೆ ಆಸಕ್ತ ರೈತರು ಹಾಗೂ ಗ್ರಾಮೀಣ ಯುವಕ-ಯುವತಿಯರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿದಾರರು ಕನಿಷ್ಟ 5ನೇ ತರಗತಿ ಪಾಸಾಗಿರಬೇಕು. ಆಸಕ್ತರು ತಮ್ಮ ಆಧಾರ್ ಕಾರ್ಡ್ ಜೆರಾಕ್ಸ್ ಪ್ರತಿಯ ಜೊತೆಗೆ ಮರುಪಾವತಿಸಲಾಗುವ ಮುಂಗಡ ಹಣ 500 ರೂಗಳನ್ನು ನೀಡಿ, ಅರ್ಜಿಯನ್ನು ಪಡೆದು, ಭರ್ತಿ ಮಾಡಿ ಇದೇ ದಿನಾಂಕ 31 ರೊಳಗೆ ಸಲ್ಲಿಸುವುದು.

ಹೆಚ್ಚಿನ ಮಾಹಿತಿಗೆ ಡಾ. ಜಿ.ಕೆ. ಜಯದೇವಪ್ಪ, ವಿಷಯ ತಜ್ಞರು, ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ ಇವರನ್ನು ಸಂಪರ್ಕಿಸುವುದು. ಮೊ: 9591426179, 9449856876.

## ಭಗತ್‌ಸಿಂಗ್ ಚಿಂತನೆ ಇಂದಿಗೂ ಪ್ರಸ್ತುತ

### ಕರ್ನಾಟಕ ಜನಶಕ್ತಿಯಿಂದ ಅಮರ ವೀರರ ಸ್ಮರಣೆ

ದಾವಣಗೆರೆ, ಮಾ.23- ಕರ್ನಾಟಕ ಜನಶಕ್ತಿ ಜಿಲ್ಲಾ ಸಮಿತಿ ವತಿಯಿಂದ ನಗರದ ರೈಲ್ವೇ ನಿಲ್ದಾಣ ಮುಂಭಾಗದಲ್ಲಿನ ಭಗತ್ ಸಿಂಗ್ ಪ್ರತಿಮೆ ಬಳಿ ಇಂದು ಭಗತ್ ಸಿಂಗ್, ರಾಜಗುರು, ಸುಖದೇವ್ ಅವರುಗಳ 90ನೇ ಹುತಾತ್ಮ ದಿನಾಚರಣೆ ಪ್ರಯುಕ್ತ ಅಮರ ವೀರರಿಗೆ ವಿನಮ್ರವಾಗಿ ಶ್ರದ್ಧಾಂಜಲಿ ಸಲ್ಲಿಸಲಾಯಿತು.




ಮಾರ್ಚ್ 23 ಒಂದು ಚಾರಿತ್ರಿಕ ದಿನ. ಕ್ರಾಂತಿ ವೀರರಾದ ಭಗತ್ ಸಿಂಗ್, ಸುಖದೇವ್, ರಾಜಗುರು ಅಮರರಾಗಿ ಇಂದಿಗೆ 90 ವರ್ಷಗಳು ತುಂಬಿವೆ. ದೇಶ ಭಕ್ತಿಯೆಂದರೆ ಯಾರನ್ನೋ ದ್ವೇಷಿಸುವುದಲ್ಲ. ಬದಲಿಗೆ ಎಲ್ಲರನ್ನೂ ಪ್ರೀತಿಸುವುದು. ಎಲ್ಲರ ಏಳಿಗೆಗಾಗಿ ದುಡಿಯುವುದು. ಆ ನಿಟ್ಟಿನಲ್ಲಿ ನಾವು ಬದುಕನ್ನು ಪ್ರೀತಿಸುತ್ತೇವೆ ಮತ್ತು ಅದರ ಸೌಂದರ್ಯವನ್ನು ಕಾಪಾಡಲು ಹೋರಾಡುತ್ತೇವೆ ಎಂದು ಘೋಷಿಸಿದ ಮತ್ತು ಹಾಗೆಯೇ ಬದುಕಿದ ಈ ಯುವ ಚೇತನಗಳನ್ನು ಸ್ಮರಿಸಬೇಕಾಗಿರುವುದು ನಮ್ಮ ಕರ್ತವ್ಯ ಎಂದು ಸಮಿತಿ ಪದಾಧಿಕಾರಿಗಳು ತಿಳಿಸಿದರು.

ಭಾರತದ ಭವಿಷ್ಯದ ಬಗ್ಗೆ ಸ್ಪಷ್ಟ ಕಲ್ಪನೆಗಳಿದ್ದ ಮತ್ತು ಸೂರ್ಯ ಮುಳುಗದ ಸಾಮ್ರಾಜ್ಯವೆಂದು ಕರೆಯಲ್ಪಡುತ್ತಿದ್ದ ಬ್ರಿಟಿಷರ ಎದೆ ನಡುಗಿಸಿದ ಈ ವೀರರಿಂದ ನಾವು ಪಾಠಗಳನ್ನು ಕಲಿಯಬೇಕಾಗಿದೆ. ರೈತರು ದೆಹಲಿಯ ಗಡಿಗಳಲ್ಲಿ ಹೋರಾಡುತ್ತಿದ್ದಾರೆ. ಕಾರ್ಮಿಕರು ಕಷ್ಟದಲ್ಲಿದ್ದಾರೆ. ಯುವ ಜನರಿಗೆ ಉದ್ಯೋಗಗಳಿಲ್ಲ. ಮಹಿಳೆಯರು ಮತ್ತು ದಲಿತರ ಮೇಲಿನ ದೌರ್ಜನ್ಯಗಳು ನಿಂತಿಲ್ಲ. ಈ ಸಂದರ್ಭದಲ್ಲಿ ಭಗತ್ ಸಿಂಗ್ ಅವರ ಚಿಂತನೆಗಳು ಪ್ರಸ್ತುತವಾಗುತ್ತವೆ ಎಂದರು.

ಈ ಸಂದರ್ಭದಲ್ಲಿ ಸಮಿತಿಯ ಸತೀಶ್ ಅರವಿಂದ್, ಪವಿತ್ರ, ಆದಿಲ್ ಖಾನ್, ಯಲ್ಲಪ್ಪ, ಬುಳಸಾಗರ ಸಿದ್ದರಾಮಣ್ಣ, ಅಣ್ಣಪ್ಪ, ಶಿವಕುಮಾರ್, ರವಿಕುಮಾರ್, ಮಕ್ಬೂಲ್, ಕರಿಬಸಪ್ಪ, ವೆಂಕಟೇಶ್ ಇತರರಿದ್ದರು.

## ಭಗತ್ ಸಿಂಗ್ ಕನಸಿನ ಭಾರತ ನಿರ್ಮಾಣವಾಗಿಲ್ಲ

### ಎಐಡಿಎಸ್‌ಓ-ಎಐಓಡಿವೈಓ-ಎಐಎಂಎಸ್‌ಎಸ್ ನಿಂದ ಹುತಾತ್ಮ ದಿನಾಚರಣೆ

ದಾವಣಗೆರೆ, ಮಾ.23- ಆಲ್ ಇಂಡಿಯಾ ಡೆಮಾಕ್ರೆಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐಡಿಎಸ್‌ಓ), ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್ (ಎಐಓಡಿವೈಓ), ಆಲ್ ಇಂಡಿಯಾ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್) ಜಿಲ್ಲಾ ಸಮಿತಿಯಿಂದ ನಗರದ ರೈಲ್ವೆ ನಿಲ್ದಾಣದ ಮುಂಭಾಗದಲ್ಲಿನ ಭಗತ್ ಸಿಂಗ್ ಪ್ರತಿಮೆ ಬಳಿ ಇಂದು ಭಗತ್‌ಸಿಂಗ್ ಅವರ 91ನೇ ಹುತಾತ್ಮ ದಿನಾಚರಣೆ ಪ್ರಯುಕ್ತ ಸ್ಮರಣೆ ಮಾಡಲಾಯಿತು.




ಎಐಓಡಿಎಸ್ ಜಿಲ್ಲಾ ಉಪಾಧ್ಯಕ್ಷ ಕಿರಣ್ ಮಾತನಾಡಿ, ಭಗತ್‌ಸಿಂಗ್ ಅವರ ಆದರ್ಶದ ವಿಚಾರಗಳನ್ನು ವಿದ್ಯಾರ್ಥಿ-ಯುವ ಜನರು ಜೀವನದಲ್ಲಿ ಅಳವಡಿಸಿಕೊಂಡು ಪ್ರಸ್ತುತ ಸಮಸ್ಯೆಗಳ ವಿರುದ್ಧ ಹೋರಾಟಗಳನ್ನು ಕಟ್ಟಬೇಕು. ಭಗತ್ ಸಿಂಗ್, ರಾಜಗುರು, ಸುಖದೇವ್ ಈ ಮಹನೀಯರ ಕನಸಿನ ಭಾರತ ನಿರ್ಮಾಣವಾಗಿಲ್ಲ. ಶಿಕ್ಷಣ ವ್ಯಾಪಾರೀಕರಣ, ನಿರುದ್ಯೋಗ ಸಮಸ್ಯೆ, ಮಹಿಳೆಯರ ಮೇಲಿನ ಅತ್ಯಾಚಾರ ದಿನೇ ದಿನೇ ಹೆಚ್ಚುತ್ತಿದೆ. ಎಲ್ಲಾ ಸಮಸ್ಯೆಗೆ ಪರಿಹಾರವೆಂದರೆ ಅನ್ಯಾಯದ ವಿರುದ್ಧ ಧ್ವನಿ ಎತ್ತಬೇಕೆಂದರು.

ಎಐಡಿವೈಓ ಜಿಲ್ಲಾ ಸಂಘಟನಾಕಾರ ಪರಶುರಾಮ ಮಾತನಾಡಿ, ನಮ್ಮನ್ನಾಳುವ ರಾಜಕೀಯ ನಾಯಕರು ತಮ್ಮ ಸ್ವಾರ್ಥ ಮತ್ತು ಬಂಡವಾಳಿಗರ ಹಿತ ಕಾಯುವ ಕೆಲಸ ಮಾಡುತ್ತಾರೆಯೇ ಹೊರತು, ಜನಪರ ಕಾಳಜಿಯನ್ನು ತೋರುವುದಿಲ್ಲ. ಆದ್ದರಿಂದ ಜನಸಾಮಾನ್ಯರು ತಮ್ಮ ಬೇಡಿಕೆಗಳಿಗಾಗಿ ಒಗ್ಗಟ್ಟಿನ ಹೋರಾಟ ಕಟ್ಟಬೇಕಿದೆ ಎಂದರು.

ಎಐಎಮ್‌ಎಸ್‌ಎಸ್ ಜಿಲ್ಲಾಧ್ಯಕ್ಷೆ ಜ್ಯೋತಿ ಕುಕ್ಕುವಾಡ ಮಾತನಾಡಿ, ಚುನಾವಣೆಗಳು ಬಂದಾಗ ಸರ್ಕಾರ ಹಲವಾರು ಆಶ್ವಾಸನೆಗಳನ್ನು ನೀಡಲಿದ್ದು, ಅಡುಗೆ ಅನಿಲದ ಬೆಲೆ ಗಗನಕ್ಕೇರಿಸಿದೆ. 'ಬೇಟಿ ಬಚಾವೋ ಬೇಟಿ ಪಡಾವೋ' ಎಂದು ಭಾಷಣದಲ್ಲಿ ಹೇಳಿದರೆ ಸಾಲದು ಹೆಣ್ಣುಮಕ್ಕಳ ಸಮಸ್ಯೆಗೆ ಸ್ಪಂದಿಸಬೇಕು ಎಂದರು.

ಈ ಸಂದರ್ಭದಲ್ಲಿ ಸಂಘಟನೆಗಳ ಸದಸ್ಯರುಗಳಾದ ಪುಷ್ಪ, ಕಾವ್ಯ, ಕಿರಣ, ತಿಪ್ಪೇಸ್ವಾಮಿ, ಜ್ಯೋತಿ ಕುಕ್ಕುವಾಡ, ಪ್ರಕಾಶ್, ಸರಸ್ವತಿ, ಸ್ಮಿತಾ, ಮಂಜುನಾಥ್ ಕೈದಾಳ್, ಮಂಜುನಾಥ್ ಕುಕ್ಕುವಾಡ, ಡಾ. ವಸುದೇಂದ್ರ, ಗುರು, ಪರಶುರಾಮ್, ಯತೀಂದ್ರ, ಸಂತೋಷ್ ಇದ್ದರು.



## ಬೋಳಚಟ್ಟಿ ಶ್ರೀ ಚೌಡೇಶ್ವರಿ ದೇವಸ್ಥಾನದಲ್ಲಿ ಎಡೆ ಜಾತ್ರೆ : ಎಸ್ಸೆಸ್ಸೆಂ ಭೇಟಿ

ದಾವಣಗೆರೆ, ಮಾ.23- ಇಲ್ಲಿನ ರುದ್ರಭೂಮಿ ರಸ್ತೆಯಲ್ಲಿರುವ ಚೌಡೇಶ್ವರಿ ನಗರದ ಬೋಳಚಟ್ಟಿ ಶ್ರೀ ಚೌಡೇಶ್ವರಿ ದೇವಿ, ಶ್ರೀ ಭೂತನಾಥೇಶ್ವರ ಸ್ವಾಮಿ ಕಾಲಭೈರವ ದೇವಸ್ಥಾನದ ಎಡೆ ಜಾತ್ರಾ ಮಹೋತ್ಸವದ ಅಂಗವಾಗಿ ಮಂಗಳವಾರ ಚೌಡೇಶ್ವರಿ ದೇವಿಗೆ ಉಡಿ ತುಂಬುವ ಕಾರ್ಯ, ಎಡೆ ಜಾತ್ರೆ ಹಾಗೂ ಸಂಜೆ ರಾಜಬೀದಿಗಳಲ್ಲಿ ಮೆರವಣಿಗೆ ನಡೆಯಿತು. ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ದೂಡಾ ಮಾಜಿ ಅಧ್ಯಕ್ಷ ಮಾಲತೇಶ ರಾವ್ ಜಾಧವ್ ಇತರರು ದೇವಸ್ಥಾನಕ್ಕೆ ಭೇಟಿ ನೀಡಿ, ದೇವಿ ದರ್ಶನ ಪಡೆದರು (ಒಳಚಿತ್ರ)

## ಮಾರ್ಕೆಟಿಂಗ್ ಸೊಸೈಟಿ ಪ್ರತಿನಿಧಿ ಆಯ್ಕೆಗೆ ಉಚ್ಚ ನ್ಯಾಯಾಲಯದ ತಡೆಯಾಜ್ಞೆ

ರಾಣೇಬೆನ್ನೂರು, ಮಾ. 23 - ಎಪಿಎಂಸಿಗೆ ಕಳಿಸುವ ತನ್ನ ಪ್ರತಿನಿಧಿ ಆಯ್ಕೆಗೆ ಇಂದು ನಡೆಯಲಿದ್ದ ಮಾರುಕಟ್ಟೆ ಕ್ಷೇತ್ರದ ಚುನಾವಣಾ ಪ್ರಕ್ರಿಯೆಯನ್ನು ದಿನಾಂಕ 26 ರವರೆಗೆ ತಡೆಹಿಡಿಯುವಂತೆ ಉಚ್ಚ ನ್ಯಾಯಾಲಯ ನೀಡಿದ ಆದೇಶವನ್ನು ಪಾಲನೆ ಮಾಡಲು ಇಂದಿನ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಯಿತು ಎಂದು ಚುನಾವಣಾಧಿಕಾರಿ ತಹಸೀಲ್ದಾರ್ ಶಂಕರ್ ಹೇಳಿದರು. ಸಭೆ ವೇಳಾಪಟ್ಟಿಯಂತೆ ಇಂದು ಮಧ್ಯಾಹ್ನ 1 ಗಂಟೆಯೊಳಗೆ ಅವಶ್ಯಬಿದ್ದರೆ ಮತದಾನ ನಡೆಸಿ ಪ್ರತಿನಿಧಿಯ ಹೆಸರು ಪ್ರಕಟಿಸಲಾಗುತ್ತಿತ್ತು. ಆದರೆ ಬೆಳಿಗ್ಗೆ 11-30ರ ಸಮಯಕ್ಕೆ ಬಿಜೆಪಿ ನಿರ್ದೇಶಕ ಪಿ. ಆರ್. ಬಸೆನಾಯ್ಕ ಉಚ್ಚ ನ್ಯಾಯಾಲಯದ ತಡೆ ಆದೇಶದ ಪ್ರತಿ ಸಲ್ಲಿಸಿದರೆಂದು ಹೇಳಲಾಗಿದೆ.

ರೈತರು, ವರ್ತಕರು, ಸಂಸ್ಕರಣ ಘಟಕ, ಮಾರುಕಟ್ಟೆ ಕ್ಷೇತ್ರ ಮತ್ತು ಸರ್ಕಾರದ ಮೂವರು ನಾಮಕರಣ ಸದಸ್ಯರು ಸೇರಿದಂತೆ ಒಟ್ಟು 17 ನಿರ್ದೇಶಕರಲ್ಲಿ 9 ಕಾಂಗ್ರೆಸ್ ನವರು 8 ಬಿಜೆಪಿಯವರಿದ್ದು, ಇದುವರೆಗೂ ಕಾಂಗ್ರೆಸ್ ಆಡಳಿತ ನಡೆಸುತ್ತಾ ಬಂದಿದೆ. ಓರ್ವರ ನಿಧನ ಹಾಗೂ ಓರ್ವರ ನಿವೃತ್ತಿಯಿಂದಾಗಿ ಕಾಂಗ್ರೆಸ್ ಬಲ ಏಳ ಕ್ಕಿಳಿದಿದೆಯಾದರೂ ಸಹ ಅಧಿಕಾರ ಕೈ ಬಿಡಲಾರದು ಎಂದು ಸಹ ಹೇಳಲಾಗುತ್ತಿದೆ. ಪ್ರಸಕ್ತ ನಿರ್ದೇಶಕ ಮಂಡಳಿಯ ಅವಧಿ ಕೇವಲ 11 ತಿಂಗಳುಗಳಿದ್ದು, ಈ ಅವಧಿಯಲ್ಲಿ ಇಂದು ನಡೆಯಬೇಕಾಗಿದ್ದ ಚುನಾವಣೆ ಎಂದೇ ನಡೆದರೂ ಸಹ ಈ ಸ್ಥಾನ ಕಾಂಗ್ರೆಸ್ ಪಾಲಾಗಲಿದೆ ಎಂದು ಅಧ್ಯಕ್ಷ ಬಸವರಾಜ ಸವಣೂರ, ನಿರ್ದೇಶಕರಾದ ಮಂಜನಗೌಡ ಪಾಟೀಲ, ಜೆಟ್ಟೆಪ್ಪ ಕರೇಗೌಡ್ರ, ಶರಶ್ಚಂದ್ರ ದೊಡ್ಮನಿ ಪ್ರತಿಕ್ರಿಯಿಸಿದರು.

**ಆಪರೇಷನ್ ಕಮಲ ಹುನ್ನಾರ :** ಸಂಪೂರ್ಣ ಕಾಂಗ್ರೆಸ್ ಮಯವಾಗಿರುವ ಟಿಎಪಿಸಿಎಂಎಸ್ ನಲ್ಲಿ ಆಪರೇಷನ್ ಕಮಲ ಮಾಡಿ ಚುನಾವಣೆ ನಡೆಸಿ, ಆ ಸ್ಥಾನವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಪ್ರಯತ್ನ ನಡೆಸಿ, ನ್ಯಾಯಾಲಯದ ತಡೆ ತರಲು ಪೂರಕ ವ್ಯವಸ್ಥೆಯನ್ನು ಬಿಜೆಪಿ ಮಾಡಿಕೊಂಡಿದೆ ಎನ್ನುವ ಹಾಗೂ ಇತ್ತೀಚೆಗೆ ನಡೆದ ಅಧ್ಯಕ್ಷರ ಆಯ್ಕೆ ಸಂದರ್ಭದಲ್ಲೂ ಅಧಿಕಾರ ಗಿಟ್ಟಿಸಲು ನಡೆಸಿದ ಬಿಜೆಪಿ ಹುನ್ನಾರ ಫಲಿಸಲಿಲ್ಲ ಎನ್ನುವ ಮಾತುಗಳು ಕೇಳಿಬಂದವು.

## ಎಆರ್‌ಎಸ್‌ಐ ಅಜ್ಜಯ್ಯ ಅವರಿಗೆ ಮುಖ್ಯಮಂತ್ರಿ ಪದಕ



ದಾವಣಗೆರೆ, ಮಾ.23- ಪೊಲೀಸ್ ಇಲಾಖೆಯಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ್ದಕ್ಕೆ 2020ನೇ ಸಾಲಿನ ಮುಖ್ಯಮಂತ್ರಿ ಪದಕಕ್ಕೆ ಜಿಲ್ಲಾ ಪೊಲೀಸ್ ಘಟಕದ ಜಿಲ್ಲಾ ಸಶಸ್ತ್ರ ಮೀಸಲು ಪಡೆಯ, ಜಿಲ್ಲಾ ಪೊಲೀಸ್ ಕಚೇರಿಯ ಎಆರ್‌ಎಸ್‌ಐ ಬಿ.ಕೆ. ಅಜ್ಜಯ್ಯ ಭಾಜನರಾಗಿದ್ದಾರೆ. ಅಜ್ಜಯ್ಯ ಅವರ ಆಯ್ಕೆಗೆ ಜಿಲ್ಲಾ ಪೊಲೀಸ್ ಪರವಾಗಿ ಎಸ್ಪಿ ಹನುಮಂತರಾಯ ಅಭಿನಂದಿಸಿದ್ದಾರೆ. ರಾಜ್ಯದ ವಿವಿಧೆಡೆ ಕರ್ತವ್ಯ ನಿರ್ವಹಿಸುತ್ತಿರುವ ಡಿವೈಎಸ್ಪಿ, ಪಿಐ, ಪಿಎಸ್ ಐ, ಎಎಸ್‌ಐ, ಹೆಚ್ ಸಿ, ಕಾನ್ಸ್ ಟೇಬಲ್ ಸೇರಿದಂತೆ ಒಟ್ಟು 115 ಮಂದಿ ಮುಖ್ಯಮಂತ್ರಿ ಪದಕಕ್ಕೆ ಆಯ್ಕೆಯಾಗಿದ್ದಾರೆ.







# ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 20.03.2021ರಂದು ನಿಧನರಾದ
ಈಶ್ವರ್ ರೇಡಿಯೋ ಮಾಲೀಕರಾದ
ದಿ|| ಎ.ಪಿ. ಪರಮೇಶ್ವರಪ್ಪನವರ
ತೃತೀಯ ಪುತ್ರ
**ಶ್ರೀ ಎ.ಪಿ. ದಿವಾಕರ್**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲೆಂದು ಭಗವಂತನಲ್ಲಿ ಪ್ರಾರ್ಥನೆ.

✦ ಟಿ.ಎಂ. ದಯಾನಂದ್ ✦ ಬಿ.ಎಸ್. ಶಿವಯೋಗಿ ಪ್ರಸಾದ್
✦ ಭುವನೇಶ್ವರ ಪ್ರಸಾದ್ ಎ.ಓ. ✦ ಎಂ. ಮಂಜುನಾಥ್ ✦ ಮಧು ವಿ.ಎಸ್.
✦ ಸುನೀಲ್ ಜಾಧವ್ ✦ ಉಮೇಶ್ ಎಂ.ಬಿ. ✦ ಬಸವರಾಜ್ ಕೆ.
✦ ಕರಿಬಸಪ್ಪ ✦ ಜಬಿವುಲ್ಲಾ ಪಿ. ✦ ತಿಪ್ಪೇಸ್ವಾಮಿ ಬಿ.ವಿ. ✦ ರಾಜೇಶ್ ಎಲ್.ವಿ.
✦ ಮಲ್ಲಿಕಾರ್ಜುನ್ ಎಸ್.ಪಿ. ✦ ಉಮೇಶ್ ಎನ್.ಜಿ.

Vone Fibernet
ವಿಕ್ಟರಿ ಡಿಜಿಟಲ್ ನೆಟ್‌ವರ್ಕ್ಸ್ ಪ್ರೈವೇಟ್, ಲಿಮಿಟೆಡ್, ಪಿ.ಬಿ. ರಸ್ತೆ, ದಾವಣಗೆರೆ.



# ಹುಟ್ಟುಹಬ್ಬದ ಶುಭಾಶಯಗಳು



ದಿನಾಂಕ 24.03.2021ರಂದು ತಮ್ಮ ಹುಟ್ಟುಹಬ್ಬದ ಸಂಭ್ರಮದಲ್ಲಿರುವ ಉಷಾ ಮಿಲ್ಟ್ರಿ ಹೋಟೆಲ್ ಮಾಲೀಕರಾದ
**ಶ್ರೀ ವಿನಯ್ ಕುಮಾರ್ ಪಿಸಾಳೆ**
ಅವರಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳು.

✦ ತಾಯಿ-ತಂದೆ : ಶ್ರೀಮತಿ ರೇಣುಕಾ ಬಾಯಿ ಮತ್ತು ಪಿ.ಜಿ. ನಾಗರಾಜ್ ಪಿಸಾಳೆ
✦ ಪತ್ನಿ : ಶ್ರೀಮತಿ ಕೆ. ದೀಪಾ ವಿನಯ್‌ಕುಮಾರ್
✦ ಸ್ವಾನಿ ವಿ. ಪಿಸಾಳೆ ✦ ಶ್ರೀಯನ್ ವಿ. ಪಿಸಾಳೆ
✦ ನಿಶಾ ಪಿಸಾಳೆ ✦ ಉಷಾ ಪಿಸಾಳೆ

ಸಿಬ್ಬಂದಿ ವರ್ಗದವರು
**ಉಷಾ ಮಿಲ್ಟ್ರಿ ಹೋಟೆಲ್**
ಪಿಸಾಳೆ ಕಾಂಪೌಂಡ್ ಹತ್ತಿರ, ಪಿ.ಬಿ. ರಸ್ತೆ, ದಾವಣಗೆರೆ.








# JOB VACANCY


**One of the leading Gold Showroom in Davanagere Requires the following personnel**

1. Sales Executive
2. Customer Relationship Manager

*Who can Apply:*
Any Graduate with sales experience or Freshers can also welcome

Interested candidates can email their profiles to hr@rhr.group Or
**Contact : 93803 50327**


# ಅಲ್‌ಹಾಜ್ ಹೆಚ್. ಕೆ. ಅಬ್ದುಲ್ ಜಬ್ಬಾರ್ ಸಾಹೇಬ್ ನಿಧನ



ದಾವಣಗೆರೆ ಕೆ.ಟಿ.ಜೆ.ನಗರ 3ನೇ ಮೇನ್, 8ನೇ ಕ್ರಾಸ್ ವಾಸಿ ಕರ್ನಾಟಕದ ಮಧ್ಯಭಾಗ ದಾವಣಗೆರೆಗೆ ಶಾಮಿಯಾನ ಪರಿಚಯಿಸಿ ಸತತ 5 ದಶಕಗಳ ಕಾಲ ಸ್ಟಾರ್ ಶಾಮಿಯಾನ ಶಿರೋನಾಮದಡಿ ಅತ್ಯುತ್ತಮ ಸೇವೆಯನ್ನು ನೀಡಿದಂತಹ ಮತ್ತು ಅಂಜುಂ ಎಜುಕೇಶನ್ ಸೊಸೈಟಿ (ರಿ.), ದಾವಣಗೆರೆ ಎಂಬ ವಿದ್ಯಾಸಂಸ್ಥೆಯನ್ನು 1980ರಲ್ಲಿ ಸ್ಥಾಪಿಸಿ, ನರ್ಸರಿಯಿಂದ ಪದವಿ ತರಗತಿವರೆಗೆ ಶಾಲಾ-ಕಾಲೇಜುಗಳನ್ನು ಪ್ರಾರಂಭಿಸಿ, ಸತತ 40 ವರ್ಷಗಳಿಂದ ಶೈಕ್ಷಣಿಕ ಸೇವೆ ನೀಡುತ್ತಿದ್ದ ಶಿಕ್ಷಣ ಪ್ರೇಮಿ, ಬಡವರ ಬಂಧು, ಖ್ಯಾತ ಕೈಗಾರಿಕೋದ್ಯಮಿ, ಪ್ರಖ್ಯಾತ ವಾಣಿಜ್ಯೋದ್ಯಮಿ ಹಾಗೂ ಅನೇಕ ಕಲ್ಯಾಣ ಮಂಟಪಗಳನ್ನು ದಾವಣಗೆರೆಗೆ ಪರಿಚಯಿಸಿದ ಸಮಾಜ ಸೇವಕರಾದ

**ಶ್ರೀ ಅಲ್‌ಹಾಜ್ ಹೆಚ್.ಕೆ.ಅಬ್ದುಲ್ ಜಬ್ಬಾರ್ ಸಾಹೇಬ್ ಅವರು**

ದಿನಾಂಕ : 23-3-21ರ ಮಂಗಳವಾರ ಬೆಳಿಗ್ಗೆ 10-30ಕ್ಕೆ ತೀವ್ರ ಹೃದಯಾಘಾತದಿಂದ ನಿಧನರಾಗಿರುತ್ತಾರೆ.. ಪತ್ನಿ, ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂದು- ಬಳಗವನ್ನು ಅಗಲಿರುವ ಶ್ರೀಯುತರ ಅಂತ್ಯಕ್ರಿಯೆಯು ದಿ : 23-3-2021ರ ಮಂಗಳವಾರ ರಾತ್ರಿ 8 ಗಂಟೆಗೆ ನಗರದ ಪಿ.ಬಿ.ರಸ್ತೆಯಲ್ಲಿರುವ ಹಳೇ ಖಬರಸ್ತಾನದಲ್ಲಿ ನೆರವೇರಿಸಲಾಯಿತು.

ದುಃಖತಪ್ತರು : ಕುಟುಂಬ ವರ್ಗ
ಅಂಜುಂ ವಿದ್ಯಾಸಂಸ್ಥೆಯ ಸಿಬ್ಬಂದಿ ವರ್ಗ
ಸ್ಟಾರ್, ರಾಯಲ್, ಪ್ಯಾರಡೈಸ್, ಎ.ಕೆ.ಎಸ್.ಕಲ್ಯಾಣ ಮಂಟಪಗಳ ಸಿಬ್ಬಂದಿ ವರ್ಗ
ಸ್ಟಾರ್ ಶಾಮಿಯಾನ ಹಾಗೂ ಮಾಡರ್ನ್ ರೈಸ್ ಮಿಲ್ ಸಿಬ್ಬಂದಿ ವರ್ಗ
ಮತ್ತು ಬಂಧು- ಮಿತ್ರರು.





# ವಾಣಿ ಹೋಂಡಾ

**Head Office :** ಪಿ.ಬಿ.ರೋಡ್, ದಾವಣಗೆರೆ, ಫೋನ್: 08192-231677, ಮೊ: 9740833377
**(Authorised Service Center)** ನಂದಿ ಪೆಟ್ರೋಲ್ ಬಂಕ್ ಎದುರು, ಪಿ.ಬಿ.ರಸ್ತೆ, ದಾವಣಗೆರೆ, ಫೋನ್: 97384 46062.
**Sub Dealer :** ವಾಣಿ ಹೋಂಡಾ, ಹರಿಹರ ಮೊ: 9886810179.
**Branches :** ಹೊನ್ನಾಳಿ ಮೊ: 9845437634, ಚನ್ನಗಿರಿ ಮೊ: 9844757555, ಮಲೇಬೆನ್ನೂರು (ASC) ಮೊ: 9886618484, ತ್ಯಾವಣಗಿ (ASC) ಮೊ: 8073400724, ಸಾಸ್ವೆಹಳ್ಳಿ (FO) ಮೊ: 9740894560


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte